
# ಅಪರಂಜಿ

ತಿಳಿನಗೆಯ ಕಾರಂಜಿ

ಆಗಸ್ಟ್ 2017

ಗ್ಯಾಸ್ ಸಬ್ಸಿಡಿ ಕೈ ಬಿಡಿ
– ನರೇಂದ್ರ ಮೋದಿ

ರೈಲ್ವೆ ಸಬ್ಸಿಡಿ ಕೈ ಬಿಡಿ
– ಪ್ರಧಾನಿ ಕರೆ




'ಲಂಚ ಕೈ ಬಿಡಿ' ಎಂದೂ ಕರೆ ಕೊಡಬಾರದೆ, ಸರ್ಕಾರಿ ನೌಕರರಿಗೆ?

**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಎಂ. ಶಿವಕುಮಾರ್

**ಟ್ರಸ್ಟಿಗಳು**

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 34**
**ಸಂಚಿಕೆ - 11**
**ಆಗಸ್ಟ್ - 2017**

## *ಈ ಸಂಚಿಕೆಯಲ್ಲಿ.....*

| | | |
|---|---|---|
| ಅಪರಂಜಿ ಕಿಡಿ | *ಪ್ರಕಾಶ್* | 2 |
| ನಮ್ಮ ನಿಮ್ಮಲ್ಲಿ | *ಶಿವಕುಮಾರ್* | 3 |
| ರನ್ನನ ಕೌರವ..... | *ಎಸ್. ಆರ್. ವಿಜಯಶಂಕರ್* | 4 |
| ಹಸಿರೂರಿನ ದ್ವಂದ್ವಗಳು | *ಪಾಲಹಳ್ಳಿ ವಿಶ್ವನಾಥ್* | 9 |
| ಬರಗಾಲದಲ್ಲೂ.... | *ಎಚ್. ಗೋಪಾಲಕೃಷ್ಣ* | 15 |
| ವೀಕೆಂಡ್ ವಿತ್..... | *ಸಿ. ಆರ್. ಸತ್ಯ* | 19 |
| ಇಂದಿರಾ ಕ್ಯಾಂಟೀನ್ | *ಎಂ. ಎಸ್. ನರಸಿಂಹಮೂರ್ತಿ* | 24 |
| ವ್ಯಂಗ್ಯ ಮೆಲುಕು | *ಪ್ರಕಾಶ್ ಶೆಟ್ಟಿ* | 27 |
| ತುಂತುರು | *ದಂನಆ* | 28 |
| ರಿಜಿಸ್ಟರ್ ಮ್ಯಾರೇಜ್ | *ನುಗ್ಗೆಹಳ್ಳಿ ಪಂಕಜ* | 30 |
| ಮೂಗಿನ ತುದೀಲಿ... | *ಇ. ಆರ್. ರಾಮಚಂದ್ರನ್* | 35 |
| ಅದು-ಇದುಗಳ ಸುತ್ತ... | *ಎಚ್. ಶಾಂತರಾಜ ಐತಾಳ್* | 38 |

**ಮುಖಪುಟ ವ್ಯಂಗ್ಯಚಿತ್ರ - ಜಿ.ಎಸ್. ನಾಗನಾಥ್**

ಪ್ರಕಾಶಕರು *:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanji42@hotmail.com

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



''ಕನ್ನಡ - ತೆಲುಗು ಭಾಷೆಗಳಿಗೆ ಏಕ ಲಿಪಿ ಕಂಡು ಹಿಡಿಯಲಿ'' - ಪತ್ರಿಕೆ

***● ಏಕೆ ?!!***

★★★

ನ್ಯಾಯಾಂಗ ನಿಂದನೆ; ಮಲ್ಯಗೆ ಇಂದು ಶಿಕ್ಷೆ ಪ್ರಕಟ - ಸುದ್ದಿ

***● ಅರಣ್ಯ ರೋದನ ?!***

★★★

ಗುರು ಪೂರ್ಣಿಮೆಯಂದು, ಗೂಗ್ಲೇಶ್ವರನಿಗೆ ಅಪರಂಜಿಯ ನಮನಗಳು !!

★★★

ಇನ್ನು ಮುಂದೆ ಜಿ-20 ಬದಲು ಜಿ-19 ಎಂದು ಮಾಡುತ್ತಾರೆ ಎಂಬುದು ಖಚಿತವಲ್ಲವಂತೆ !!

★★★

ತೆರಿಗೆ ಅಧಿಕಾರಿಗಳ ಬಗ್ಗೆ ಹೆದರಿಕೆ ಬೇಡ - ಪತ್ರಿಕೆ

***● ಇದು ಆಶ್ವಾಸನೆಯೋ, ಬೆದರಿಕೆಯೋ ?!***

★★★

''ಇಂದು ಭಾರತ ಕ್ರಿಕೆಟ್ ತಂಡದ ಕೋಚ್ ಆಯ್ಕೆ''

- ಕ್ರೀಡಾ ಸುದ್ದಿ

***● ಆಟಕ್ಕಿಂತ ಇದೇ ಕುತೂಹಲಕಾರಿ ?!***

★★★

ಗೃಹಸಚಿವ ಸ್ಥಾನ ನೀಡಿದರೆ ಬೇಡ ಎನ್ನಲಾರೆ - ಹೇಳಿಕೆ

***● ಅವರಿಗೆ ಸ್ವಗೃಹ ಬೇಜಾರಾಗಿದೆಯೇನೋ ?!***

★★★

# "ನಮ್ಮ ನಿಮ್ಮಲ್ಲಿ"

ಹಲವು ತಿಂಗಳುಗಳಿಂದ ನಮ್ಮ ಬಳಗದ ಇಬ್ಬರು ಲೇಖಕರುಗಳಿಂದ ಸರಣಿ ಲೇಖನಗಳು ಪ್ರಕಟವಾಗುತ್ತಿರುವುದನ್ನು ನೀವುಗಳು ಗಮನಿಸಿರಬಹುದು. ಮೊದಲಿಗೆ ನಮ್ಮ ನಾಡಿನ ಖ್ಯಾತ ವಿಮರ್ಶಕರಾದ ಎಸ್.ಆರ್. ವಿಜಯಶಂಕರ್ ಅವರು ನಮ್ಮ ಪ್ರಾಚೀನ ಕವಿಗಳ ಕೃತಿಗಳನ್ನು ಆಧರಿಸಿ ಬಹು ಸ್ವಾರಸ್ಯಕರ ಹಾಗೂ ಬುದ್ಧಿಗೆ ಕಸರತ್ತು ಕೊಡುವಂತಹ ಹರಟೆಗಳನ್ನು ರೂಪಿಸಲು ಒಪ್ಪಿ, ಈಗಾಗಲೇ ಹಲವಾರು ಹರಟೆಗಳನ್ನು ನೀಡಿದ್ದಾರೆ. **''ವಿಮರ್ಶೆ ವಿನೋದ''** ಎಂಬ ಶೀರ್ಷಿಕೆಯಡಿಯಲ್ಲಿ **''ರನ್ನನ ಕೌರವ ಗದೆಯಲ್ಲಿ ಗಾಳಿಬೀಸಿ ಭೀಮನನ್ನು ಬದುಕಿಸಿದ್ದಾ?''** ಎಂಬ ಲೇಖನವನ್ನು ಈ ಸಂಚಿಕೆಯಲ್ಲಿ ಪ್ರಕಟಿಸಿದ್ದೇವೆ.

ಇನ್ನೊಂದು ಸರಣಿಯೆಂದರೆ ನಮ್ಮ ಪಾಲಹಳ್ಳಿ ವಿಶ್ವನಾಥ್ ಅವರದ್ದು. ಖ್ಯಾತ ನಗೆಸಾಹಿತಿ ಪಿ.ಜಿ. ವುಡ್‌ಹೌಸ್ ಅವರ ಲೇಖನಗಳನ್ನು ನಮ್ಮ ಪರಿಸರಕ್ಕೆ ಹೊಂದಿಸಿ ಸೃಷ್ಟಿಸಿದ ಲೇಖನ ಸರಣಿ ಇದು. ಈ ಸಂಚಿಕೆಯಲ್ಲಿ ಇವರ **''ಹಸಿರೂರಿನ ದ್ವಂದ್ವಗಳು''** ಎಂಬ ಲೇಖನ ಅಲ್ಪಸಲ್ಪ ವುಡ್‌ಹೌಸ್ ಎಂಬ ಶೀರ್ಷಿಕೆಯಡಿಯಲ್ಲಿ ಕಾಣಬಹುದು.

ಅಪರಂಜಿಯ ಮೂಲ ಉದ್ದೇಶವೆಂದರೆ ವಿನೋದ ಹಾಗೂ ವಿಚಾರಗಳನ್ನು ಒಂದು ಹದವಾದ ಪ್ರಮಾಣದಲ್ಲಿ ಬೆರೆಸಿ ಓದುಗರಿಗೆ ಉಣಬಡಿಸುವುದು. ಈ ಕಾರ್ಯದಲ್ಲಿ ನಾವು ಎಷ್ಟು ಯಶಸ್ಸನ್ನು ಪಡೆದಿದ್ದೇವೆ ಎಂಬುದು ನಿಮ್ಮ ನಿರ್ಧಾರ.

**ಶಿವಕುಮಾರ್**

## ಪ್ರೊ. ಅ.ರಾ. ಮಿತ್ರ ಅವರಿಗೆ ಮಾಸ್ತಿ ಪ್ರಶಸ್ತಿ



ಕೊರವಂಜಿ ಅಪರಂಜಿ ಟ್ರಸ್ಟ್‌ನ ಹಿತೈಷಿಗಳೂ, ಅಪರಂಜಿಯ ಹಿರಿಯ ಬರಹಗಾರರೂ, ರಾಶಿಯವರ ಅಭಿಮಾನಿಗಳೂ, ನಮ್ಮ ಹಾಸ್ಯೋತ್ಸವದ ರೂವಾರಿಗಳೂ ಮತ್ತು ಕನ್ನಡ ಸಾರಸ್ವತ ಲೋಕದ ವಿದ್ವಾಂಸರೂ ಆದ ನಮ್ಮೆಲ್ಲರ ನೆಚ್ಚಿನ ಪ್ರೊ. ಅ.ರಾ. ಮಿತ್ರ ಅವರಿಗೆ ಈ ಬಾರಿಯ ಮಾಸ್ತಿ ಪ್ರಶಸ್ತಿ ಲಭಿಸಿದೆ. ಇವರು ಬರೆದಿರುವ **ಕುಮಾರವ್ಯಾಸ ಭಾರತ ಕಥಾ ಮಿತ್ರ** ಮತ್ತು **ಮಹಾಭಾರತ ಪಾತ್ರ ಸಂಗತಿಗಳು** ಅನನ್ಯ ಕೃತಿ. ಇವು ಅನೇಕ ಮುದ್ರಣಗಳನ್ನು ಕಂಡು ಮೆಚ್ಚುಗೆ ಗಳಿಸಿದೆ. ಪ್ರೊ. ಮಿತ್ರ ಅವರಿಗೆ ಮಾಸ್ತಿ ಪ್ರಶಸ್ತಿ ಬಂದಿರುವ ಈ ಸಂದರ್ಭದಲ್ಲಿ ಅಪರಂಜಿ ಬಳಗದ ಎಲ್ಲ ಬರಹಗಾರರೂ ಮತ್ತು ಓದುಗರ ಪರವಾಗಿ ಅಪರಂಜಿಯು ಅಭಿನಂದನೆಗಳು.

# ರನ್ನನ ಕೌರವ ಗದೆಯಲ್ಲಿ ಗಾಳಿ ಬೀಸಿ ಭೀಮನನ್ನು ಬದುಕಿಸಿದ್ದಾ?

**- ಎಸ್.ಆರ್. ವಿಜಯಶಂಕರ್**

ಲಯನಾಟ್ಯ ವಿಶಾರದ, ಶ್ರುತಿವಾಣಿ ನಿಪುಣ, ಮಿತಭಾಷಾ ಪ್ರವೀಣ, ತೆಂಕು ತಿಟ್ಟು ಯಕ್ಷಗಾನದ ಮೇರು ಕಲಾವಿದ ಸೂರಿಕುಮೇರಿ ಕೆ ಗೋವಿಂದಭಟ್ಟರಿಗೆ ಈ ಸಲದ ಕೇಂದ್ರ ಸಂಗೀತನಾಟಕ ಅಕಾಡೆಮಿಯ ಪ್ರಶಸ್ತಿ ಘೋಷಣೆಯ ಸುದ್ದಿ ಓದಿ, ಅದ್ರಾಮ ಆನಂದ ತುಂದಿಲನಾಗಿದ್ದನೆಂದು ಅರಿತಿದ್ದ ಪೊಮ್ಮ ಅವನ ಕಾಲೆಳೆಯಲು ತಯಾರಾಗಿ ಬಂದಿದ್ದ.

''ಏನಂತಾರೆ ಸಾವುಕಾರ್ರು. ಯಕ್ಷಗಾನ ರೈಸುತ್ತಾ ಇದೆ'' ಎಂದ.

''ಗೋವಿಂದಣ್ಣನ ಗದಾಯುದ್ಧದ ಕೌರವ ನೋಡುವಾ ಅಂತ ಆಗ್ತಾ ಇದೆ ಮಾರಾಯ್ರೇ. ನಮ್ಮ ಮಾಣಿ ವಕೀಲ್ರು ಸಿವಿಲ್ ಕೋರ್ಟು ಮೈದಾನದಲ್ಲೇನಾದ್ರೂ ಕಳೆದ ವರ್ಷದ ಹಾಗೆ ಆಟ ಆಡಿಸ್ತಾರಾ?'' ಎಂದ ಅದ್ರಾಮ.

''ನೀನು ನಮ್ಮ ಮಂಗಳೂರು ಹತ್ತಿರದ ಮಾಣಿ ಊರಿಂದ ಬಂದ ಪೈಗಳನ್ನು ಹೇಳೋದಾ? ಎಪ್ಪತ್ತಏಳು ವರುಷ ದಾಟಿದ ಗೋವಿಂದಣ್ಣನನ್ನು ಅವರು ಕರೆಸಿ ವೇಷ ಹಾಕ್ಸೋದು ಹೌದಾ ಅದ್ರಾಮಣ್ಣ?'' ಎಂದು ಕೊಂಕು ನುಡಿದ ಪೊಮ್ಮ.

''ನೀನು ಎಂತದು ಹೇಳೋದು ಮಾರಾಯ? ಭೀಮ ಪೆಟ್ಟು ತಿಂದು ಬಿದ್ದಾಗ ಗೋವಿಂದಣ್ಣನ ಕೌರವನ ಕುಣಿತ ಎಂತದು? ಆಗಿನ ನಾಟ್ಯದ ಲಯ, ಹಾವಭಾವ, ಸಂತೋಷ ಸಂಭ್ರಮದ ನಡಿಗೆ ಮಾತು ಅಂದ್ರೆ ಅದು. ಈಗ ನೋಡಿದ್ರೂ ಎಪ್ಪತ್ತೇಳು ವರುಷದ ಕಲಾವಿದ ಅಂತ ಯಾರಾದ್ರೂ ಹೇಳ್ಯಾರಾ?'' ಎಂದು ಅದ್ರಾಮ.

''ನಿನಗೆ ಯಕ್ಷಗಾನದ ಹುಚ್ಚು, ನನಗೆ ನಮ್ಮ ರನ್ನ ಕವಿಯ 'ಸಾಹಸ ಭೀಮ ವಿಜಯ'ದ ಗದಾಯುದ್ಧ ಸಾಕು. ಮೊನ್ನೆ ತಾನೆ ತೀ.ನಂ. ಶ್ರೀಕಂಠಯ್ಯನವರು ಸಂಪಾದಿಸಿದ ರನ್ನಕವಿಯ ''ಗದಾಯುದ್ಧ ಸಂಗ್ರಹಂ''ನ ಹದಿನೇಳನೇ ಮುದ್ರಣ ಕೊಂಡುಕೊಳ್ಳಲು ಸಿಕ್ಕಿದೆ. - ''ನೀರೊಳಿಗಿರ್ದುಂ ಬೆಮರ್ತಸುರಗ ಪತಾಕಂ'' ಎಂಬ ರನ್ನನನ್ನು ಓದಿದರೆ ಎಷ್ಟು ನಾಟಕೀಯವಾಗಿ ಹೇಳ್ತಾನೆ, ಏನು ಕತೆ'' ಎಂದ ಪೊಮ್ಮ.

ಏನು, ತೀ.ನಂ.ಶ್ರೀ. ಪುಸ್ತಕವ? ಯಾವುದದು? ಎಂದು ಕೇಳಿದಾಗ ಪೊಮ್ಮ ಹೇಳಿದ. ''ಎಲ್ಲಕ್ಕಿಂತ ಮೊದಲೇ ನೀನೇ ಬಾಯಿ ಹಾಕಿದಿ. ಒಳ್ಳೆ ಕತೆ ಬಿ.ಎಂ.ಶ್ರೀ. ಹೇಳಿದ ಹಾಗಾಯಿತು''

ನಾನು ಅದ್ರಾಮ ಇಬ್ಬರೂ ಮುಖ ಮುಖ ನೋಡುತ್ತಾ ಬಿ.ಎಂ.ಶ್ರೀ. ಎಂತದು ಹೇಳಿದ್ದು ಎಂದು ಕೇಳಿದ್ದು ಒಮ್ಮೆಗೇ ಆಯಿತು.

''ನೋಡಿ, ಅವಸರ. ನಿಮಗೆ ಗೊತ್ತಿಲ್ವಾ? ಗ್ರೀಕರ ದುರಂತ ನಾಯಕ ಕಲ್ಪನೆಯನ್ನು ಕನಡಕ್ಕೆ ತಂದ ಪ್ರೊ. ಬಿ.ಎಂ. ಶ್ರೀಕಂಠಯ್ಯನವರು ರನ್ನನ ಗದಾಯುದ್ಧವನ್ನು ನಾಟಕ ರೂಪಕ್ಕೆ ತಿರುಗಿಸಿ ಮಹಾರಾಜಾ ಕಾಲೇಜಿನ ರಂಗಸ್ಥಳಕ್ಕೆ ಸಜ್ಜುಗೊಳಿಸುತ್ತಿದ್ದರಂತೆ. ಅದಾಗಲೇ ಸೀನಿಯರ್ ಕ್ಲಾಸಿನ ಸಮರ್ಥ ನಟರು ರಿಹರ್ಸಲ್ ಗೆ ಬರುತ್ತಿದ್ದರು. ನಟರು ರಿಹರ್ಸಲ್ ಗೆ ಬರುವ ಮೊದಲೇ ಭಾನುವಾರ ಬೆಳಗ್ಗೆ ತೀ.ನಂ.ಶ್ರೀ. ಹಾಗೂ ಅವರ ಗೆಳೆಯ ಎನ್. ಶಿವರಾಮ ಶಾಸ್ತ್ರಿಗಳು ರಿಹರ್ಸಲ್ ನೋಡಲು ಹೋಗಿ ಕುಳಿತಾಗ ಅವರನ್ನು ನೋಡಿ ''ಜಾತ್ರೆಗೆ ಮುಂಚೆ ಕಳ್ಳರು ನೆರೆದರು'' ಎಂದು ಹೇಳಿ ನಗಿಸಿದರಂತೆ.

ಕತೆ ಹೀಗೆ ಇರುವುದಾದರೆ ನಾನು ನಡುವೆ ಬಾಯಿ ಹಾಕುವುದಿಲ್ಲಪ್ಪ ಎಂದು ತೆಪ್ಪಗೆ ಕೂತೆ. ಆದರೂ ಕಂಟ್ರೋಲ್ ಮಾಡಿಕೊಳ್ಳಲು ಸಾಧ್ಯವಾಗದೆ ಈ ಕಳ್ಳರ ಸಹವಾಸ ನನಗೆ ಬೇಡ ಎಂದೆ. ''ಜಾತ್ರೆಗೆ ಮುಂಚೆ ಕಳ್ಳರು ನೆರೆದರು'' ಎಂದು ಹೇಳಿದ್ದು ನಿನಗೆ. ನಾವು ಹೇಗೋ ಕಳ್ಳರಾಗುವುದು ಅಪ್ಪಣ್ಣ ಎಂದು ತಕರಾರು ತೆಗೆದ ಪೊಮ್ಮ.

ನಾನು ನಿನ್ನನ್ನಲ್ಲ ಹೇಳಿದ್ದು. ಕವಿ ಚಕ್ರವರ್ತಿ ರನ್ನನನ್ನು ಎಂದು ನಾನೂ ಚಿತಾವಣೆ ಮಾಡಿದೆ. ''ವಾಗ್ದೇವಿಯ ಭಂಡಾರ ಮುದ್ರೆಯನೊಡೆದಂ' ಎಂದದ್ದು ಕವಿ ರನ್ನ. ವಾಗ್ದೇವಿಯ ಭಂಡಾರಕ್ಕೆ ಮುದ್ರೆ ಹಾಕುವುದು ಯಾಕೆ? ಅದನ್ನು ಒಡೆದು ತೆಗೆದವ ಕಳ್ಳ ಅಲ್ವಾ? ಎಂದೆ ನಾನು ಅಯ್ಯೋ ಮಾರಾಯ. ವಾಗ್ದೇವಿ ಅಂದರೆ ಶಾರದಾ ದೇವಿ. ವಿದ್ಯೆಯ ಅಧಿದೇವತೆ ಅಲ್ವೇನೋ? ಸಾರಸ್ವತಮೆನಿಪ ಕವಿತೆಯೊಳ್ ಅವ ಒಡೆದದ್ದು. ಸರಸ್ವತಿಯ ಭಂಡಾರವನ್ನು ರಸದಿಂದ ಕೂಡಿದ ಕವಿತೆಯಿಂದ ಒಡೆದ. ಅಂದರೇನು? ಸರಸ್ವತಿ ಎಂದರೆ ಸ,ರಸ,ವತಿ. ನವರಸಗಳನ್ನು ಉತ್ಪತ್ತಿಮಾಡಬಲ್ಲ ಶ್ರೇಷ್ಠ ಕವಿತೆಯಿಂದ ಒಡೆವಾಗ ಇವನ ಕವಿತೆ ಹೋಗಿ ಒಡೆದ ಆ ಭಂಡಾರಕ್ಕೆ ಸೇರುವುದು. ಇವನ ಕವಿತೆಯನ್ನು ಆ ಮುದ್ರಾಂಕಿತ ಭಂಡಾರದ ಭಾಗವನ್ನಾಗಿ ಮಾಡಲು ಈ ಪೊಮ್ಮನ ಹಾಗೆ ತರಲೆ ಮಾಡುವ ವಿಮರ್ಶಕರು ಬೇಕಾಗಿಲ್ಲ ಅಂತ ರನ್ನ ಹೇಳುದಲ್ವಾ ಎಂದ ಅದ್ರಾಮ.

ಇರಬಹುದೋ ಏನೋ? ಎಂದೆ ನಾನು. ರತ್ನ ಪರೀಕ್ಷಕನು ಹೇಗೆ ಸರ್ಪರಾಜನ ಹೆಡೆಯಲ್ಲಿರುವ ರತ್ನವನು ಪರೀಕ್ಷೆ ಮಾಡುವುದು ಅಸಂಭವವೋ ಹಾಗೆಯೇ ಕೃತಿರತ್ನ ಪರೀಕ್ಷಕನಂದು ರನ್ನನ ಕೃತಿ ರತ್ನವನು ಪರೀಕ್ಷಿಸುವವನಿಗೆ ಎಂಟೆದೆ ಬೇಕು ಎಂದಿದ್ದಾನಲ್ಲ ರನ್ನ. ಈ ಪೊಮ್ಮನಿಗೆ ಐವತ್ತಾರು ಇಂಚಿನ ಎದೆಯೂ ಇಲ್ಲ. ಇನ್ನು ಎಂಟು ಎದೆಗಳು ಎಲ್ಲಿಂದ ಎಂದು ಅದ್ರಾಮ ತನ್ನ ಸೇಡು ತೀರಿಸಿಕೊಂಡ.

ನೋಡು ಇವನ ತರಲೆ. ರನ್ನನೇ ಹೇಳಿದ್ದು ಶ್ರೀಯುತನೊಳುದಾರತೆ, ಅಂದರೆ ಶ್ರೀಮಂತನಲ್ಲಿ ಧನ ನೀಡುವ ಉದಾರ ಮನಸ್ಸು, ಹಾಗೂ ವಾಕ್ ಶ್ರೀ ಇರುವವನಲ್ಲಿ ಮತ್ಸರ ಇಲ್ಲದ ಗುಣ, ಈ ಅದ್ರಾಮ ಅಮತ್ಸರಿ ಅಲ್ಲ. ಎಂದು ಸಾಬೀತಾಯಿತಲ್ಲ ಎಂದು ಪ್ರತಿವರಸೆ ಹೂಡಿದ ಪೊಮ್ಮ. ಅಂದರೆ ನೀನು ಹೇಳೋದು 'ನಿರ್ಮತ್ಸರಿ' ಎಂದು ತಾನೆ ಎಂದು ಆದ್ರಾಮ ಕೇಳಿದ್ದಕ್ಕೆ ಪೊಮ್ಮ 'ಅಮತ್ಸರ' ಎಂಬುದು ರನ್ನನೇ ಹೇಳಿದ್ದು. ಹಾಗಾಗಿ ''ನಿರ್ಮತ್ಸರ'' ಬದಲು ''ಅಮತ್ಸರ'' ಎಂದೆ ಅಷ್ಟೇ. ತಪ್ಪೇನು ಎಂದು ಪುನಃ 'ಗರಂ' ಆದ.

ನಿಮ್ಮಿಬ್ಬರ ನಡುವೆ ನನ್ನ ಕತೆ, ತೊಡೆ ಮುರಿದು ಬಿದ್ದ ದುರ್ಯೋಧನನ ಬಳಿ ಇದ್ದ ರಾಜ್ಯಲಕ್ಷ್ಮಿಯ ಹಾಗೆ ಆಯಿತು. ತಾನು ಜೀವಂತ ಇರುವಾಗ ದುರ್ಯೋಧನನನ್ನು ಬಿಟ್ಟು ಹೇಗೆ ಹೋಗುತ್ತಿ ಇಲ್ಲೇ ಕುಳಿತಿರು ಎಂದು ಲಕ್ಷ್ಮಿಯನ್ನು ಬೆದರಿಸಿದ ಅಶ್ವತ್ಥಾಮ ಒಂದು ಕಡೆ. ಆಚೆ ಕಡೆ ಅಸುರಾರಿಯಾದ ಶ್ರೀಕೃಷ್ಣನ ಆಜ್ಞೆ . ''ಅತ್ತ ಪುಲಿ ಇತ್ತ ದರಿ'' ಎಂದ ರನ್ನ ನೆನಪಾಗುತ್ತಾನಪ್ಪ ಎಂದೆ ನಾನು. ನನ್ನ ಸ್ವರ ಹುಲಿಯ ಹಾಗಿದೆಯೇ ಎಂದು ಪೊಮ್ಮ ಕೇಳಿದರೆ ಇಷ್ಟು ಎತ್ತರದ ನಾನು ಕಮರಿಯ ಹಾಗೆ ತಗ್ಗಿನ ಕಂದರದ ಹಾಗೆ ಕಾಣುತ್ತೇನೋ? ದರಿ ಅಂತ ಬೇಕಾದರೆ ಯಾರಾದರೂ ಕುಳ್ಳರಿಗೆ ಹೇಳು. ನನಗೆ ಅವಮಾನ ಮಾಡಬೇಡ ಎಂದು ಪ್ರತಿಭಟಿಸಿದ ಅದ್ರಾಮ.

ಇವರನ್ನು ಹೀಗೆ ಬಿಟ್ಟರೆ ಯಾರು ಹುಲಿ ಯಾರು ದರಿ ಎಂದು ಜಗಳವಾಗುತ್ತೆಂದು ನನಗೆ ಅರ್ಥವಾಯಿತು. ತಕ್ಷಣ ಮಾತು ತಪ್ಪಿಸಲು ಹೇಳಿದೆ. ''ಎಂತಾದರೂ ಯಕ್ಷಗಾನದ ಗದಾಯುದ್ಧವೇ ಸರಿ. ಈ ಪೊಮ್ಮನ ರನ್ನ ಬರೀ ವಕೀಲ . ನಮ್ಮ ಮಾಣಿ ವಕೀಲರಿಗೆ ಜತೆ ಮಾಡಬಹುದು'' ಎಂದೆ.

''ರನ್ನ ಹೇಗೆ ವಕೀಲ?'' ಎಂದು ರೇಗಿದ ಪೊಮ್ಮ.

ಮತ್ತೆ ಇನ್ನೇನು, ಭೀಮನ ತಪ್ಪು ಏನೂ ಇಲ್ಲ ಎನ್ನುವ ಭೀಮನ ವಕೀಲನ ಹಾಗೆ ಬರೆಯುದಲ್ವಾ ಅವನು? ಗದಾಯುದ್ಧದಲ್ಲಿ ಸೊಂಟದ ಕೆಳಗೆ ಹೊಡೆಯಬಾರದು ಅಂತ ರೂಲು ಇಲ್ಲವಾ? ದುರ್ಯೋಧನ ಯುದ್ಧದಲ್ಲಿ ಮೇಲೆ ಹಾರುವಾಗ ಭೀಮ ಎತ್ತರದಲ್ಲಿ ಬೀಸಿದ ಗದೆ ದುರ್ಯೋಧನನ ತೊಡೆಗೆ ತಾಗಿ ಮುರಿದಿದ್ದು ಅದು ಅಂತ ಅವನ ವಾದ ಅಲ್ಲವಾ? ಎಂದೆ ನಾನು.

ನನ್ನ ಕರ್ಮ. ನೀವೊಬ್ಬರೂ ಪಠ್ಯ ಅಂದರೆ ಟೆಕ್ಸ್ಟ್ ಓದುವುದಿಲ್ಲ. ಪಠ್ಯವೇ ಪರಮ ವಾಕ್ಯ ಎನ್ನುವ ಜಿ.ಎಚ್. ನಾಯಕರಂತಹ ವಿಮರ್ಶಕರು ನಿಮ್ಮ ಮಾತು ಕೇಳಿದರೆ ಜೀವ ಬಿಟ್ಟಾರು. ಗದಾಯುದ್ಧ ಪಠ್ಯದಲ್ಲಿ ಹಾಗೆ ಎಲ್ಲಿ ಉಂಟು? ಕುರುರಾಜ ವಿದ್ಯಾಧರ ಕರಣದಿಂದ ಆಕಾಶಕ್ಕೆ ನೆಗೆದು ಬರಸಿಡಿಲು ಹೊಡೆವಂತೆ ಭೀಮನಿಗೆ ಗದಾಪ್ರಹಾರ ಮಾಡಿದಾಗ ಮೂರ್ಛೆಗೆ ಸಂದನು ಭೀಮ ಎಂದದ್ದು ರನ್ನ. ಜೈನಕಾವ್ಯದಲ್ಲೆಲ್ಲಾ ಈ ವಿದ್ಯಾಧರ ಶಕ್ತಿ ಪ್ರಸ್ತಾಪ ಬರುತ್ತದೆ. ಇವ ಅದನ್ನು ಉಲ್ಟಾ ಮಾಡಿ ಪೆಟ್ಟು ತಿಂದದ್ದು ದುರ್ಯೋಧನ ಅಂತ ಮಾಡಿಬಿಟ್ಟ. ಹಳೆಗನ್ನಡ ಸಾಹಿತ್ಯವನ್ನು ಕುಲಗೆಡಿಸುವವರೆ ನಿನ್ನ ಹಾಗೆ ಬೇಡದ ವಿಮರ್ಶೆ ಓದುವವರು ಎಂದು ಅಸಹನೆ ಪ್ರಕಟಿಸಿದ ಪೊಮ್ಮ.

ಇದ್ದಕ್ಕಿದ್ದಂತೆ ಜಗಳಾಡುವ ಇಬ್ಬರು ಮಕ್ಕಳು ಒಂದಾಗಿ ರಾಜಿಯಾಗುವಂತೆ ಪೊಮ್ಮನನ್ನು ಸಪೋರ್ಟ್ ಮಾಡಿದ ಅದ್ರಾಮ. ರನ್ನ ಕತೆಯನ್ನು ಸಿಂಹಾವಲೋಕನ ಕ್ರಮದಿಂದ ಹೇಳುತ್ತೇನೆ ಎಂದದ್ದಷ್ಟೇ ಹೊರತು ದುರ್ಯೋಧನ ಹಾರಿದಾಗ ಹೊಡೆದದ್ದು ಅದು ಇದು ಅಂತ ಹೇಳಲಿಲ್ಲ. ''ಸಿಂಹಾವಳೋಕನ ಕ್ರಮದಿನರುಪಿದಂ ಕವಿರತ'' ಎಂದುದು ನೆನಪಿದೆ. ಎಂದರೆ ಮುಂದೆ ಹೋದಮೇಲೆ ಹಿಂತಿರುಗಿ ನೋಡುವ ಸಿಂಹದ ಕ್ರಮದ ಹಾಗೆ ಹಿಂದಿನದ್ದನ್ನು ನೋಡಿ ಹೇಳುವ ಕ್ರಮ ಅಷ್ಟೇ ಎಂದ.

ಹೋಗಲಿ, ಪಂಪ ದೊಡ್ಡ ಕತೆಯನ್ನು ಸಂಕ್ಷೇಪಿಸಿ ಹೇಳಿದರೆ ರನ್ನ ಚಿಕ್ಕದಾದುದನ್ನು ವಿಸ್ತರಿಸುತ್ತಾನೆ. ಇಬ್ಬರೂ ಪ್ರತ್ಯೇಕ ಎಂದು ಹೇಳಿ ನಾನು ಪಥ್ಯ ತಿಳಿದಿಲ್ಲ ಎಂಬ ಆರೋಪದಿಂದ ಜಾರಿಕೊಳ್ಳಲು ಪ್ರಯತ್ನಿಸಿದೆ.

ಆದರೆ ರನ್ನ ಒಟ್ಟು ರಾಶಿ ಮಾತಾಡುದು ಅಲ್ಲ ಆಯಿತಾ. ಅವನ ಸೂಕ್ಷ್ಮ ಅಂದರೆ ಸೂಕ್ಷ್ಮ. ಪೆಟ್ಟು ತಿಂದು ಮೂರ್ಛೆ ಹೋಗಿ ನೆಲಕ್ಕೆ ಬಿದ್ದ ಭೀಮನಿಗೆ ಕೌರವ ಗಾಳಿ ಹಾಕಿದ್ದು ಗದೆಯಿಂದ ಅಲ್ವಾ? ಅದು ನೋಡು ಸೂಕ್ಷ್ಮ ನಿನ್ನ ಗೋವಿಂದಣ್ಣನ ದುರ್ಯೋಧನನಿಗೆ ಇದು ಗೊತ್ತಾಗ್ತದ? ಎಂದು ಪುನಃ ಅದ್ರಾಮನನ್ನು ಕೆಣಕಿದ ಪೊಮ್ಮ.

''ಅಲರ್ದ ಹಲಧರನ ಮೊಗಮಂ । ತಲೆಯಂ ಬಾಗಿರ್ದ ಧರ್ಮತನಯನ ಮೊಗಮಂ'' ಎಂದು ಬರುವ ಪುಟ ಆದಮೇಲೆ ಅಲ್ವಾ ಎಂದ ಅದ್ರಾಮ.

ಅಲ್ಲಿ ನೋಡು ರನ್ನನ ಸೂಕ್ಷ್ಮ ನೆಲಕ್ಕೆ ಬಿದ್ದವನಿಗೆ, ಮೂರ್ಛೆ ಹೋದವನಿಗೆ ಹೊಡೆಯಬಾರದು ಎಂಬುದು ನಿಯಮ. ಆದರೆ ದುರ್ಯೋಧನ ಬಿರುಸಿನಿಂದ ಗದೆಯನು ಬೀಸುತ್ತಾನೆ. ಅವನ ವ್ಯಂಗ್ಯವನ್ನು ಗಮನಿಸಬಹುದಾದರೆ ಬಿದ್ದ ಭೀಮನ ಮುಖಕ್ಕೆ ಗಾಳಿಬೀಸುವುದು ಗದೆಯಿಂದ. ಆದರೆ ನಿಜವಾಗಿ ಅವನು ಕ್ರೋಧದಿಂದ ಗದೆಯನ್ನು ಬೀಸಿದ್ದಾನೆ. ಅಟ್ಟಹಾಸದಿಂದ ಗದೆಯನ್ನು ಬೀಸಿದ್ದಾನೆ. ವಿಜಯೋನ್ಮಾದದಲ್ಲಿ ಗದೆಯನು ಮುಖದ ಹತ್ತಿರ ಬೀಸಿದ್ದಾನೆ. ಈ ಮಿಶ್ರ ಭಾವನೆಗಳು ಯಕ್ಷಗಾನದ ಕೌರವನಲ್ಲಿ ಎಲ್ಲಿದೆ? ಆದರೆ ಗದೆಯ ಗಾಳಿ, ''ಕೋಳೆಚ್ಚರಿಸುದುದು ಭೀಮನಂ'', ''ಮೆಯ್ ಮರೆದವನಂ ತಂದೆ ಸುತರ್ಗೆ ಕೂರದರೊಳರೇ.''

ದುರ್ಯೋಧನನ ಗದೆಯ ಚಲನೆಯಿಂದ ಮುಖಕ್ಕೆ ಬಿದ್ದ ಗಾಳಿ ಭೀಮನನ್ನು ಸ್ಪರ್ಶಿಸಿದೆ. ಕೇಳಬೇಕೆ? ಭೀಮ ವಾಯು ಪುತ್ರ ಅಲ್ಲವೇ? ಅವ ತನ್ನ ಮಗನಾದ ಭೀಮನನ್ನು ಪ್ರೀತಿಯಿಂದ ಎಚ್ಚರಿಸಿದ. ತಂದೆ ಸುತರ್ಗೆ ಕೂರದರ್ ಒಳರೇ: ತಂದೆ ಮಕ್ಕಳು ಪರಸ್ಪರವಾಗಿ ಪ್ರೀತಿಸದವರು ಉಂಟೆ? ಎಂದು ಕವಿ ಕೇಳುವುದರಲ್ಲಿ ತಪ್ಪೇನು? ನೋಡಯ್ಯಾ ಕಾವ್ಯದ ಸೂಕ್ಷ್ಮ. ಯಕ್ಷಗಾನದ ಚೆಂಡೆ ಅಬ್ಬರಕ್ಕೆ ಈ ಸೂಕ್ಷ್ಮಗಳೆಲ್ಲಾ ಸಿಕ್ಕುದಿಲ್ಲ ಎಂದು ಅದ್ರಾಮನ ಕಾಲು ಎಳೆಯಲು ನೋಡಿದ ಪೊಮ್ಮ.

ಆದರೆ ಇದೆಲ್ಲಕ್ಕಿಂತ ಚಂದ ದುರ್ಯೋಧನ ಬಿದ್ದ ರೀತಿಯನ್ನು ರನ್ನ ಹೇಳಿದ್ದು ಎಂದು ವಿಷಯಾಂತರ ಮಾಡಿ ಯಕ್ಷಗಾನ ಮರೆಸಿ, ಜಗಳ ತಪ್ಪಿಸಲು ನೋಡಿದೆ. ತೊಡೆ ಮುರಿದು ಬೀಳುವುದು ''ನೆಲವನಾನಿದನೆಂತು ಬಿಡೆನೆಂಬ ತೆರದಿ'' ನೆಲವನು ಹೇಗಾದರೂ ಬಿಡೆನೆಂಬಂತೆ ಕುಲಗಿರಿ ಬೀಳುವ ಹಾಗೆ ಬಿದ್ದು ಕೌರವ ಮಡಿದ. ಬಹುಶಃ ನೆಲವನು ಬಿಡೆ ಎಂದು ಅಪ್ಪಿ ಹಿಡಿದ ಹಾಗೆ ಕಂಡಿರಬೇಕು ಎಂದೆ ನಾನು.

ಪಂಪ ಪಕ್ಷಪಾತಿಯಾದ ಅದ್ರಾಮ ತಕ್ಷಣ ಬಾಯಿ ಹಾಕಿದ. 'ಪತ್ತುವಿಡೆನೆಂಬಂತೆ ನೆಲನಂ ಪತ್ತಿ' ಎಂದು ಹೇಳಿದವ ಪಂಪ ಆಯಿತಾ? ಬೇಕಾದರೆ ಪಂಪನ ವಿಕ್ರಮಾರ್ಜುನ ವಿಜಯಂ ಹದಿಮೂರನೆ ಆಶ್ವಾಸನ ನೋಡು. ನೆಲವನ್ನು ಹಿಡಿದ ಆ ಪಟ್ಟನ್ನು ಬಿಡೆನು. ಹೀಗೆ ನೆಲಕ್ಕೆ ಅಂಟಿಕೊಂಡು ಹಿಡಿದ ಪಟ್ಟನ್ನು ಬಿಡದೆ ಬಿದ್ದಿದ್ದಾನೆ ಕೌರವ ಅಂತ ಮೊದಲಿಗೆ ಹೇಳಿದವ ಪಂಪ. ತುಳುವಲ್ಲೂ ಪತ್ತು ಎಂದರೆ ಎಷ್ಟು ಅರ್ಥ ನೋಡು ಹತ್ತು ಎಂಬ ಸಂಖ್ಯೆ ಮಾತ್ರವಲ್ಲ, ಪಟ್ಟು

ಎಂಬ ಅರ್ಥದ ಜೊತೆ 'ಪತ್ತುನ' ಅಂದರೆ ಅಂಟಿಕೊಳ್ಳುವುದು ಅಂತ ಇಲ್ವಾ? ಅದನ್ನೇ ಡಿ.ಎಲ್. ನರಸಿಂಹಾಚಾರ್ಯರು ನೆಲನಂ ಪತ್ತಿ ಎಂದರೆ ನೆಲವನ್ನು ಅಂಟಿಕೊಂಡು ಎಂದು ಹೇಳಿದ್ದು. ನೆಲವನ್ನು ಬಿಗಿಯಾಗಿ ಪತ್ತಿನಲ್ಲಿ ಹಿಡಿದುಕೊಂಡು ಎಂದು ಬೇಕಾದರೂ ಹೇಳಬಹುದು.

ನನ್ನದೂ ಏನಾದರೂ ಇರಲಿ ಅಂತ ದ್ರಾವಿಡ ಶಬ್ದಗಳಲ್ಲೆಲ್ಲಾ ಹೀಗೆ ಸಂಬಂಧ ಉಂಟಲ್ಲಾ? ಯಾವಾಗಲೋ ಡೆಡ್ ನಿಘಂಟನಲ್ಲಿ ನೋಡಿದ ನೆನಪು ಎಂದೆ ನಾನು.

ಅದೆಂತದೋ ಡೆಡ್ ಡಿಕ್ಷ್ನರಿ? ಅದರ ಸ್ಪೆಲ್ಲಿಂಗ್ ಡಿ.ಇ.ಎ.ಡಿ. ಅಂತಲೋ? ಅಂದ ಪೊಮ್ಮ.

ಅಲ್ಲ ಮಾರಾಯ. ಅದು ಡಿ.ಇ.ಡಿ. ಡೆಡ್ ಅಂದರೆ ದ್ರವಿಡಿಯನ್ ಎಟಿಮೊಲಾಜಿಕಲ್ ಡಿಕ್ಷ್ನರಿ. ಕಿ.ರಂ. ಸರ್ ಅವರು ಆ ಡಿಕ್ಷ್ನರಿ ಬಗ್ಗೆ ಒಂದು ಭಾಷಣದಲ್ಲಿ ಹೇಳಿದ್ದು ನೆನಪಿಲ್ಲವಾ? ಎಂದೆ.

ಮಾರಾಯ. ಇವತ್ತು ನಾನು ಬೇಗ ಮನೆಗೆ ಬರ್ತೀನೆ ಅಂತ ಹೇಳಿದ್ದೇನೆ. ಹೆಂಡತಿ ಕಾಯ್ತಾ ಇರ್ತಾಳೆ. ಇಲ್ಲಿ ಬಸ್‌ಸ್ಟಾಪಿನಲ್ಲಿ ಹೀಗೆ ಪಟ್ಟಾಂಗ ಹೊಡೆಯುತ್ತಾ ಕುಳಿತರೆ ಮನೆಯಲ್ಲಿ ನಾನು ಡೆಡ್ ಆಗಬೇಕಾದೀತು. ಎಂದು ಹೊರಡುವ ತಯಾರಿ ನಡೆಸಿದ ಪೊಮ್ಮ.

ಬೇಗ ಹೋಗಬೇಕಾದರೆ ಬಸ್ಸಿಗೆ ಕಾಯಬೇಡ. ಮೆಜೆಸ್ಟಿಕ್ ಆಚೆ ತುದಿಯಲ್ಲಿ ಇಳಿದು ಮೆಟ್ರೋ ರೈಲಿಗೆ ಹತ್ತೋಣ. ನಾನೂ ನಿನ್ನ ಜೊತೆ ಬರುತ್ತೇನೆ. ಮೆಟ್ರೋ ಪ್ರಯಾಣ ಒಮ್ಮೆ ನೋಡಿದ ಹಾಗಾಯಿತು, ಎಂದು ಪೊಮ್ಮನ ಜೊತೆ ಹೊರಟ ಅದ್ರಾಮ.

ನಮಸ್ಕಾರ. ನೀವು ಲಕ್ಕಿ. ನಮ್ಮ ಊರಿಗೆ ಇನ್ನು ಯಾವಾಗ ಮೆಟ್ರೋ ಆಗೋದೋ ಏನೋ? ಎನ್ನುತ್ತಾ ನಾನು ಮೆಜೆಸ್ಟಿಕ್ ಬಸ್ ಸ್ಟಾಂಡಿನಲ್ಲಿ ಮುಂದಿನ ಬಸ್ಸಿಗೆ ಕಾಯುತ್ತಾ ನಿಂತೆ.

✸

---


**ಅಪರಂಜಿ ಚಂದಾದಾರರ ಸಂಖ್ಯೆಯನ್ನು ಇಮ್ಮಡಿಗೊಳಿಸಿ!**

**ಅದು ಸುಲಭ, ನೀವೇ ಮಾಡಬಹುದು!**

ಹೇಗೆ?

ಇನ್ನೊಬ್ಬ ಚಂದಾದಾರರನ್ನು ಹುಡುಕಿಕೊಡಿ

ನಿಮ್ಮ ಸ್ನೇಹಿತರನ್ನು ಅಪರಂಜಿ ಓದುಗರನ್ನಾಗಿ ಮಾಡಿ

**ಅಷ್ಟು ಸುಲಭ!**

ವಾರ್ಷಿಕ ಚಂದಾ: ರೂ. 100/-

ಆಜೀವ ಸದಸ್ಯತ್ವ: ರೂ. 750/-

**ಇಂದೇ ಈ ಕೆಲಸ ಪ್ರಾರಂಭಿಸಿ**

# ಹಸಿರೂರಿನ ದ್ವಂದ್ವಗಳು

**- ಪಾಲಹಳ್ಳಿ ವಿಶ್ವನಾಥ್**

ಹಸಿರೂರು ಮೈಸೂರಿಗೆ ಹತ್ತಿರವೇ ಇರುವ ಪುಟ್ಟ ಊರು. ಹೆಸರೇ ಹೇಳುವಂತೆ ಎಲ್ಲೆಲ್ಲೂ ಹಸಿರು! ಕೆಲವು ವಿಶ್ರಾಮ ಧಾಮಗಳೂ ಹುಟ್ಟಿಕೊಂಡಿದ್ದವು. ಅದಕ್ಕಿಂತ ಮುಖ್ಯವಾಗಿ ಆ ಊರು ಸಾಹಿತ್ಯಕ್ಕೆ ಮತ್ತು ಕ್ರಿಕೆಟ್ ಆಟಕ್ಕೆ ಖ್ಯಾತಿಯನ್ನು ಗಳಿಸಿದ್ದಿತು. ಅದಕ್ಕೆ ಕಾರಣ ಸುಂದರಯ್ಯ ದಂಪತಿಗಳು - ಮೀನಾಕ್ಷಿ ಸುಂದರಯ್ಯ ಮತ್ತು ಪತಿ ಶೇಷಾದ್ರಿ ಸುಂದರಯ್ಯ. ಮೀನಾಕ್ಷಿಯವರು ಮಹಾರಾಜ ಕಾಲೇಜಿನಲ್ಲಿ ಸಾಹಿತ್ಯದಲ್ಲಿ ಎಂ.ಎ. ಮಾಡಿದ್ದರು. ಅದೇ ಸಮಯದಲ್ಲಿ ಶೇಷಾದ್ರಿ ಸುಂದರಯ್ಯನವರು ವಿಶ್ವವಿದ್ಯಾಲಯಕ್ಕೆ ಕ್ರಿಕೆಟ್ ಆಡುತ್ತಿದ್ದರು. ಅಲ್ಲಿಯೇ ಅವರಿಬ್ಬರಿಗೂ ಪರಿಚಯವಾಗಿ ಅದು ಪ್ರೇಮದತ್ತ ತಿರುಗಿ ಮದುವೆಯಾಗಿದ್ದರು. ಕೆಲಸದ ಪ್ರಯುಕ್ತ ಭಾರತವೆಲ್ಲಾ ಸುತ್ತಾಡಿ ಕಡೆಗೆ ಹಸಿರೂರಿನಲ್ಲಿ ನೆಲಸಿದ್ದರು. ಮೈಸೂರು ಹತ್ತಿರ ಎನ್ನುವುದು ಅವರಿಗೆ ಮುಖ್ಯ ಆಕರ್ಷಣೆಯಾಗಿದ್ದಿತು. ಮೀನಾಕ್ಷಿಯವರು ಆ ಚಿಕ್ಕ ಊರಿನಲ್ಲಿ ಮೈಸೂರಿನ ಸಂಸ್ಕೃತಿಯನ್ನು ಬೆಳೆಸಬೇಕೆಂದು ಅಲ್ಲಿ ಸಾಹಿತ್ಯ ಸಂಘವನ್ನು ಸ್ಥಾಪಿಸಿದರು. ಮೈಸೂರಿನ ಹಲವಾರು ಪ್ರಾಧ್ಯಾಪಕರು ಹಸಿರೂರಿಗೆ ಬಂದು ಹೋಗುತ್ತಿದ್ದು ಅಲ್ಲಿನ ಸಾಹಿತ್ಯ ಸಂಘ ನಿಧಾನವಾಗಿ ಪ್ರಖ್ಯಾತಿಯಾಯಿತು. ವರ್ಷಕ್ಕೊಮ್ಮೆ ಹಸಿರೂರಿನ ಸಾಹಿತ್ಯ ಸಮ್ಮೇಳನವೂ ದೇಶದಲ್ಲೆಲ್ಲಾ ಖ್ಯಾತಿ ಗಳಿಸುತ್ತಿತ್ತು. ಹೀಗೆ ಹಸಿರೂರು ಸಾಹಿತ್ಯ ವಲಯಗಳಲ್ಲಿ ಮೇಲೆ ಹೋಗುತ್ತಿದ್ದ ಹಾಗೆ ಮತ್ತೊಂದು ವಲಯದಲ್ಲೂ ಹೆಸರು ಮಾಡಿತ್ತು. ಅದು ಕ್ರಿಕೆಟ್‌ನಲ್ಲಿ! ತಮ್ಮ ಪತ್ನಿ ಸಾಹಿತ್ಯಕ್ಕೆ ಪ್ರಚಾರ ಕೊಡುತ್ತಿದ್ದಂತೆ ಶೇಷಾದ್ರಿಯವರು ಅಲ್ಲಿ ಒಂದು ಕ್ರಿಕೆಟ್ ಅಕಾಡೆಮಿಯನ್ನು ಸ್ಥಾಪಿಸಿದರು. ಶೇಷಾದ್ರಿಯವರು ಎಲ್ಲ ಮಟ್ಟಗಳಲ್ಲೂ ಕ್ರಿಕೆಟ್ ಆಡಿದ್ದರು. ಹಲವಾರು ಟೆಸ್ಟ್ ಪಂದ್ಯಗಳಲ್ಲಿ ಸೆಂಚುರಿ ಬಾರಿಸಿ ಭಾರತದ ಜಯಕ್ಕೂ ಕಾರಣವಾಗಿದ್ದರು. ಅವರ ಬ್ಯಾಟಿಂಗನ್ನು ಜನ ಬಹಳ ಮೆಚ್ಚಿದ್ದರಂತೆ. ಅದೂ ಅವರ ಲೇಟ್ ಕಟ್ ವಿಶ್ವದಾದ್ಯಂತ ಖ್ಯಾತಿಗಳಿಸಿದ್ದಿತು. ಹೀಗೆ ಅಂತಹವರ ತರಬೇತಿಯಿಂದ ಕ್ರಿಕೆಟ್ ಅಕಾಡೆಮಿಯಲ್ಲಿ ತಯಾರಾದ ಹುಡುಗರು ಬೆಂಗಳೂರು ಮೈಸೂರುಗಳಲ್ಲಿ ಹೆಸರು ಮಾಡಿ ರಣಜಿ ಪಂದ್ಯಗಳಿಗೂ, ಒಮ್ಮೊಮ್ಮೆ ದೇಶದ ಟೀಮಿಗೂ ಆಯ್ಕೆಯಾಗುತ್ತಿದ್ದರು. ಸುಂದರಯ್ಯ ದಂಪತಿಗಳ ಮಧ್ಯೆ ಯಾವ ವೈಮನಸ್ಯಗಳಿಲ್ಲದಿದ್ದರೂ (ಹಸಿರೂರಿನ ಜನರು ಅವರನ್ನು ಆದರ್ಶ ದಂಪತಿಗಳೆಂದು ಪರಿಗಣಿಸುತ್ತಿದ್ದರು) ಗಂಡ ಮತ್ತು ಹೆಂಡತಿಯರ ಶಿಷ್ಯ ವೃಂದಗಳ ಮಧ್ಯೆ ಪ್ರೇಮವೇನೂ ಇರಲಿಲ್ಲ. ಸಾಹಿತ್ಯದವರು ಕ್ರಿಕೆಟಿಗರನ್ನೂ ಕ್ರಿಕೆಟಿಗರು ಲೇಖಕರನ್ನೂ ಕಾಲು ಎಳೆಯುವುದು ನಡೆಯುತ್ತಲೇ ಇದ್ದಿತು.

ಬೇಸಿಗೆಯ ಒಂದು ಸಂಜೆಯ ಸಮಯ. ಸಾಹಿತ್ಯ ಸಂಘದ ಕಟ್ಟಡದ ಹತ್ತಿರವೆ ಹಸಿರೂರು ಕ್ರಿಕೆಟ್ ಮೈದಾನ. ಸಾಹಿತ್ಯ ಸಂಘದ ಹೊರ ಅಂಗಣದಲ್ಲಿ ಸಭೆ ನಡೆಯುತ್ತಿತ್ತು. ಒಬ್ಬ ಯುವ ಲೇಖಕ ಸಭೆಯಲ್ಲಿ ನಿಂತು ರಬೀಂದ್ರನಾಥ್ ಠಾಗೂರರ ಕವಿತೆಗಳ ಬಗ್ಗೆ ಮಾತನಾಡುತ್ತಿದ್ದಾಗ ಒಂದು ಚೆಂಡು ಬಂದು ಅವನ ತಲೆಗೆ ತಾಕಿ ಅವನು ನೆಲದ ಮೇಲೆ ಬಿದ್ದು ಮೂರ್ಛೆ ಹೋದನು. ಆಗ ಚೆಂಡು ಹುಡುಕಿಕೊಂಡು ಬಂದವನು ಒಬ್ಬ ಸ್ಫುರದ್ರೂಪಿ ಯುವಕ. ಅಲ್ಲಿ

ನೆರೆದಿದ್ದ ಎಲ್ಲರೂ ಈ ಯುವಕನನ್ನು ತರಾಟೆಗೆ ತೆಗೆದುಕೊಂಡರು. ಆದರೆ ಆ ಯುವಕ ಅಲ್ಲಿಯೇ ಇದ್ದ ಒಂದು ಯುವತಿಯನ್ನು ನೋಡುತ್ತಲೇ ಇದ್ದ.

ಈಗ ನಮ್ಮ ಕಥೆಯ ಮೂರು ಮುಖ್ಯ ಪಾತ್ರಧಾರಿಗಳ ಪರಿಚಯ ಮಾಡಿಕೊಳ್ಳೋಣ. ಮೊದಲು ಆ ಯುವತಿ ಯಾರು? ಅಲ್ಲಿ ನೆರೆದಿದ್ದ ಜನರಲ್ಲಿ ಈ ಯುವತಿಯನ್ನು ಬಿಟ್ಟು ಬೇರೆ ಯಾರೂ ಯಾವ ಸೌಂದರ್ಯ ಸ್ಪರ್ಧೆಯನ್ನು ಪ್ರವೇಶಿಸಿದರೂ ವಿಜೇತರಾಗುವ ಸಾಧ್ಯತೆ ಇರಲಿಲ್ಲ. ಅವಳೇ ಅದಿತಿ ಗೋಪಾಲ್. ಮೀನಾಕ್ಷಿಯವರ ಸೋದರ ಸೊಸೆ. ದೂರದ ಮುಂಬಯಿಯಲ್ಲಿ ಸಾಹಿತ್ಯದಲ್ಲಿ ಎಂ.ಎ. ಮಾಡುತ್ತಿದ್ದ ಹುಡುಗಿ. ಬೇಸಿಗೆ ಸಮಯದಲ್ಲಿ ಹಸಿರೂರಿಗೆ ಬಂದಿದ್ದಳು. ಅತ್ತೆಯ ಪ್ರಭಾವದಿಂದ ಸಾಹಿತ್ಯವೇ ಪ್ರಪಂಚ ಎನ್ನುವ ಧೋರಣೆ ಅವಳದ್ದು. ಅದರಿಂದಲೇ ಏನೋ ಆ ಮೂರ್ಛೆಹೋದ ಯುವಕನಿಂದ ಅವಳು ಬಹಳ ಆಕರ್ಷಿತಳಾಗಿದ್ದಳು.

ಹಿಂದಿನ ವರ್ಷ ಹಸಿರೂರಿನ ಸಾಹಿತ್ಯ ಸಮ್ಮೇಳನಕ್ಕೆ ಬಂದಿದ್ದ ಆ ಯುವ ಲೇಖಕ ಮೀನಾಕ್ಷಿ ಸುಂದರಯ್ಯನವರ ಬಲವಂತದಿಂದ ಆ ಊರಿನಲ್ಲೇ ಉಳಿದುಕೊಂಡಿದ್ದ. ಹೇಗೂ 2-3 ಅತಿಥಿ ಲೇಖಕರಿಗೆ ಸಂಘದ ಆಯವ್ಯಯದಲ್ಲಿ ಅವಕಾಶ ಮಾಡಿಕೊಡಲಾಗಿದ್ದಿತು. 'ನೀವಿದ್ದರೆ ನಮ್ಮ ಸಾಹಿತ್ಯ ಸಂಘಕ್ಕೆ ಮೆರುಗು' ಎಂದು ಮೀನಾಕ್ಷಿ ಹೇಳಿದಾಗ ಅವನು ಉಬ್ಬಿದ್ದರೂ ತೋರಿಸಿಕೊಳ್ಳಲಿಲ್ಲ. 'ನಿಮ್ಮ ಬಲಾತ್ಕಾರಕ್ಕೋಸ್ಕರ ಉಳಿಯುತ್ತೇನೆ' ಎಂದು ಉತ್ತರ ಕೊಟ್ಟಿದ್ದ. ಅವನ ಹೆಸರು ಕಿಶನ್ ರಾಯ್. ಅದು ಅವನ ನಿಜ ಹೆಸರು ಅಲ್ಲವೆಂದು ಅಲ್ಲಿ ಕೆಲವರಿಗೆ ಮಾತ್ರ ತಿಳಿದಿದ್ದಿತು. ಅವನ ತಾಯಿ-ತಂದೆಯರು ಅವನಿಗೆ ಕೃಷ್ಣರಾವ್ ಎಂದು ನಾಮಕರಣ ಮಾಡಿದ್ದರು. ಆದರೆ ಅವನು ಬರೆಯಲು ಶುರುಮಾಡಿದಾಗ ತನ್ನ ಹೆಸರನ್ನು ಬದಲಾಯಿಸಿಕೊಂಡಿದ್ದ. ಈಗ ಮೂರನೆಯ ವ್ಯಕ್ತಿ! ಅದಿತಿಯನ್ನೇ ನೋಡುತ್ತಿದ್ದ ಯುವಕನ ಹೆಸರು ಜಯಸಿಂಹ. ಸುಂದರಯ್ಯನವರ ಕ್ರಿಕೆಟ್ ಅಕಾಡೆಮಿಯಲ್ಲಿಯೇ ಕ್ರಿಕೆಟ್ ಕಲಿತು ಈಗ ಕರ್ನಾಟಕಕ್ಕೆ ರಣಜಿ ಪಂದ್ಯಗಳಲ್ಲಿ ಆಡುತ್ತಿದ್ದ. ಇಂದಲ್ಲ, ನಾಳೆ ಭಾರತಕ್ಕೂ ಆಡುವನು ಎಂಬ ಭರವಸೆ ಇದ್ದಿತು. ಅದಿತಿಯನ್ನೇ ನೋಡುತ್ತಿದ್ದ ಜಯಸಿಂಹ ಕ್ಷಣಗಳಲ್ಲೇ ಅವಳನ್ನು ಪ್ರೇಮಿಸಲೂ ಪ್ರಾರಂಭಿಸಿದ. ಒಟ್ಟಿಗೆ ಓಡಾಡಲು ಶುರು ಮಾಡಿದರು.

ಅವರ ಭೇಟಿಯಾದ ಒಂದು ತಿಂಗಳ ನಂತರ ಹಸಿರೂರಿನ ಉದ್ಯಾನವೊಂದರಲ್ಲಿ ಇಬ್ಬರೂ ಕುಳಿತಿದ್ದರು. ಆಗ ಜಯಸಿಂಹ ಪ್ರಾರಂಭಿಸಿದ.

''ಅದಿತಿ, ನಾನು ನಿನ್ನನ್ನು ಪ್ರೀತಿಸುತ್ತೇನೆ..''

''ಜಯಸಿಂಹ, ಮತ್ತೆ ಶುರು ಮಾಡಿದೆಯಾ? ಪ್ರೀತಿ ಒಂದೇ ಇಲ್ಲ ಇರೋದು ಪ್ರಪಂಚದಲ್ಲಿ.''

''ಪ್ರೀತಿ ಎಲ್ಲವನ್ನೂ ಗೆಲ್ಲಬಹುದು.''

''ನೋಡು ಜಯಸಿಂಹ, ನೀನು ಇಷ್ಟ ಆದರೆ ಮದುವೆ ಗಿದುವೆ ಎಲ್ಲಾ..''

''ಏಕೆ ಅದಿತಿ?''

''ನೀನು ತಪ್ಪು ತಿಳಿದುಕೋ ಬಾರದು.''

''ಇಲ್ಲ ಹೇಳು.''

''ನೋಡು, ನಾನು ಬಹಳ ಸಾಧಾರಣ ಹುಡುಗಿ.''

''ಯಾರು ಹೇಳಿದರು ನಿನಗೆ? ನೀನು ಬಹಳ ಸುಂದರ.''

''ಏನೋ ಸ್ವಲ್ಪ ನೋಡೋಕೆ ಚೆನ್ನಾಗಿರಬಹುದು, ಸರಿ! ಆದರೆ, ನಾನು ಒಟ್ಟಿನಲ್ಲಿ ಸಾಧಾರಣ. ಆದರೂ ನನಗೆ ಬಹಳ ಆಶೆ ಆಕಾಂಕ್ಷೆಗಳಿವೆ. ಸಮಾಜದಲ್ಲಿ ನನಗೆ ಬಹಳ ಮೇಲೆ ಹೋಗಬೇಕೂಂತ ಆಸೆ ಇದೆ.''

''ನನ್ನ ಮದುವೆಯಾದರೆ..''

''ನಾನು ಸಾಧಾರಣ. ನಾನು ಮದುವೆಯಾಗುವ ವ್ಯಕ್ತಿಯೂ ಸಾಧಾರಣ ಆಗಿಬಿಟ್ಟಲ್ಲಿ... ಇಲ್ಲ, ಅಂತಹ ಜೀವನ ನನಗೆ ಇಷ್ಟವಿಲ್ಲ.''

''ಹಾಗಾದರೆ ನನ್ನನ್ನು...''

''ಹೌದು, ಈಗ ಹೇಳು ನೀನು ಈ ಜೀವನದಲ್ಲಿ ಏನಾದರೂ ಸಾಧಿಸಿದ್ದೀಯಾ? ಹೇಳು, ಪುಟ್ಟದಾದರೂ ಪರವಾಗಿಲ್ಲ... ಅಥವಾ ಮುಂದೆ ಏನಾದರೂ ಆಗುವ ಸಾಧ್ಯತೆ ಇದೆಯೆ?''

ಜಯಸಿಂಹ ಸ್ವಲ್ಪ ಯೋಚಿಸಿದ.

''ಹೌದ್, ನಾನು ಇಂಡಿಯಾ ಟೀಮ್‌ಗೆ ಆಯ್ಕೆಯಾಗಲಿಲ್ಲ. ಆದರೆ ರಣಜಿ ಟ್ರೋಫಿ ಆಡುತ್ತಿದ್ದೇನಲ್ಲ?''

''ನಿನ್ನ ಜೀವನವೆಲ್ಲಾ ಕ್ರಿಕೆಟ್ಟೇ ಆಯಿತು. ಅದೇ ದೊಡ್ಡ ತೊಂದರೆ. ಬೇರೆ ಏನಾದರೂ ಮಾಡಿದ್ದೀಯಾ? ಬಿಡು. ಇದೇನು ನಿನಗೆ ನಾನು ಮೊದಲನೆ ಸತಿ ಹೇಳ್ತಾ ಇದ್ದೀನಾ? ನನಗೆ ಇಷ್ಟವಾಗುವ ಮನುಷ್ಯನಿಗೆ ಸಾಹಿತ್ಯದಲ್ಲಿ ಇಷ್ಟವಿರುತ್ತದೆ. ಮನಸ್ಸು ಸೂಕ್ಷ್ಮವಾಗಿರಬೇಕು. ಸೆನ್ಸಿಟೀವ್ ಇರಬೇಕು ಕಣೋ.''

''ಅದೇ ಆ ಕಿಷನ್ ರಾಯ್ ತರಹ...''

''ಹೌದು, ನೋಡುತ್ತಿರು. ಆತ ಬಹಳ ದೊಡ್ಡ ವ್ಯಕ್ತಿಯಾಗುತ್ತಾರೆ. ಪ್ರಪಂಚ ಅವರ ಮುಂದೆ ತಲೆ ಬಾಗಿಸುತ್ತದೆ.''

''ಅದಿತಿ! ಅದು ಅವನ ನಿಜ ಹೆಸರೂ ಅಲ್ಲ, ಕೃಷ್ಣರಾವ್ ಅಂತ ಇದ್ದಿದ್ದ ಹೆಸರನ್ನು ಕಿಶನ್ ರಾಯ್ ಮಾಡಿಕೊಂಡಿದ್ದಾನೆ. ಬಂಗಾಲೀ ಲೇಖಕ ಅನ್ನುವ ಅಭಿಪ್ರಾಯ ಬರಲಿ ಎಂದು.''

''ಅವನ ಸಾಹಿತ್ಯ ಈಗ ಕೊಲ್ಕತ್ತದಲ್ಲಿ ಚರ್ಚೆಯಾಗುತ್ತಿದೆಯಂತೆ. ಜೈಪುರ ಸಾಹಿತ್ಯ ಸಮ್ಮೇಳನದಲ್ಲೂ ಅವನ ಹೆಸರನ್ನು ಯಾರೋ ಹೇಳಿದರಂತೆ.''

''ನಿನಗೆ ಯಾರು ಹೇಳಿದ್ದು. ಅವನೇ ಇರಬೇಕು!''

''ಯಾರು ಹೇಳಿದರೇನಂತೆ. ನಿನಗೆ ಬರೀ ಅಸೂಯೆ. ನೀನು ಸುಧಾರಿಸಬೇಕು. ಏನಾದರೂ ಪುಸ್ತಕ, ಗಿಸ್ತಕ ಓದು.''

''ಸರಿ, ನಾನೂ ನಾಳೆಯಿಂದ ನಿಮ್ಮ ಸಾಹಿತ್ಯ ಸಂಘದ ಸಭೆಗಳಿಗೆ ಬರ್ತೀನಿ.''

ಜಯಸಿಂಹ ಸಾಹಿತ್ಯ ಸಂಘವನ್ನೇನೋ ಸೇರಿದ. ಅಲ್ಲಿ ಒಂದು ತಿಂಗಳನ್ನೂ ಕಳೆದ. ಮಧ್ಯದಲ್ಲಿ ಏನಾಯಿತು? ಮಹಾ ಗ್ರೀಕ ವಿದ್ವಾಂಸ ಅರಿಸ್ಟಾಟಲ್ ಹೇಳಿದಂತೆ ಒಂದು ಕಥೆ ಅಥವಾ ನಾಟಕದಲ್ಲಿ ಘೋರ ವಿಷಯಗಳನ್ನೆಲ್ಲಾ ಬಿಡಿಸಿ ಹೇಳಬೇಕಿಲ್ಲ ಅಥವಾ ಆಡಿ

ತೋರಿಸಬೇಕಿಲ್ಲ. ಆದ್ದರಿಂದ ಆ ಒಂದು ತಿಂಗಳಲ್ಲಿ ಜಯಸಿಂಹ ಪಟ್ಟ ಕಷ್ಟವನ್ನು ನೀವೇ ಊಹಿಸಿಕೊಳ್ಳಬೇಕು. ಹಾಗೂ ಸ್ವಲ್ಪ ಮಾತ್ರ ಇಲ್ಲಿ ಹೇಳುವ ಪ್ರಯತ್ನ ಮಾಡುತ್ತೇವೆ. ಬಂಗಾಳದ ಮಹಾ ಆಧುನಿಕ ಸಾಹಿತಿ ರೊಬೀಂದ್ರ ಚಟರ್ಜಿಯವರ ಕಾದಂಬರಿಗಳನ್ನು ಅವನು ಓದಿ ಅರ್ಥ ಮಾಡಿಕೊಂಡು ಚರ್ಚಿಸಬೇಕು ಎಂದು ಮೀನಾಕ್ಷಿ ಮೇಡಮ್ ಅವರ ಆಜ್ಞೆಯಾಗಿದ್ದಿತು. ಅವರ ಪ್ರತಿಯೊಂದು ಕಾದಂಬರಿಯೂ ಕಡೆಯ ಪಕ್ಷ 500 ಪುಟಗಳಿದ್ದವು. ಅಂದರೆ ಅವರ ಹತ್ತೂ ಕಾದಂಬರಿಗಳನ್ನು ಮುಗಿಸಬೇಕಿದ್ದರೆ 5000 ಪುಟಗಳನ್ನು ಓದಬೇಕಿತ್ತು. ಆದರೆ ಅವರ ಒಂದು ಕಾದಂಬರಿಯನ್ನೂ ಜಯಸಿಂಹ ಪೂರ್ತಿ ಓದಲಾಗಲಿಲ್ಲ. ಏಕೆಂದರೆ ಒಂದು ಪುಟ ಓದಿ ಮುಂದಿನ ಪುಟಕ್ಕೆ ಹೋಗುವುದು ಅವನಿಗೆ ಮಹಾ ಪ್ರಯತ್ನವಾಗಿದ್ದಿತು. ಆದ್ದರಿಂದ ಮೊದಲ 50 ಪುಟಗಳನ್ನು ಕೂಡ ಮುಗಿಸಲಾಗಲಿಲ್ಲ. ಇದಲ್ಲದೆ ಜಯಸಿಂಹನಿಗೆ ಸಂಘದಲ್ಲಿ ಅದಿತಿಯನ್ನು ಆಗಾಗ್ಗ ನೋಡಿದಾಗ ಖುಷಿಯಾಗುತ್ತಿದ್ದರೂ ಮುಂದಿನ ಕ್ಷಣದಲ್ಲಿಯೇ ಅವಳ ಜೊತೆ ಕಿಷನ್ ಕಾಣಿಸಿಕೊಳ್ಳುತ್ತಿದ್ದದ್ದು ಅವನಿಗೆ ತಡೆಯಲಾರದ ದುಃಖವಾಗಿತ್ತು. ಕಿಷನ್ ಮತ್ತು ಅದಿತಿ ಮದುವೆಯಾಗಬಹುದೆಂಬ ಗಾಳಿಸುದ್ದಿ ಬಂದ ನಂತರ ಜಯಸಿಂಹನ ಮುಖದಲ್ಲಿ ಸಂತೋಷವೇ ಅಳಿಸಿಹೋಯಿತು. ಇದೇ ಸಮಯದಲ್ಲಿ ರೊಬೀಂದ್ರ ಚಟರ್ಜಿಯವರು ಹಸಿರೂರಿಗೆ ಭೇಟಿ ಕೊಡುತ್ತಾರೆ ಎಂಬ ಸುದ್ದಿ ಬಂದಿದ್ದು ಸಾಹಿತ್ಯ ಸಂಘದಲ್ಲಿ ಎಲ್ಲರೂ ಖುಷಿಯಿಂದ ಇದ್ದರು.

ಅಂತೂ ರೊಬೀಂದ್ರ ಚಟರ್ಜಿ ಹಸಿರೂರಿಗೆ ಬಂದಾಗ ಅವರಿಗೆ ಸಿಕ್ಕ ಸ್ವಾಗತ ಅದ್ಭುತವಾಗಿತ್ತು. ಅವರ ಕಾರು ಊರಿನೊಳಗೆ ಬರುತ್ತಲೇ ಮೂರು ಜನ ನಾದಸ್ವರ ಊದುತ್ತಾ ಅವರನ್ನು ಸ್ವಾಗತಿಸಿದರು. ರೊಬೀಂದ್ರ ಚಟರ್ಜಿಯವರು ದೊಡ್ಡ ಟಾಗೂರರ ತರಹವೆ ದೊಡ್ಡ ಗಡ್ಡವನ್ನು ಬಿಟ್ಟಿದ್ದರು. ಅವರು ಮಾತನಾಡಿದಾಗ ಮಾತ್ರ ಬಾಯಿ ಎಂಬ ಅಂಗ ಅಲ್ಲೇಲ್ಲೋ ಅಡಗಿರಬೇಕು ಎಂದು ಊಹೆ ಮಾಡಿಕೊಳ್ಳಬೇಕಿತ್ತು. ಕಣ್ಣುಗಳೂ ದಟ್ಟ ಹುಬ್ಬುಗಳ ಮಧ್ಯೆ ಕಳೆದು ಹೋಗಿದ್ದವು. ಹಸಿರೂರು ಸಾಹಿತ್ಯ ಪ್ರೇಮಿಗಳಿಗೇನೋ ಇದು ದೊಡ್ಡ ಹಬ್ಬವಾಗಿದ್ದಿತು. ಆದರೆ ಚಟರ್ಜಿಯವರು ಸುಸ್ತಾಗಿಬಿಟ್ಟಿದ್ದರು. ಕರ್ನಾಟಕದಲ್ಲಿ ಕಳೆದ 3 ವಾರಗಳಿಂದಲೂ ದಿನಕ್ಕೆ 3-4 ಕಾರ್ಯಕ್ರಮಗಳಲ್ಲಿ ಅವರು ಭಾಗವಹಿಸುತ್ತಿದ್ದು ಅವರಿಗೆ ಯಾವಾಗ ಕಲ್ಕತ್ತಾಗೆ ವಾಪಸ್ಸು ಹೋಗುತ್ತೇನೋ ಎನಿಸಿಬಿಟ್ಟಿತ್ತು. ಎಲ್ಲಿ ಹೋದರೂ ಆಶು ಲೇಖಕರ ಕಾಟವಂತೂ ಬಹಳ ಇದ್ದಿತು.

ಆ ದಿನದ ಕಾರ್ಯಕ್ರಮ ದೀಪ ಹತ್ತಿಸುವುದರ ಮೂಲಕ ಪ್ರಾರಂಭವಾಯಿತು. ಅಲ್ಲೇ ನಿಂತಿದ್ದ ಜಯಸಿಂಹನಿಗೆ ಈ ಮಹಾಲೇಖಕರ ಗಡ್ಡಕ್ಕೆ ಬೆಂಕಿ ಹಚ್ಚಿಕೊಂಡುಬಿಡುತ್ತೋ ಎಂಬ ಆತಂಕವಿದ್ದಿತು. ಸರಸ್ವತಿ ಸ್ತುತಿಯ ನಂತರ ಮೀನಾಕ್ಷಿ ಸುಂದರಯ್ಯನವರು ಚಟರ್ಜಿಯವರನ್ನು ಸ್ವಾಗತಿಸಿ ದೊಡ್ಡ ಭಾಷಣವನ್ನೇ ಕೊಟ್ಟರು. ಅದಾದ ಮೇಲೆ ಕೆಲವು ಯುವತಿಯರು ಚಟರ್ಜಿಯವರ ವಿವಿಧ ಕಾದಂಬರಿಗಳನ್ನು ಪರಿಚಯಿಸಿಕೊಟ್ಟರು. ಅನಂತರ ಮೀನಾಕ್ಷಿಯವರು ಕಿಶನ್ ರಾಯ್ ಅವರನ್ನು ಪರಿಚಯ ಮಾಡಿಕೊಡಲು ಪ್ರಾರಂಭಿಸಿದರು. ‘‘ಇವರು ನಮ್ಮ ಊರಿನ ಖ್ಯಾತ ಯುವ ಕಾದಂಬರಿಕಾರರು. ನಿಮ್ಮ ಬಂಗಾಳದ ಪರಂಪರೆಯ ವಿದ್ಯಾರ್ಥಿ. ಆಗಲೇ ಹೆಸರು ಮಾಡಿದ್ದಾರೆ ಎಂದರು. ಆಗ ಕಿಷನ್ ರಾಯ್ ಎದ್ದು ಎಲ್ಲರಿಗೂ ವಂದಿಸುತ್ತಾ, ಬಗ್ಗುತ್ತಾ’’ ಬಂಗಾಳದ ಅಮೋಘ ಸಂಸ್ಕೃತಿಗೆ ನಮನ. ಮೊಷಾಯ್

ಚಟರ್ಜಿಯವರೇ, ನಿಮ್ಮಂತಹವರನ್ನು ನೋಡುವುದು ನನ್ನ ಸೌಭಾಗ್ಯ. ನನಗೆ ಬಂಗಾಲೀ ಸಾಹಿತ್ಯವೆಂದರೆ ಚಿಕ್ಕಂದಿನಿಂದಲೂ ಬಹಳ ಪ್ರೀತಿ. ನನ್ನ ಮೇಲೆ ಬಂಕಿಮ ಮುಖರ್ಜಿಯವರ ಪ್ರಭಾವ ಬಹಳವಿದೆ. ನನ್ನ ಮೊದಲ ಕಾದಂಬರಿ.. ಅಷ್ಟರಲ್ಲಿ ರೊಬೀಂದ್ರ ಚಟರ್ಜಿಯವರ ಗಡ್ಡದೊಳಗಿಂದ, ಗಣಿಯೊಳಗಿಂದ ಆದಿರು ಹೊರಬರುವ ಹಾಗೆ, ಒಂದು ಗಂಭೀರ ಮಾತು ಹೊರಬಂದಿತು. ''ಬಂಕಿಮ್ ಮುಖರ್ಜಿ ನಾಟ್ ಗುಡ್, ಬೋಗಸ್!'' ಹಸಿರೂರಿನ ಸಾಹಿತ್ಯ ಪ್ರೇಮಿಗಳಿಗೆ ದಿಗ್ಭ್ರಮೆಯಾಯಿತು. ಇದೇನು ಬಂಕಿಮರನ್ನು ಬೋಗಸ್ ಅಂತ ಹೇಳುತ್ತಿದ್ದರಲ್ಲ. ಆದರೆ ಇಲ್ಲಿಗೆ ಬಂದು ಒಂದು ವರ್ಷದಿಂದ ಈ ಕಿಷನ್ ರಾಯ್ ಬಂಕಿಮರನ್ನು ಹೊಗಳುತ್ತಲೇ ಇದ್ದಾನೆ. ಅಂದರೆ ಅವನ ಮಾತೆಲ್ಲಾ ಸುಳ್ಳೆಂದು ತಿಳಿಯಿತು. ಇಂತಹವನನ್ನು ನಾವು ಏಕೆ ಪ್ರೋತ್ಸಾಹಿಸಿದೆವು? ಅದಿತಿಗೆ ಬೇಜಾರಾಗಿ ತಲೆಯಮೇಲೆ ಒಂದು ಕೈ ಇಟ್ಟುಕೊಂಡಳು. ತಕ್ಷಣ ಕಿಷನ್ ರಾಯ್ ಉರುಫ್ ಕೃಷ್ಣರಾವ್ ಚೇತರಿಸಿಕೊಂಡು ''ಅದು ನನ್ನ ಪೂರ್ವಾಶ್ರಮದ ಕಥೆ... ಚಿಕ್ಕವರಿದ್ದಾಗ ನಾವು ಎಷ್ಟೋ ತಪ್ಪು ಮಾಡುತ್ತೀವಲ್ಲವೇ? ಹೌದು. ಹಿಂದೆ ಬಂಕಿಮ ಮುಖರ್ಜಿಯವರ ಪ್ರಭಾವವಿದ್ದಿತು. ಆದರೆ ಅವರ ನಿಜ ಯೋಗ್ಯತೆ ನನಗೆ ತಿಳಿದ ನಂತರ ನಾನು ಅವರನ್ನು ತ್ಯಜಿಸಿದೆ. ಈಗ ನಾನು ಶರತ್ ಬ್ಯಾನರ್ಜಿಯವರ ಅಭಿಮಾನಿ. ನನ್ನ ಎಲ್ಲ ಕಾದಂಬರಿಗಳ ಮೇಲೂ ಅವರ ಅಗಾಧ ಪ್ರಭಾವವಿದೆ...'' ಇದನ್ನು ಕೇಳಿದ ಸಾಹಿತ್ಯ ಸಂಘದ ಸದಸ್ಯರು ಲೊಚಗುಟ್ಟಿದರು. ಹೌದು, ಪಾಪ ಚಿಕ್ಕಂದಿನ ತಪ್ಪುಗಳು. ಈಗ ಈ ಯುವಕ ಸರಿಯಾದ ದಾರಿಗೇ ಬಂದಿದ್ದಾನೆ. ಅಷ್ಟರಲ್ಲಿ ರೊಬಿನ್ ಚಟರ್ಜಿಯವರಿಂದ ಮತ್ತೊಂದು ಮಾತು ಹೊರಬಂದಿತು. ''ಶರತ್ ಬ್ಯಾನರ್ಜಿ ನಾಟ್ ಗುಡ್. ಬೋಗಸ್! ದೊಡ್ಡ ಬೋಗಸ್! ಬಂಕಿಮ ಮುಖರ್ಜಿಯವರಿಗಿಂತ ಕೆಟ್ಟ ಲೇಖಕ.'' ಈಗ ಹಸಿರೂರಿನ ಸಾಹಿತ್ಯ ಪ್ರೇಮಿಗಳಿಗೆ ಮತ್ತೊಂದು ಪ್ರಹಾರ! ಈ ಬೋಗಸ್ ಶರತ್ ಬ್ಯಾನರ್ಜಿಯನ್ನು ಮೆಚ್ಚಿಕೊಂಡ ಕಿಷನ್ ರಾಯನತ್ತ ಎಲ್ಲರೂ ತಿರುಗಿದರು. ಅವರುಗಳ ಕೈನಲ್ಲಿ ಟೊಮೇಟೋಗಳು ಇದ್ದಿದ್ದಲ್ಲಿ ಎಲ್ಲವೂ ಕಿಶನ್ ರಾಯನತ್ತ ಪ್ರಯಾಣ ಮಾಡುತ್ತಿದ್ದವು ಎನ್ನುವುದರಲ್ಲಿ ಅತಿಶಯವೇನೂ ಇಲ್ಲ. ಈತ ನಮಗೆ ನಿಜವಾಗಿ ಮೋಸ ಮಾಡಿದ್ದಾನೆ. ಇವನು ನಿಜವಾಗಿಯೂ ಉಡಾಫೆ. ಮೇಡಮ್ ಮೀನಾಕ್ಷಿಯವರಂತೂ ಅವನನ್ನು ಕೊಲ್ಲುವ ತರಹವೇ ನೋಡುತ್ತಿದ್ದರು. ಇದನ್ನೆಲ್ಲಾ ವೀಕ್ಷಿಸಿದ ಕಿಷನ್ ರಾಯ್ ರೂಮಿನಿಂದ ಹೊರಹೋದನು. ಅದಿತಿ ಗೋಪಾಲ್ ತನ್ನ ಎರಡೂ ಕೈಗಳನ್ನು ತಲೆಯಮೇಲೆ ಇಟ್ಟುಕೊಂಡಳು. ರೊಬಿನ್ ಚಟರ್ಜಿಯವರು ತಮ್ಮ ಸಾಹಿತ್ಯ ವಿಮರ್ಶೆಯನ್ನು ಮುಂದುವರಿಸಿದರು. ''ಬಂಕಿಮ ಬೋಗಸ್, ಶರತ್ ಬೋಗಸ್, ರಬೀಂದ್ರನಾಥ್ ಟಾಗೂರ್ ಪರ್ವಾಯಿಲ್ಲ. ವುಡ್ ಹೌಸ್ ಪರ್ವಾಯಿಲ್ಲ. ಟಾಲ್ಸ್ಟಾಯ್ ಪರವಾಯಿಲ್ಲ. ಆದರೆ, ಇವರೆಲ್ಲಾ ಬರೇ ಪರವಾಯಿಲ್ಲ. ಅಷ್ಟೆ ನಿಜವಾಗಿಯೂ ಮಹಾ ಲೇಖಕನೆಂದರೆ ನಾನು ಮಾತ್ರ. ರೊಬಿನ್ ಚಟರ್ಜಿ!'' ಎಲ್ಲರೂ ಚಪ್ಪಾಳೆ ತಟ್ಟಿದ ನಂತರ ಮೀನಾಕ್ಷಿಯವರು ಚಟರ್ಜಿಯವರನ್ನು ಏನಾದರೂ ತಿಂದುಬರೋಣ ಎಂದು ಕರೆದುಕೊಂಡು ಹೋದರು.

ಆ ಕೋಣೆಯಲ್ಲಿ ಅದಿತಿ ಮಾತ್ರ ಉಳಿದಳು. ಕಳೆದ 15 ನಿಮಿಷಗಳಲ್ಲಿ ಅವಳ ಪ್ರಪಂಚ ತಲಕೆಳಗಾಗಿದ್ದಿತು.

ಅದಿತಿ ಕಿಷನ್ ರಾಯನ್ನು ಲೇಖಕನಾಗಿ ಬಹಳ ಇಷ್ಟಪಟ್ಟಿದ್ದಳು. ಆ ಇಷ್ಟ ಪ್ರೀತಿಯತ್ತ ತಿರುಗುತ್ತಿರಬಹುದು ಎಂದು ಅವಳಿಗೆ ಅನ್ನಿಸಿತ್ತು. ಅದು ರೊಬಿನ್ ಚಟರ್ಜಿಯವರ

ವಿಮರ್ಶೆಗೆ ಮುಂಚೆ. ಆದರೆ ಅವರ ಮಾತನ್ನು ಕೇಳುತ್ತ ಕೇಳುತ್ತ ಕಿಷನ್ ರಾಯನ ನಿಜ ಬಂಡವಾಳ ಅವಳಿಗೆ ಅರಿವಾಯಿತು. ಹೌದು. ಇವನು ಮಹಾ ಉಡಾಫೆ, ನಾನೂ ಹುಚ್ಚಿ ಎಂದು ಕೊಂಡಳು. ಮುಂದೆ ಏನು ಮಾಡುವುದೆಂದು ಅವಳಿಗೆ ತಿಳಿಯಲಿಲ್ಲ.

ಕಾಫಿಯನ್ನು ಹೀರುತ್ತಿದ್ದ ರೊಬಿನ್ ಚಟರ್ಜಿಯವರನ್ನು ಮೀನಾಕ್ಷಿಯವರು 'ಕರ್ನಾಟಕದಲ್ಲಿ ನೀವು ಇನ್ನೇನು ನೋಡಬೇಕೆಂದಿದ್ದೀರಿ' ಎಂದರು. 'ನಿಮ್ಮ ಊರಿನಲ್ಲೇ ನಾನು ಒಬ್ಬರನ್ನು ನೋಡಬೇಕಾಗಿದೆ' ಎಂದು ಚಟರ್ಜಿ ಉತ್ತರ ಕೊಟ್ಟರು. ಯಾರವರು ಎಂದು ಕೇಳಿದ್ದಕ್ಕೆ ಚಟರ್ಜಿ ''ನಾನು ಸೋಂಡರೇಯ ಅವರನ್ನು ನೋಡಿ ಮಾತನಾಡಿಸಬೇಕು'' ಎಂದರು. ಮೀನಾಕ್ಷಿಯವರು ಆ ಹೆಸರಿನವರು ಈ ಊರಿನಲ್ಲಿ ಯಾರು ಇಲ್ಲವೆಂದು ಹೇಳಿದರು. ಚಟರ್ಜಿ ಮತ್ತೆ ''ಮಿಸ್ಟರ್ ಸೋಂಡರೇಯ ಅವರು ಇಲ್ಲೇ ಇದ್ದಾರೆ'' ಎಂದರು. ಆಗ ಜಯಸಿಂಹ 'ಮೇಡಮ. ಅವರು ನಮ್ಮ ಸುಂದರಯ್ಯ ಸಾರ್ ಅವರ ಬಗ್ಗೆ ಕೇಳುತ್ತಿದ್ದಾರೆ. ಅಲ್ಲವೆ' ಎಂದ. 'ಹೌದು ಖ್ಯಾತ ಕ್ರಿಕೆಟ್ ಆಟಗಾರ ಸೋಂಡರೇಯ' ಎಂದು ಮತ್ತೆ ಒತ್ತು ಹೇಳಿದರು. ಚಟರ್ಜಿ ಜಯಸಿಂಹನ ಹತ್ತಿರ ಬಂದು ''ಸೋಂಡರೇಯ ಅವರು ಕ್ರಿಕೆಟ್ಟಿನಲ್ಲಿ ದಂತ ಕಥೆ.. ಲೇಟ್ ಕಟ್‌ನಲ್ಲಿ ವಿಜಯ ಮರ್ಚೆಂಟರನ್ನೂ ಮೀರಿಸಿದ್ದರು'' ಆಗ ಜಯಸಿಂಹ 'ಹೌದು, ಆದರೆ ಅವರು ಈಗ ಇಲ್ಲಿಲ್ಲ. ಸಾಯಂಕಾಲ ಬರುತ್ತಾರೆ. ನೀವು ಹೇಗೂ ಇಂದು ರಾತ್ರಿ ಇಲ್ಲೇ ಇರುತ್ತಿರಲ್ಲವೇ' ಎಂದು ಕೇಳಿದ. ಅದಕ್ಕೆ ಅವರು ''ಹೌದು. ಸೋಂಡರೆಯ ಅವರನ್ನು ನೋಡಲೇಬೇಕು... ನಿಮ್ಮನ್ನೂ ಎಲ್ಲೋ ನೋಡಿದ್ದೇನಲ್ಲವೇ?'' ''ಇರಬಹುದು, ನಾನು ಕಲ್ಕತ್ತಾದಲ್ಲಿ ಆಡಿದ್ದೇನೆ. ಆರು ತಿಂಗಳ ಹಿಂದೆ. ರಣಜಿ ಫೈನಲ್ ಪಂದ್ಯವಿತ್ತಲ್ಲ...'' ಎಂದು ಜಯಸಿಂಹ ಉತ್ತರಿಸಿದ.

''ಹೊಹೊ! ನೀವು ಜೋಸಿಂಹ! ಬಂಗಾಳ ವಿರುದ್ಧ ಸೆಂಚುರಿ ಬಾರಿಸಿದ ಜೋಸಿಂಹ. ನೀವೇ ಕರ್ನಾಟಕವನ್ನು ಗೆಲ್ಲಿಸಿದಿರಿ'' ಎಂದು ಅವರು ಜಯಸಿಂಹನನ್ನು ತಬ್ಬಿಕೊಂಡರು 'ಹೌದು. ಏನೋ ಆಡಿದೆ ಸರ್ ಎಂದ ಜಯಸಿಂಹ' ಎಂತಹ ಮಹಾ ಪ್ರತಿಭೆ ನಿಮ್ಮದು! ಹೀಗೇ ಆಡಿದರೆ ನೀವು ಎಲ್ಲರನ್ನೂ ಮೀರಿಸಿಬಿಡುತ್ತೀರಿ. ಬನ್ನಿ ಮಾತನಾಡೋಣ ಎಂದು ಜಯಸಿಂಹನ ಭುಜದ ಮೇಲೆ ಕೈ ಹಾಕಿದರು.

''ಬನ್ನಿ ಸಾರ್, ನಮ್ಮ ಕ್ರಿಕೆಟ್ ಮೈದಾನಕ್ಕೆ ಕರೆದುಕೊಂಡು ಹೋಗುತ್ತೇನೆ'' ಎಂದು ಜಯಸಿಂಹ ಅವರ ಜೊತೆ ಹೊರಟ.

ಅದಿತಿ ಜಯಸಿಂಹನನ್ನೇ ನೋಡುತ್ತಿದ್ದಳು. ಅಂತಹ ದೊಡ್ಡ ಲೇಖಕರು ಜಯಸಿಂಹನನ್ನು ಅಪ್ಪಿಕೊಂಡಾಗ ಅವಳ ಜೀವನವೇ ಬದಲಾಯಿತು. ಹೋಗಿ ಹೋಗಿ ನಾನು ಯಾರನ್ನೋ ಪ್ರೀತಿಸುತ್ತಿದ್ದೆನಲ್ಲ ಎಂದು ತನ್ನನ್ನೇ ಬೈದುಕೊಂಡಳು. ಈ ಜಯಸಿಂಹನ ಜೊತೆಯೇ ಜೀವನ ಕಳೆದರೆ ಹೇಗಿರುತ್ತೋ? ಕ್ರಿಕೆಟ್ ಜಗತ್ತಿನಲ್ಲಿ ತಾರೆಯಾಗುವಂತಹವನು ಇವನು. ಅದಲ್ಲದೆ ನನ್ನನ್ನು ಪ್ರೀತಿಸುತ್ತಿದ್ದಾನೆ ಕೂಡ! ಅದಿತಿ ಜಯಸಿಂಹನತ್ತ ಬಂದು ''ನಾನು ನಿಮ್ಮಿಬ್ಬರ ಜೊತೆ ಬರಲೇ' ಎಂದಳು. ಅದಕ್ಕೆ ಚಟರ್ಜಿ 'ಬನ್ನಿ, ಫೇರ್ ಲೇಡಿ ಆಲ್ವೆಸ್ ವೆಲ್ಕಮ್' ಎಂದರು. ಜಯಸಿಂಹ ಅದಿತಿಯನ್ನು ನೋಡಿ ಕಣ್ಣು ಮಿಣುಕಿಸಿದ.

✸

# ಬರಗಾಲದಲ್ಲೂ ಬದುಕುವವರು.....

- ಎಚ್. ಗೋಪಾಲಕೃಷ್ಣ

ನಿಮಗೆ ಸೀನಪ್ಪನ ವಿಷಯ ಹೇಳಿದ್ದೀನಾ? ಇಲ್ಲ ಅಂತ ಕಾಣುತ್ತೆ. ಅಕಸ್ಮಾತ್ ಈಗಾಗಲೇ ನಿಮಗೆ ಸೀನಪ್ಪನ ವಿಷಯ ಹೇಳಿದ್ದರೆ ಪರವಾಗಿಲ್ಲ ಮತ್ತೆ ಕೇಳಿಸ್ಕೊಳ್ಳಿ, ಯಾಕೆ ಅಂತೀರಾ? ಆತ ಪ್ರತಿದಿನ ಅಪ್‌ಡೇಟ್ ಆಗ್ತಾಲೇ ಇರ್ತಾನೆ ಅದಕ್ಕೋಸ್ಕರ ! ಸೀನಪ್ಪ ನಮ್ಮ ಏರಿಯಾದ ಬ್ಯೂಟಿ ಪಾರ್ಲರಿನ ಓನರು. ಮೊದಲು ಅವನು ಇಲ್ಲಿಗೆ ಬಂದು ಅಂಗಡಿ ತೆರೆದಾಗ ''ಶ್ರೀ ವೆಂಕಟೇಶ್ವರ ಹೇರ್ ಕಟಿಂಗ್ ಸೆಲೂನ್'' ಅಂತ ಬೋರ್ಡು ಬರೆಸಿ ಅಂಗಡಿ ಮುಂದೆ ನೇತು ಹಾಕಿದ್ದ ಹಾಗೂ ಎಲ್ಲಾ ಹೇರ್ ಕಟಿಂಗ್ ಸೆಲೂನ್ ಅಂಗಡಿಗಳ ಮುಂದೆ ಇರುತ್ತವಲ್ಲಾ ಬರೀ ಉದ್ದುದ್ದ ಎಲೆ ಬಿಟ್ಟಿರೋ ಒಂದು ಇಂಗ್ಲಿಷ್ ಜಾತಿ ಗಿಡ, ಅದನ್ನ ಪಾಟ್‌ನಲ್ಲಿ ಹಾಕಿ ಅಂಗಡಿ ಮುಂದೆ ಇರಿಸಿದ್ದ. ಇದು ಆ ಕಾಲದ ಕಥೆ. ಇಪ್ಪತ್ತು ವರ್ಷ ಹಿಂದಿನದ್ದು. ಅವನ ಅಂಗಡೀಗೆ ಒಂದು ಎಂಟು-ಹತ್ತು ಸಲ ಹೋದಮೇಲೆ ಹಳೇಕಾಲದ ಹೆಸರು ಇಟ್ಕೊಂಡ್ರೆ ಗಿರಾಕಿಗಳು ಬರೋಲ್ವೋ, ಹೊಸಾ ಹೆಸರು ಇಟ್ಕೋ ಅಂತ ಉಪದೇಶ ಮಾಡಿದ್ದೆ. ಆ ಸಂದರ್ಭ ಇನ್ನೂ ನನಗೆ ನೆನಪಿದೆ. ನನ್ನ ನೆನಪಿನ ಬಗ್ಗೆ ಯಾರೂ ಏನೂ ಛಕಾರವೆತ್ತುವ ಹಾಗಿಲ್ಲ.

ನೂರು ರೂಪಾಯಿಗೆ ಚಿಲ್ರೆ ಇಲ್ಲ, ಇನ್ನೊಂದು ಗಿರಾಕಿ ಬರೋವರ್ಗೂ ಕಾಯ್ರಿ ಸಾರ್ ಅಂತ ನನ್ನನ್ನ ಅಲ್ಲೇ ಕೂರಿಸಿಕೊಂಡಿದ್ದ.

ಹನ್ನೊಂದು ಗಂಟೆ ಈಗ, ಬೆಳಿಗ್ಗೆಯಿಂದ ಬಂದ ಕಾಸು ಏನು ಮಾಡಿದೆ ಅಂತ ಕೇಳಿದ್ದೆ.

ಬೆಳಿಗ್ಗೆಯಿಂದ ಎಲ್ಲೀ ಸಾರ್ ನೀವೇ ಮೊದಲನೇ ಗಿರಾಕಿ..... ಅಂದಿದ್ದ!

ಆಗಲೇ ಅವನಿಗೆ ಬಿಸಿನೆಸ್ ಪಾಠ ನಾನು ಮಾಡಿದ್ದು. ಅಂಗಡಿ ಹೆಸರು ಬದಲಾಯಿಸೋದರಿಂದ ಹಿಡಿದು ಅದೇನೇನೋ ಟೆಕ್ನಿಕ್ಕು ಹೇಳಿದ್ದೆ.

ಅಂಗಡಿ ಹೆಸರು ನ್ಯೂ ಏಜ್ ಬ್ಯೂಟಿ ಪಾರ್ಲರ್ ಅಂತ ಹೆಸರು ಛೇಂಜ್ ಆಯಿತು.

ಅಂಗಡಿ ಮುಂದೆ ಇದ್ದ ಅವರ ದೈವದ ಗಿಡ ಹೋಗಿ ಅಂಗಡಿ ಒಳಗಡೆ ಇಂಗ್ಲಿಷ್ ಹೂವುಗಳ ಒಂದು ಬೊಕ್ಕೆ ಪ್ರತಿ ಎರಡು ದಿವಸಕ್ಕೆ ಬರೋಹಾಗೆ ಆಯಿತು.

ಹಳೇ ಸಿನಿಮಾ ತಾರೆಯರ ಅಲ್ಲ ಸಿನಿಮಾ ತಾರೆಯರ ಹಳೇಫೋಟೋಗಳ ಬದಲಿಗೆ ಮಲ್ಯನ ಕ್ಯಾಲೆಂಡರು, ಮಾದಕ ಲುಕ್ ಇರುವ ಚೆಲುವೆಯರ ಫೋಟೋಗಳು ಬಂದಿದ್ದವು.

ಅವನ ಟೂಲ್ ಕಿಟ್ ಹೊಸಾ ಬಣ್ಣದ ಪೆಟ್ಟಿಗೇಲಿ ಸ್ಟೋರ್ ಆದವು. ಹೊಸದಾಗಿ ರೇಜರ್ ಬ್ಲೇಡು, ಶಾಂಪೂ, ಘಮಘಮ ಪೌಡರು ಅಲ್ಲದೇ ಸಾವಲಾನ್ ಕ್ರೀಮು, ಆಂಟಿಸೆಪ್ಟಿಕ್ ಸಲ್ಯೂಷನ್ನು ಇವೆಲ್ಲಾ ಅವನ ಕಬೋರ್ಡು ಅಲಂಕರಿಸಿದವು.

ಹೇಳೋದು ಮರೆತಿದ್ದೆ, ಚೌರ ಮಾಡಬೇಕಾದರೆ ಹೊದಿಸ್ತಾರಲ್ಲಾ ಆಬಟ್ಟೆಗಳ ಬಿಳೀ ಬಣ್ಣ ಬೇರೆ ಬಣ್ಣಕ್ಕೆ ಬದಲಾಗಿತ್ತು. ಅದನ್ನೆಲ್ಲಾ ಬದಲಾಯಿಸಿ ಕೆಂಪು ಬಣ್ಣದ್ದು ಮತ್ತು ಪಿಂಕಿನ ಕಲರಿನ ಬಟ್ಟೆ ತರಿಸಿದ್ದೆ. ಟಿಷ್ಯೂ ಪೇಪರು ಬಂಡಲು ಬಂಡಲು ಟೇಬಲ್ ಮೇಲೆ ಇರಿಸಿದ್ದ - ಬಂದವರು ಮೂಗು ಬಾಯಿ ಒರೆಸಿಕೊಳ್ಳಲು - ಇದೆಲ್ಲಾ ಬಿಸಿನೆಸ್ ಟ್ಯಾಕ್ಟಿಸ್ ಅಂತ ಅವನನ್ನ ಒಪ್ಪಿಸಿದ್ದೆ.

ಮತ್ತು ಇದು ಗುಟ್ಟು ನಿಮ್ಮಲ್ಲೇ ಇರಲಿ – ಪ್ರತಿ ಗಿರಾಕಿ ಬಂದಾಗಲೂ ಕಬೋರ್ಡಿನಿಂದ ಮಡಿಸಿ ಇಟ್ಟಿದ್ದ ಹೊದಿಸೋ ಬಟ್ಟೆ ತೆಗೆಯುವ ಹಾಗೆ ತಾಕೀತು ಮಾಡಿದ್ದೆ. ಈ ಬಟ್ಟೆ ಹಿಂದಿನ ಗಿರಾಕಿಯ ಕೆಲಸ ಮುಗಿದ ನಂತರ ಅಲ್ಲೇ ಬಕೀಟಿಗೆ ಹಾಕೋದು, ಗಿರಾಕಿಗಳು ಖಾಲಿ ಆದಮೇಲೆ ಅದೇ ಬಟ್ಟೆ ಮಡಿಸಿ ಕಬೋರ್ಡಿಗೆ ಇಡು ಅಂತ ಸೂಚನೆ ಕೊಟ್ಟಿದ್ದೆ.

ಗಿರಾಕಿಗಳು ಕಾಯೋದಕ್ಕೆ ಅರ್ಧ ಡಜನ್ ಖುರ್ಚಿ, ಎರಡು ಇಂಗ್ಲಿಷ್ ಪೇಪರು, ಒಂದು ತಮಿಳು ಪೇಪರು, ಒಂದು ಕನ್ನಡ ಮಾಸಿಕ ಇವಿಷ್ಟನ್ನ ತರಿಸು ಅಂತ ಹೇಳಿದ್ದೆ.

ಸಾರ್ ಕನ್ನಡ ನ್ಯೂಸ್ ಪೇಪರು ಬೇಡವಾ? ಅಂತ ಪ್ರಶ್ನೆ ಎಸೆದಿದ್ದ. ಕೋಲಾರದ ಕಡೆ ಹುಡುಗ, ಅವನಿಗೆ ಕನ್ನಡಾಭಿಮಾನ ಕೊಂಚ ಹೆಚ್ಚು.

ಅದು ತರಿಸಿದರೆ ನಿನ್ನ ಅಂಗಡಿ ತುಂಬಾ ಜನ ಸೇರಿಬಿಡ್ತಾರೆ, ಈಗ ಯಾವ ಕನ್ನಡಿಗರ ಮನೇಲೂ ಕನ್ನಡ ಪೇಪರು ತರಿಸೋಲ್ಲ, ಎಲ್ಲಾರ ಮನೇಲೂ ಮಕ್ಕಳದ್ದು ರಾಜ್ಯಭಾರ. ನೀನು ಅದನ್ನ ತರಿಸಿದರೆ ನಿನ್ನ ಗಿರಾಕಿಗಳಿಗೇ ಕೂತ್ಕೊಳ್ಳೋಕೆ ಜಾಗ ಇರಲ್ಲ..... ಅಂತ ಸಲಹೆ ನೀಡಿದ್ದೆ.

ಬಾಯಿಂದ ಬಾಯಿಗೆ ಇವನ ನ್ಯೂ ಗೆಟ್ ಅಪ್ಪಿನ ಸಂಗತಿ ಹರಡಿ ಇವನಿಗೆ ಗಿರಾಕಿಗಳೋ ಗಿರಾಕಿಗಳು. ಹದಿಹರೆಯದ ಹುಡುಗರ ಕಣ್ಮಣಿ ಆದ ಈತ.

ಮೊದಮೊದಲು ಒಬ್ಬನೇ ಇದ್ದೋನು ಈಗ ಮೂರು ಜನ ಶಿಷ್ಯರು ಮತ್ತು ಟೋಕನ್ ಸಿಸ್ಟಂ ಮಾಡಿಕೊಂಡಿದ್ದಾನೆ. ಎರಡು ಮೊಬೈಲು ಇದೆ. ಮೊದಲೇ ಅವನಿಗೆ ಫೋನು ಮಾಡಿ ಬರ್ತಾ ಇದೀನೋ ಅಂದರೆ ಸಾಕು ಬನ್ನಿ ಸಾರ್ ಅಂತ ಒಂದು ನಂಬರು ಹೇಳ್ತಾನೆ. ಅಲ್ಲಿ ಹೋಗಿ ನಂಬರು ಹೇಳಿದರೆ ಸಾಕು ನೀವೇ ನೆಕ್ಸ್ಟ್ ಗಿರಾಕಿ! ನಮ್ಮಗಳ ಜತೆ ಸಂಬಂಧ ಚೆನ್ನಾಗೇ ಇಟ್ಕೊಂಡಿದ್ದಾನೆ. ಕಾಲಕಾಲಕ್ಕೆ ಸರಿಯಾಗಿ ನಲವತ್ತೆರೆಡು ಇಂಚಿನ ಟೀವೀ ಬಂದಿದೆ. ಅದರಲ್ಲಿ ಕ್ರೀಡಾಚಾನಲ್ಲು, ಅದಿಲ್ಲ ಅಂದರೆ ತಮಿಳು ಚಾನಲ್ಲು ಇದು ಹಾಕಿರ್ತಾನೆ. ತಮಿಳು ಯಾಕೆ ಅಂದರೆ ತಮಿಳರ ಮನೇಲಿ ಈ ಚಾನಲ್ಲು ಹಾಕೋಲ್ಲವಂತೆ, ಅವರ ಹೆಂಗಸರು ಯಾವಾಗಲೂ ರಜನೀಕಾಂತನ ಪಿಚ್ಚರ್ರೋ ಇಲ್ಲಾ ಅಂದರೆ ಸಂಗೀತವನ್ನೋ ಹಾಕಿರ್ತಾರಂತೆ – ಇದೂ ಸೀನಪ್ಪನೇ ನನಗೆ ಹೇಳಿದ್ದು. ತಮಿಳು ಗಿರಾಕಿಗಳನ್ನ ಸೆಳೆಯಲು ಈ ಟೆಕ್ನೀಕು. ಅದೂ ಯಾವಾಗಲೂ ತಮಾಷೆ ಚಾನಲ್ಲು ಹಾಕಿರ್ತಾನೆ. ತಮಿಳಿನಲ್ಲಿ ಯಾವಾಗಲೂ ತಮಾಷೆ ಚಾನಲ್ಲು ಬರ್ತಾಲೇ ಇರುತ್ತಂತೆ!

ಈಗೆರೆಡು ವರ್ಷದ ಹಿಂದೆ ಗಿರಾಕಿ ಕಡಿಮೆ ಆಗ್ತಿದಾರೆ ಅಂತ ನಡುರಾತ್ರಿ ಬಂದು ಗೋಳು ಹೇಳಿಕೊಂಡಿದ್ದ. ಅಂಗಡೀಗೆ ಒಂದು ವೈಫೈ ಹಾಕಿಸ್ಕೋ ಅಂತ ಐಡಿಯಾ ಕೊಟ್ಟಿದ್ದೆ. ಅದು ಸಕ್ಸೆಸ್ ಆಯಿತು ಅಂತ ವರದಿ ಕೊಟ್ಟಿದ್ದ. ಇದು ಪೂರ್ವೋತ್ತರ.

ಕಳೆದ ಸಲ ಹೋಗಿದ್ದಾಗ ಯಾಕೋ ಸಪ್ಪಗಿದ್ದಾನೆ ಅಂತ ಅನಿಸಿತ್ತು.

ಏನಯ್ಯಾ ಹೊಸಾ ಪ್ರಾಬ್ಲಮ್ಮೇನಾದರೂ ಅಡರಿಕೊಂಡಿದೆಯಾ? ಅಂತ ಕೇಳಿದೆ.

ಇಲ್ಲಾ ಸಾರ್ ಯಾಕೋ ಈಚೆಗೆ ಹುಡುಗು ಗಿರಾಕಿಗಳು ಬಂದರೆ ಸಪ್ಪಗೆ ಬರ್ತಾವೆ, ಸಪ್ಪಗೇ ಹೋಗ್ತಾವೆ.... ಅಂದ.

ಅಯ್ಯೋ ಎಲ್ಲರಿಗೂ ಕೆಲಸದ ಚಿಂತೇನೋ ಕೆಲಸ ಹೋಗುತ್ತೆ ಅನ್ನೋ ಭಯ.... ಅಂದೆ. ಅಮೇರಿಕಾದವರು ಹೆದರಿಸ್ತಾ ಇದಾರೆ ನಿಮ್ಮನ್ನ ಓಡಿಸ್ತೀವೀ ಅಂತ.

ಅವನ ಮುಖದಲ್ಲಿ ಚಿಂತೆ ಹೆಚ್ಚಾಯಿತು.

ಅದಕ್ಕೇನೂ ಯೋಚಿಸಬೇಡ. ಗ್ರಹರಾಶಿ ಕುರಿತು ರಾಶಿ ರಾಶಿ ಪುಸ್ತಕ ಸಿಗುತ್ತೆ. ತಂದು ಕೊಡ್ತೀನಿ. ಒಂದೆರಡು ಓದ್ಕೋ.... ಗಿರಾಕಿಗಳಿಗೆ ಸಾಂತ್ವನ ಹೇಳು..... ಅಂತ ಮತ್ತೊಂದು ಐಡಿಯಾ ಬಿಟ್ಟಿದ್ದೆ.

ಈ ಐಡಿಯಾ ಕೊಟ್ಟು ಎರಡು ತಿಂಗಳಾಗಿತ್ತು. ಐಡಿಯಾ ಹೇಗೆ ಕೆಲಸ ಮಾಡಿದೆ ಅನ್ನೋ ಕುತೂಹಲ ಹುಟ್ಟಿತ್ತು. ಅವನಿಗೆ ಫೋನಾಯಿಸಿ ಟೋಕನ್ ನಂಬರು ತೆಗೆದುಕೊಳ್ಳದೇ ನೇರ ಅವನ ಅಂಗಡೀಗೆ ನಡೆದೆ. ಆಚೆ ಇನ್ನೂ ಆರು ಚೇರು ಸೇರಿತ್ತು. ಒಂಭತ್ತರಲ್ಲಿ ಗಿರಾಕಿ ಇದ್ದರು. ಏಳು ಹುಡುಗರು ಲ್ಯಾಪ್ ಟಾಪಿನಲ್ಲಿ ಆಟ ಆಡುತ್ತಿದ್ದರು. ಒಂಭತ್ತನೇ ಚೇರಿನಲ್ಲಿ ಮುದುಕರೊಬ್ಬರು ಕೂತು ಕಷ್ಟಪಟ್ಟು ತಮಿಳು ಪೇಪರು ಓದಲು ಪ್ರಯತ್ನ ಮಾಡುತ್ತಿದ್ದರು. ಎಂಟನೇ ಚೇರಿನಾತ ಅದ್ಯಾರಿಗೋ ಫೋನಿನಲ್ಲಿ ಸಂಪರ್ಕ ಕಲ್ಪಿಸುತ್ತಿದ್ದ. ಅಂಗಡೀಲಿ ಅರೆ ಸ್ಮಶಾನ ಮೌನ ನೆಲೆಸಿತ್ತು. ಹತ್ತನೇ ಚೇರಿನಲ್ಲಿ ಕೂತೆ. ಎದುರಿನ ಟೀವೀನಲ್ಲಿ ತಮಿಳು ಚಾನಲ್ಲು ಬರ್ತಾ ಇತ್ತು, ನೋಡ್ತಾ ಕೂತೆ. ಸೆಲೂನಿನ ಒಳಗಡೆಯಿಂದ ಅಲ್ಲಿನ ಮಾತುಗಳು ಕೇಳಿಸುತ್ತಾ ಇತ್ತು. ಅದಕ್ಕೆ ಕಿವಿಕೊಟ್ಟೆ.

ಅಂಗಾರಕ ಆರನೇ ಮನೇಲಿ ಇರೋದು, ಅವನಿಗೆ ಎದುರಿಗೆ ಚಂದ್ರ, ಏಳನೇ ಮನೇಲಿ ಬುಧ - ಯಾರೇನೂ ಅಲ್ಲಾಡಿಸೋಕ್ಕೆ ಆಗಲ್ಲ. ಹೀಗೆ ಇನ್ನೂ ಆರು ತಿಂಗಳು ನಡೀತದೆ, ಆರು ತಿಂಗಳಾದ ಮೇಲೆ ಪರಿಸ್ಥಿತಿ ಇನ್ನೂ ಉತ್ತಮ ಆಗುತ್ತೆ.. ನೀವು ಹಿಂದೆ ಕಂಡಿಲ್ಲದೇ ಇರೋ ಅಷ್ಟು ಎತ್ತರಕ್ಕೇ ಹೋಗ್ತೀರೀ..... ಇದು ನಮ್ಮ ಸೀನಪ್ಪನ ಧ್ವನಿ! ಆಶ್ಚರ್ಯ ಆಗೋಯ್ತು. ಅರೇ ಇವನು ಯಾವಾಗ ಜ್ಯೋತಿಷ್ಯ ಕಲಿತನಪ್ಪಾ ಅಂತ. ಈ ಅಂಗಡಿ ಬಿಟ್ಟು ಜ್ಯೋತಿಷ್ಯ ಅಂಗಡಿ ಶುರು ಮಾಡಿಬಿಡ್ತಾನಾ ಅಂತ ದಿಗಿಲೂ ಆಯಿತು. ಕಮ್ಮಾರ ವೀರಭದ್ರಾಚಾರಿ ಜ್ಯೋತಿಷಿ ಆಗಿದ್ದು ನೆನಪಿಗೆ ಬಂತು.

ದೀರ್ಘಾಯುಷ್ಮಾನ್ ಭವ ಅಂತ ಸೀನಪ್ಪ ಹೇಳಿದ್ದು ಕೇಳಿಸಿತು. ಬಾಗಿಲು ಸರಿಸಿ ನಲವತ್ತರ ನಡುವಯಸ್ಸಿನವರು ಆಚೆ ಬಂದರು, ಈಗತಾನೇ ತಲೇಗೆ ಡೈ ಹಾಕಿಸಿಕೊಂಡಿದ್ದು ಕಾಣಿಸುತ್ತಿತ್ತು.

ಟೋಕನ್ ಇಪ್ಪತ್ಮೂರು ಬನ್ನಿ ಸಾರ್ ಅನ್ನುವ ಸೀನಪ್ಪನ ಧ್ವನಿ ಕೇಳಿಸಿತು.

ಇಪ್ಪತ್ಮೂರು ಏಳಲಿಲ್ಲ. ನಾನು ಹಾಗೇ ಕೂತೆ. ಇಪ್ಪತ್ಮೂರು ಕಾಫೀಗೆ ಹೋಗಿದ್ಯೇನೋ ಅಂತ.

ಆಂಟಿ ರೂಮು ಬಾಗಿಲು ತೆಗೀತು. ಒಳಗಿನಿಂದ ಸೀನಪ್ಪ ಆಚೆ ಬಂದ.

ಸಾರ್ ನಿಮ್ಮದೇನೇ ಇಪ್ಪತ್ಮೂರು, ಬನ್ನಿ ಅಂದ!

ಇನ್ನೂ ಸ್ವಲ್ಪ ಹೊತ್ತು ಆಚೇನೇ ಕೂತು ಸೀನಪ್ಪನ ವ್ಯವಹಾರ ಗಮನಿಸಬೇಕು ಅಂತ ಪ್ಲಾನ್ ಮಾಡಿದ್ದೆ. ಈಗ ಅವನೇ ಬಂದು ಕೂಗಿದ ಮೇಲೆ ಏನು ಮಾಡಲಿ? ಎದ್ದೆ, ಅವನ ಹಿಂದೆ ಹೋದೆ.

ಲೇಯ್ ಹನುಮಾ ಸ್ವಲ್ಪ ನೋಡ್ಕೊಳ್ಳೋ.... ಅಂತ ಶಿಷ್ಯನಿಗೆ ಹೇಳಿದ.

ಕಟ್ಟಿಂಗ್ ರೂಮಿಗೆ ಕರೆದೊಯ್ಯುವ ಬದಲಿಗೆ ಪಕ್ಕದ ಬಾಗಿಲಿನಿಂದ ಆಚೆ ಕರಕೊಂಡು ಹೋದ. ಬನ್ನಿ ಕಾಫಿ ಕುಡ್ಯೋಣ ಅಂದ.

ಕಾರಿನ ಬಾಗಿಲು ತೆಗೆದು ಪಕ್ಕದಲ್ಲಿ ಕೂಡಿಸಿಕೊಂಡ.

ಆಚೆ ಯಾರು ಬರ್ತಾರೆ ಅಂತ ಗೊತ್ತಾಗೋ ರೀತಿ ವ್ಯವಸ್ಥೆ ಒಳಗೆ ಮಾಡಿಕೊಂಡಿದೀನಿ. ನೀವು ಬಂದಿದ್ದು ಆಗಲೇ ಗೊತ್ತಾಯ್ತು ಅಂದ. ಮೂರು ಕಿಲೋಮೀಟರು ದೂರದ ಕಾಫಿ ಹೋಟಲ್ಲಿಗೆ ಹೋದೆವು. ಮಸಾಲೆ, ಉದ್ದಿನವಡೆ ಮುಗಿಸಿ ಕಾಫಿ ಕುಡೀತಾ ಕೂತೆವು.

ಕೆಲಸ ಹೋಗಿಬಿಡುತ್ತೆ ಅನ್ನೋ ಟೆನ್ಷನ್ನು ಸಾರ್, ಕಟಿಂಗ್‌ಗೆ ಬರೋರಿಗೆ. ಅಲ್ಲೇ ಕೆಲವರು ಅತ್ತುಬಿಡೋರು. ಯಾವುದಾದರೂ ಗಿರಾಕಿ ಇಲ್ಲೇ ಗೊಟಕ್ ಅಂದರೆ ನಾನು ಅಂಗಡಿ ಮುಚ್ಕೊಂಡು ತಲೆ ಮರೆಸಿಕೊಂಡು ಓಡಬೇಕು ಅಷ್ಟೇ. ಆಗಲೇ ನೀವು ಐಡಿಯಾ ಕೊಟ್ರಿ ಜ್ಯೋತಿಷ್ಯ ಓದ್ಕೋ ಅಂತ ಪುಸ್ತಕಾನೂ ತಂದುಕೊಟ್ರಿ. ಎರಡು ದಿವಸ ಪುಸ್ತಕ ಓದ್ದೇ.. ಏನೂ ತಿಳೀಲಿಲ್ಲ. ಬೆಳಗ್ಗೆ ಹೊತ್ತು ಎಲ್ಲಾ ಚಾನಲ್ಲಿನಲ್ಲೂ ಜ್ಯೋತಿಷ್ಯ ಬರುತ್ತೆ ನೋಡು ಅಂತ ಹೆಂಡಿರು ಹೇಳಿದರು. ಒಂದುವಾರ ನೋಡ್ದೆ. ಅಬ್ಬಾ ಅಬ್ಬಾ ಅಬ್ಬಾ ಅದೇನು ಬುರುಡೆ ಹೊಡೀತಾರೆ ಸಾರ್. ಅವರ ತರಹ ಮಾತಾಡೋದು ಅಭ್ಯಾಸ ಮಾಡ್ದೆ. ಮೊದಲನೇ ಗಿರಾಕಿ ಹತ್ತಿರ ಅವನ ಸಮಸ್ಯೆ ಕೇಳದೇನೇ ಪರಿಹಾರ ಹೇಳ್ದೆ. ಕ್ಲಿಕ್ ಆಯ್ತು. ಈಗ ಎಲ್ಲಾರಿಗೂ ಅದೇ ಪರಿಹಾರ ಗ್ರಹಗಳು ಮಾತ್ರ ಬೇರೆ ಬೇರೆ ಕಡೆ ಇರುತ್ತೆ ಅಷ್ಟೇ ಅಂದ!

ಬಿಲ್ ಅವನೇ ಕೊಟ್ಟ. ಸಾರ್ ಬದುಕೋ ದಾರಿ ಹೇಳಿಕೊಟ್ರೀ ಅಂದ.

ಸೀನಪ್ಪ ಯಾರು ಯಾರಿಗೂ ಬದುಕೋ ದಾರಿ ಹೇಳಿಕೊಡೋದೂ ಸಾಧ್ಯವಿಲ್ಲವೋ. ನೀನು ಬದುಕೋದು ಕಲ್ತಿದ್ದೀ ಅದೇ ನಿನ್ನನ್ನು ಕಾಪಾಡುತ್ತೆ ಅಷ್ಟೇ...... ಅಂದೆ.

ದಾರೀಲಿ ಗಾಡಿ ನಿಲ್ಲಿಸಿದ. ಇಲ್ಲೇ ಇರಿ ಬಂದೆ ಅಂತ ಹೋದ. ವಾಪಸ್ಸು ಬಂದಾಗ ಒಂದು ದೊಡ್ಡ ಚೀಲ ಅದರಲ್ಲಿ ಎದ್ದು ಕಾಣಿಸುತ್ತಿದ್ದ ಸೇಬು, ಅದರ ಕೆಳಗೆ ಬೇರೆ ಬೇರೆ ಹಣ್ಣು ಇದ್ದುವೇನೋ....

ಇದು ತಗೊಳ್ಳಿ ಮನೇಗೆ, ಅಮ್ಮಾವ್ರನ್ನ ಕೇಳಿದೆ ಅಂತ ಹೇಳೀ ಅಂದ.

ಲೇ ಸೀನಪ್ಪ ಕಟಿಂಗ್‌ಗೆ ಅಂತ ನಾನು ಬಂದಿರೋದು, ಇದನ್ನು ತಗೊಂಡು ಮನೇಗೆ ಹೋದರೆ ಸೇರಿಸೋಲ್ವೋ ಅಂದೆ. ಸೆಲೂನಿಗೆ ಹೋಗಿ ಅಂಗಡಿಯಿಂದ ಶಾಂಪೂ ತಂದರೂ ನನ್ನಾಕೆ ಒಪ್ಪಲ್ಲ. ಅಂತಹದರಲ್ಲಿ ಹಣ್ಣು ತಗೊಂಡು ಹೋದರೆ ಅದು ಸೀದಾ ಕಸದ ಗುಂಡೀಗೇ ಸೇರೋದು.

ಸೀನಪ್ಪ ಹೋ ಅಂತ ನಕ್ಕ. ಬ್ಯಾಗು ಕೊಡಿ ಇಲ್ಲಿ ಸಂಜೇ ನಾನೇ ಬರ್ತೀನಿ. ಈಗ ಅಂಗಡೀಗೆ ಬನ್ನಿ, ಕಟಿಂಗ್ ಮುಗಿಸಿಬಿಡ್ತೀನಿ..... ಅಂದ. ಕಟಿಂಗ್ ಅಂಗಡೀಗೆ ಅವನ ಸಂಗಡ ಬಸವನ ಹಿಂದೆ ಬಾಲದ ಹಾಗೆ ನಡೆದೆ.

ಬರಗಾಲದಲ್ಲೂ ಕೆಲವರು ಸುಖವಾಗಿ ಬದುಕುತ್ತಾರಂತೆ, ಸೀನಪ್ಪ ಈ ಜಾತಿಗೆ ಸೇರಿದಾತ ಅನಿಸಿತು!

✸

# ವೀಕೆಂಡ್ ವಿತ್ ಗುಂಡೇಶ್

**– ಸಿ.ಆರ್. ಸತ್ಯ**

**ಸ್ವಾ**ಗತ! ಸ್ವಾಗತ!! ಸ್ವಾಗತ!!! ನಾನು ನಿಮ್ಮ ಗುಂಡೇಶ್. ಗೊಂದಲ ಚ್ಯಾನಲ್‌ನ ಈ ವಿಶಿಷ್ಟ ಕಂತಿನ ಇಂದಿನ ಪ್ರಾಯೋಜಕರು: ಕಟ್ ಸ್ಟ್ರ್ಯಾಪ್ ಹವಾಯ್ ಚಪ್ಪಲ್ಸ್ – ಬೆಂಗಳೂರು, ಪ್ಯೂರ್ ಲೆದರ್ ಪರ್ಸಸ್ ಲಿಮಿಟೆಡ್ – ಯಲಹಂಕ, ಹಾರ್ಡ್ ಫಿಕ್ಸ್ ಹ್ಯಾಂಡ್ ಕಫ್ ಇಂಡಿಯಾ ಲಿಮಿಟೆಡ್ ಮತ್ತು ಶಾರ್ಪ್ ಬ್ಲೇಡ್ ಎಂಪೋರಿಯಮ್ – ಪರಪ್ಪನ ಅಗ್ರಹಾರ, ಬೆಂಗಳೂರು.

ಪ್ರಿಯ ವೀಕ್ಷಕರೇ, ನಿಮಗೂ ನಮ್ಮ ನಾಡಿನ ವಿಖ್ಯಾತ ವ್ಯಕ್ತಿಗಳ ಪರಿಚಯಗಳು ಬೇಜಾರು ತಂದಿರಬಹುದು. ಹಾಗಾಗಿ ನಿಮಗಾಗಿ ನಮ್ಮ ಗೊಂದಲ ಚ್ಯಾನಲ್‌ನಿಂದ ಒಂದು ಸರ್ಪ್ರೈಸ್! ಅದೇನೆಂದರೆ, ಇವತ್ತಿನ ನಮ್ಮ ಅತಿಥಿ – ಒಬ್ಬ ಕುಖ್ಯಾತ ವ್ಯಕ್ತಿ! ಸೋ, ಲೇಡೀಸ್ ಎಂಡ್ ಜಂಟಲ್ಮೆನ್, ಪ್ಲೀಸ್ ವೆಲ್ಕಮ್ ಪಿಕ್ ಪಾಕೆಟ್ ಪಾಪಣ್ಣ!! ಬೆಂಗಳೂರು ಪೋಲೀಸರಿಗೆ ಇಪ್ಪತ್ತು ವರ್ಷಗಳಿಂದ ಚಳ್ಳೇಹಣ್ಣು ತಿನ್ನುಸ್ತಿರೋ ಮಹಾನುಭಾವ!

(ಓದುಗರು ಕ್ಷಮಿಸಬೇಕು. ಈ ಲೇಖನದಲ್ಲಿ ಪಾಪಣ್ಣ ಬರುತ್ತಲೇ ಕೇಳಿ ಬಂದ ಹಿನ್ನೆಲೆ ಸಂಗೀತ, ಅಖಂಡ ಕರತಾಡನ ನಿಮಗೆ ಪರಿಚಯ ಮಾಡಿಸೋಕ್ಕೆ ಆಗಲ್ಲ).

**ಗುಂಡೇಶ್ :** ಇವತ್ತು ನಾವು ಧನ್ಯರು. ನಮ್ಮ ಕಾರ್ಯಕ್ರಮಕ್ಕೆಂದೇ ಕೋರ್ಟ್‌ನಿಂದ ಜಾಮೀನು ಪಡೆದುಕೊಂಡು ನಮ್ಮ ಪಾಪಣ್ಣನವರು ಇಲ್ಲಿಗೆ ನಿಮಗಾಗಿ ಬಂದಿದ್ದಾರೆ. ತುಂಬಾ ಧನ್ಯವಾದಗಳು ಪಾಪಣ್ಣನವರೇ ವೆಲ್ಕಮ್ ಟು ದಿ ಶೋ.

**ಪಾಪಣ್ಣ :** ಥ್ಯಾಂಕ್ಸ್, ಇವತ್ತು ನಿಮ್ಮ ಚ್ಯಾನಲ್‌ನಲ್ಲಿ ಒಬ್ಬ ವಿ.ಐ.ಪಿ. ಆಗಿ ಬಂದಿರೋದು ನನಗೂ ತುಂಬಾ ಸಂತೋಷವಾಗ್ತಾ ಇದೆ. ಇಲ್ಲಿಯ ತನಕ, ನಾನು ಟೀವೀನಲ್ಲಿ ಪೋಲೀಸ್ರು ಎಳಕೊಂಡು ಹೋಗ್ತಿದ್ದಾಗ, ಚಿಕ್ಕಪೇಟೇಲಿ ಜನರ ಕೈಲಿ ಒದೆ ತಿನ್ತಾ ಇದ್ದಾಗ ಕಾಣಿಸ್ಕೊತಾ ಇದ್ದೆ. ಆದರೆ, ಇವತ್ತು ನನ್ನನ್ನ ನೀವೂ, ಗೊಂದಲ ಚ್ಯಾನಲ್‌ನವರು ಈ ಸಿಂಹಾಸನದ ಮೇಲೆ ಕೂರಿಸಿದ್ದೀರಿ. ಇದಕ್ಕಿಂತ ನನಗೆ ಇನ್ನೇನು ಬೇಕು?

**ಗುಂಡೇಶ್ :** (ಪಾಪಣ್ಣನ ಕುರ್ಚಿಯ ಸುತ್ತಲೂ ಸುತ್ತುತ್ತಾ) ಪಿಕ್ ಪಾಕೆಟ್ ಪಾಪಣ್ಣ ಜನನ: 1990, ತಂದೆ – ರೌಡಿ ರಂಗಪ್ಪನವರು, ತಾಯಿ – ಚೂಟಿ ಚೆನ್ನಮ್ಮನವರು. ಒಬ್ಬನೇ ಮಗ. ತಂದೆಯೇ ಗುರು. ಮೂರನೇ ವರ್ಷದಿಂದಲೇ ಪಿಕ್ ಪಾಕೆಟ್ ವೃತ್ತಿಗೆ ಇಳಿದ ಮಹಾನುಭಾವರು. ಹತ್ತನೇ ವಯಸ್ಸಿಗೇ ತಂದೆಯಿಂದ ತರಬೇತಿ ಮುಗಿಸಿಕೊಂಡು, ಬಳೇಪೇಟೆಯಲ್ಲಿ ಕಾರ್ಯನಿಮಿತ್ತರಾಗಿದ್ದು, ನಂತರ ಹಂತಹಂತವಾಗಿ ತಮ್ಮ ಕಾರ್ಯ ವೈಖರಿಯನ್ನು ಸುಭಾಶ್ ನಗರದ ಬಸ್ ಸ್ಟ್ಯಾಂಡ್, ಬೆಂಗಳೂರು ರೈಲ್ವೇ ಸ್ಟೇಷನ್, ಜಯನಗರ ನಾಲ್ಕನೇ ಬ್ಲಾಕ್ – ಹೀಗೆ ಬೆಂಗಳೂರಿನಲ್ಲೆಲ್ಲಾ

ವಿಸ್ತರಿಸಿದ್ದು, ತಮ್ಮ ಹದಿನೈದು ವಯಸ್ಸಿನಲ್ಲೇ ಲಿಮ್ಕಾ ಪಿಕ್ ಪಾಕೆಟ್ ರೆಕಾರ್ಡ್ ಮಾಡಿದ ಪುಣ್ಯಾತ್ಮ. ಸಾವಿರದ ಏಳ್ನೂರು ಪರ್ಸ್‌ಗಳನ್ನು ಎಗರಿಸಿದ್ದು, ಎರಡು ಸಾವಿರಕ್ಕೂ ಹೆಚ್ಚು ಜೇಬುಗಳನ್ನು ಕತ್ತರಿಸಿದ್ದು, ಮೂವತ್ತು ಸಲ ಪೋಲೀಸ್ ಲಾಕ್ ಅಪ್‌ನಲ್ಲಿ ವಾಸ, ಎಂಟು ಸಲ ಪರಪ್ಪನ ಅಗ್ರಹಾರದಲ್ಲಿ ವಾಸ, ಅಲ್ಲೇ ತಮ್ಮ ಜೀವನ ಪ್ರೇಯಸಿಯನ್ನು ನೋಡಿ, ಪ್ರೀತಿ ಮಾಡಿ, ಲಪಟಾಯಿಸಿದ್ದೂ ಕೂಡ. ರಾಜ್ಯದ ಪೋಲೀಸ್ ಠಾಣೆಗಳಲ್ಲಿ, ಅತಿ ಹೆಚ್ಚು ಬೋರ್ಡ್‌ಗಳಲ್ಲಿ ಇವರ ಛಾಯಾ ಚಿತ್ರದ ಪ್ರಕಟಣೆ, ಪ್ಯಾಲೆಸ್ ಗ್ರೌಂಡ್ಸ್‌ನಲ್ಲಿ ಆಗೋ ರಾಜಕೀಯ ಮೇಳಗಳಲ್ಲಿ, ಮೊದಲನೆಯ ಬಾರಿಗೆ ಮಂತ್ರಿಗಳ ಪಾಕೆಟ್‌ಗಳನ್ನೇ ಲಪಟಾಯಿಸಿದ ವೀರ! ಹೇಳಿ, ಪಾಪಣ್ಣನವರೇ, ನೀವು ಹೇಗೆ ಹೀಗೆ ಸಾಧಕರಾದ್ರಿ? ಯಾರು ನಿಮ್ಮ ಗುರುಗಳು?

**ಪಾಪಣ್ಣ** : ಇದು ನನಗೆ ಪಿತ್ರಾರ್ಜಿತವಾಗಿ ಬಂದ ಗುಣ. ನಮ್ಮ ತಂದೆಯೇ ನನ್ನ ಗುರು. ನಾನು ಹುಟ್ಟಿದಾಗಿನಿಂದ ಇಲ್ಲಿಯವರೆಗೂ ಇವತ್ತು ನಾನು ಒಂದು ಹೆಸರು ಗಳಿಸಿದ್ದೀನಿ ಅಂತ ಅಂದರೆ, ಅದು ನನ್ನ ತಂದೆಯಿಂದಲೇ, ನನ್ನ ತಾಯಿಯ ಪ್ರೋತ್ಸಾಹದಿಂದಲೇ ಮತ್ತು ನನ್ನ ಹೆಂಡತಿಯ ಸಹಾಯದಿಂದಲೇ.

**ಗುಂಡೇಶ್** : ನೀವು ಮೊಟ್ಟ ಮೊದಲ ಬಾರಿಗೆ ಪಿಕ್ ಪಾಕೆಟ್ ಯಾವಾಗ ಮಾಡಿದ್ದು?

**ಪಾಪಣ್ಣ** : ನಿಜ ಹೇಳಬೇಕು ಅಂದರೆ ಅದು ನನಗೆ ಜ್ಞಾಪಕವೇ ಇಲ್ಲ! ನಮ್ಮ ತಾಯಿಯ ಪ್ರಕಾರ, ನಾನು ಮೂರು ವರ್ಷದ ಮಗು ಆಗಿದ್ದಾಗ, ಒಂದು ದಿನ ನಮ್ಮ ತಂದೆ ನನ್ನನ್ನ ಎತ್ತಿಕೊಂಡು ಲಾಲ್‌ಬಾಗ್‌ಗೆ ಹೋಗ್ತಿದ್ದಾಗ, ಅವರಿಗೆ ಗೊತ್ತಿಲ್ಲದೇನೆ ನಾನು ಅವರ ಪರ್ಸನ್ನೇ ಎಗರಿಸಿದ್ದೆ ಅಂತ ಹೇಳ್ತಾರೆ. ಆಗ ನಮ್ಮ ತಂದೆಯವರಿಗೆ ಆಗಿದ್ದ ಸಂತೋಷ ಅಷ್ಟಿಷ್ಟಲ್ಲ. ನಮ್ಮನ್ನೆಲ್ಲಾ ಅಲ್ಲೇ ಎಮ್.ಟೀ.ಆರ್.ಗೆ ಕರೆದುಕೊಂಡು ಹೋಗಿ, ನಮಗೆಲ್ಲಾ ಜಾಮೂನ್, ದೋಸೆ ಕೊಡಿಸಿ, ನನ್ನ ಮಗ ನನಗಿಂತ ಚೂಟಿ ಆಗ್ತಾನೆ ಅಂತ ಸಂತೋಷಪಟ್ಟಿದ್ದರಂತೆ. ಸರಿ, ನನಗೆ ಐದು ವರ್ಷಗಳು ಆದಾಗಲೇ, ನಮ್ಮ ತಂದೆಗೆ ಅಸಿಸ್ಟೆಂಟ್ ಆಗಿ ಬಸ್ ಸ್ಟ್ಯಾಂಡ್, ರೈಲ್ವೇ ಸ್ಟೇಷನ್‌ನಲ್ಲಿ ಉನ್ನತ ತರಬೇತಿ ಪಡ್ಕೊಂಡೆ. ನಮ್ಮ ತಾಯಿಯವರಿಂದ ಉಗುರಿನ ಒಳಗೆ ಬ್ಲೇಡ್ ಹೇಗೆ ಸಿಕ್ಕಿಸ್ಕೊಂಡು ಜನರ ಪ್ಯಾಂಟ್ ಜೇಬುಗಳನ್ನು ಹೇಗೆ ಕತ್ತರಿಸೋದು ಅಂತ ಕಲಿತ್ಕೊಂಡೆ. ಮೊದಲು ಮೊದಲು ಅವರು ಟೊಮ್ಯಾಟೋ ಮೇಲೆ ಒಂದು ಬಟ್ಟೆ ಇಟ್ಟು, ಟೊಮ್ಯಾಟೋ ಮೇಲೆ ಗೆರೆ ಬರದ ಹಾಗೆ ಬಟ್ಟೇನ ಹೇಗೆ ಕತ್ತರಿಸೋದು ಅಂತ ಹೇಳಿಕೊಟ್ರು. ನಮ್ಮ ತಂದೆ, ಪೋಲೀಸರನ್ನ ಹೇಗೆ ಗುರುತಿಸೋದು, ಹೇಗೆ ಜಾಗದಿಂದ ನುಸುಳಿಕೊಳ್ಳೋದು, ಸಿಕ್ಕಿ ಹಾಕಿಕೊಂಡರೆ ಹೇಗೆ ನಾಟಕ ಮಾಡೋದು, ಯಾವ ಯಾವ ಪೋಲೀಸ್ ಲಾಕಪ್‌ಗಳಲ್ಲಿ ಎಂತಹ ಬಾಗಿಲುಗಳು, ಕಿಟಕಿಗಳು ಇವೆ. ಎಲ್ಲಿ ಕಾನ್‌ಸ್ಟೇಬಲ್‌ಗಳು ಜಾಸ್ತಿ ನಿದ್ದೆ ಮಾಡ್ತಿರ್ತಾರೆ ಅಂತೆಲ್ಲಾ ಮಾಹಿತಿ ಕೊಟ್ರು.

**ಗುಂಡೇಶ್ :** ನಿಮ್ಮ ಹೆಂಡತಿ ನಿಮಗೆ ಹೇಗೆ ಸಹಾಯ ಮಾಡ್ತಾರೇ?

**ಪಾಪಣ್ಣ :** ಅವಳ ಜ್ಞಾಪಕ ಶಕ್ತಿ ಹೇಗಿದೆ ಅಂದರೆ, ನಾನು ಯಾವತ್ತು ಎಲ್ಲೆಲ್ಲಿ ಪರ್ಸ್ ಎಗರಿಸಿದ್ದೆ ಅಂತ ನೆನಪಿನಲ್ಲಿ ಇಟ್ಟುಕೊಂಡು, ನಾನು ಯಾವತ್ತು ಯಾವ ಯಾವ ಹೊಸ ಜಾಗಗಳಿಗೆ ಹೋಗಬೇಕು ಅಂತ ಹೇಳ್ತಾಳೆ. ಪರ್ಸ್‌ಗಳನ್ನ ಖಾಲಿ ಮಾಡಿ, ಇದ್ದ ದುಡ್ಡೆಲ್ಲಾ ಎಣಿಸಿ, ಪರ್ಸ್‌ಗಳನ್ನ ಕಣ್ಮರೆ ಮಾಡೋದೂ ಅವಳೇನೆ. ನಾನು ಮೊದಲೆಲ್ಲಾ ಗಂಡಸರ ಪರ್ಸ್‌ಗಳನ್ನೇ ಎಗರಿಸುತ್ತಿದ್ದೆ. ಅವಳು ನನಗೆ ಹೆಂಗಸರ ಪರ್ಸ್‌ಗಳು ಹೇಗಿರುತ್ತವೆ, ಯಾವ ಯಾವ ಬ್ರಾಂಡ್ ಪರ್ಸ್‌ಗಳಲ್ಲಿ ಎಷ್ಟು ಒಳ ಪದರುಗಳು ಇರುತ್ವೆ ಅಂತೆಲ್ಲಾ ನನಗೆ ತಿಳಿಸ್ತಾಳೆ. ಒಂದೊಂದು ಸಲ ಬಸ್‌ಗಳಲ್ಲಿ ನನ್ನ ಪಕ್ಕಾನೇ ಇದ್ದು, ನನ್ನ ಕೈನಿಂದ ಪರ್ಸ್‌ನ ತೊಗೊಂಡು, ಮಿಂಚಿನ ತರಹ ಮರೆಯಾಗೋಳು ನನ್ನ ಹೆಂಡತೀನೆ.

**ಗುಂಡೇಶ್ :** ಅಬ್ಬಾ! ಅನ್ಯೋನ್ಯ ಸಂಸಾರ ಅಂದರೆ ಹೀಗಿರಬೇಕು! ಲೇಡೀಸ್ ಎಂಡ್ ಜಂಟಲ್ಮೆನ್, ಕೊಡಿ ಒಂದು ಭಾರಿ ಚಪ್ಪಾಳೆ!!

(ಮತ್ತೊಮ್ಮೆ ಕ್ಷಮಿಸಿ, ನಿಮಗೆ ಇಲ್ಲಿ ಚಪ್ಪಾಳೆ ಶಬ್ದ ಕೇಳಿಸೋಕ್ಕೆ ಆಗಲ್ಲ)

**ಪಾಪಣ್ಣ :** ಅಷ್ಟೇ ಅಲ್ಲ. ಇಲ್ಲಿ ನನ್ನ ಮಾವನವರನ್ನೂ ನಾನು ಸ್ಮರಿಸಿಕೊಳ್ಳಬೇಕು. ಅವರ ಖರ್ಚಿನಲ್ಲೇ ನನ್ನನ್ನ ಅವರು ಬ್ಯಾಂಕಾಕ್‌ಗೆ ಕಳಿಸಿ, ಅಲ್ಲಿ ಪಿಕ್ ಪಾಕೆಟ್‌ಗಳು ಹೇಗೆ ಕೆಲಸ ಮಾಡ್ತಾರೆ ಅಂತ ತಿಳಿದುಕೊಳ್ಳೋಕ್ಕೆ ಅವಕಾಶ ಮಾಡಿಕೊಟ್ರು. (ಈಗ ಸದ್ದಿಲ್ಲದೆಯೇ, ಪಾಪಣ್ಣನ ಹಿಂದಿನಿಂದ ಅವನ ತಂದೆ, ತಾಯಿ, ಹೆಂಡತಿ, ಮಾವ ಬಂದು ಅವನ ಸುತ್ತಲೂ ನಿಲ್ಲುತ್ತಾರೆ. ಪಾಪಣ್ಣನ ಕಣ್ಣಲ್ಲಿ ನೀರು ಸುರಿಯುತ್ತೆ. ಎಲ್ಲರೂ ಒಬ್ಬೊಬ್ಬರಾಗಿ ಪಾಪಣ್ಣನನ್ನ ತಬ್ಬಿಕೊಳ್ಳುತ್ತಾರೆ. ಪಾಪಣ್ಣನ ತಂದೆ ರೌಡಿ ರಂಗಪ್ಪ ಗುಂಡೇಶ್‌ನನ್ನೂ ತಬ್ಬಿಕೊಂಡು, ತಕ್ಷಣ ತಮ್ಮ ಕೈಯಲ್ಲಿರೋ ಒಂದು ಪರ್ಸ್‌ನ ವೀಕ್ಷಕರಿಗೆ ತೋರಿಸ್ತಾರೆ.)

**ಗುಂಡೇಶ್ :** ಮೈ ಗಾಡ್! ರಂಗಣ್ಣನವರು ಆಗಲೇ ನನ್ನ ಪರ್ಸ್‌ನ ಎಗರಿಸೀದಾರೆ! ಇವರೇ ಇಷ್ಟು ಚೂಟಿ ಆದರೆ, ಇನ್ನು ನಮ್ಮ ಪಾಪಣ್ಣನವರು ಇನ್ನೆಷ್ಟು ಚೂಟಿ ಇರಬೇಕು?

ಲೇಡೀಸ್ ಎಂಡ್ ಜಂಟಲ್ಮೆನ್, ಎಂತಾ ಅಪ್ಪ-ಮಗ ಕಾಂಬಿನೇಷನ್ನು! ಕೊಡಿ ಒಂದು ದೊಡ್ಡ ಕರತಾಡನ!

(ಸೇಮ್ ಪ್ರಾಬ್ಲಮ್, ನಿಮಗೆ ಕರತಾಡನ ಕೇಳಲ್ಲ). ಅಂದ ಹಾಗೆ, ಪಾಪಣ್ಣ ನಿಮ್ಮ ವೃತ್ತಿಜೀವನದಲ್ಲಿ ನಿಮಗೆ ಅನೇಕ ಸಹೋದ್ಯೋಗಿಗಳು, ಪೋಲೀಸ್‌ನವರು ನಿಕಟವಾಗೇ ಪರಿಚಯ ಆಗಿರಬಹುದು. ಅವರಲ್ಲಿ ನಿಮ್ಮ ಫೇವರೆಟ್ ಅಂದರೆ ಇಬ್ಬರಂತೆ. ಓಹೋ, ಇಲ್ಲಿ ಯಾರು ಬಂದಿದಾರೆ ನೋಡಿ!

(ಪರದೆಯ ಹಿಂದಿನಿಂದ ಪೋಲೀಸ್ ಕಾನ್ಸ್ಟೇಬಲ್ ಚಿನ್ನಪ್ಪ ಮತ್ತು ರೌಡಿ ಪಾಕೆಟ್ ಪ್ರಭು ಬರ್ತಾರೆ. ಪಾಪಣ್ಣ ಎದ್ದು ಇಬ್ಬರನ್ನೂ ತಬ್ಬಿಕೊಳ್ತಾನೆ)

**ಕಾನ್ಸ್ಟೇಬಲ್ ಚಿನ್ನಪ್ಪ** : ಲೋ, ಪಾಪಣ್ಣ, ನಿನಗೆ ಅದೆಷ್ಟು ಸಲ ನಾನು ಬೇಡಿ ಹಾಕಿದೀನೋ, ಅದೆಷ್ಟು ಸಲ ಲಾಕ್‌ಅಪ್‌ನಲ್ಲಿ ಕೂಡಿ ಹಾಕಿದೀನೋ, ನನಗಂತೂ ಜ್ಞಾಪಕವೇ ಇಲ್ಲಪ್ಪ. ಆದರೂ ನನ್ನ ನಿನ್ನ ಸ್ನೇಹಕ್ಕೆ ಇದುವರೆಗೂ ಯಾವ ಧಕ್ಕೇನೂ ಬಂದಿಲ್ಲ, ಅದು ಮುಖ್ಯ. ನಾನು ಇನ್ನೇನು ರಿಟೈರ್ ಆಗ್ತೀನಿ. ನೀನು ಇದೇ ವೃತ್ತೀಲಿ ಮುಂದುವರಿಸ್ತೀನಿ ಅಂದರೆ, ದೇವರು ನಿನಗೆ ಒಳ್ಳೆಯದು ಮಾಡಲಿ.

**ಪಾಪಣ್ಣ** : ಥ್ಯಾಂಕ್ಸ್ ಚಿನ್ನಪ್ಪ. ನೀನು ಹೇಗಿದ್ದೀಯ ಪ್ರಭು? ಯಾವಾಗ ಬಂದೆ ಜೈಲ್‌ನಿಂದ?

**ಪ್ರಭು** : ಒಂದು ವಾರ ಆಯ್ತು, ಪಾಪು. (ವೀಕ್ಷಕರ ಕಡೆ ತಿರುಗಿ) ಸಿಟಿ ಮಾರ್ಕೆಟ್ ಜಾಗಾನ ನನಗೇ ಬಿಟ್ಟುಕೊಟ್ಟ ಸ್ನೇಹಿತ ನಮ್ಮ ಪಾಪಣ್ಣ. ಇದರಿಂದ ನನಗೆ ಒಳ್ಳೇ ಸಂಪಾದನೆ. ಚೆನ್ನಾಗಿ ಬದುಕುತ್ತಿದ್ದೀನಿ. ನನ್ನ ಚಿಕ್ಕ ವಯಸ್ಸಿನಲ್ಲಿ ಸ್ಕೂಲ್‌ಗೆ ಹೋಗಿ ವಿದ್ಯೆ ಪಡೆಯೋಣ ಅಂತ ಇದ್ದೆ. ಆದರೆ, ಪಾಪಣ್ಣ ನನಗೆ ಸರಿಯಾದ ಮಾರ್ಗ ತೋರಿಸಿದ. ಜಾಸ್ತಿ ಓದಿದಷ್ಟೂ ಕೈನಲ್ಲಿ ಕ್ಯಾಶ್ ಕಮ್ಮಿ ಅನ್ನೋ ಸತ್ಯಾಂಶವನ್ನ ನನಗೆ ತಿಳಿ ಹೇಳಿ ಅವನೇ ಖುದ್ದಾಗಿ ನನಗೆ ಪಿಕ್ ಪಾಕೆಟ್ ತರಬೇತಿ ಕೊಟ್ಟ.

**ಪಾಪಣ್ಣ** : ನಿಜ. ನಾನು ಎಗರಿಸಿರೋ ಪರ್ಸ್‌ಗಳಿಂದಲೇ ಪ್ರಭು ಹೇಳಿದ ಸತ್ಯವನ್ನ ಅರಿತುಕೊಂಡೆ. ಓದಿದವರ ಪರ್ಸ್‌ಗಳಲ್ಲಿ ನನಗೆ ಸಿಕ್ತಾ ಇದ್ದಿದ್ದು ಬರೀ ಚಿಲ್ಲರೆ ಹಣ ಅಷ್ಟೆ! ಮನುಷ್ಯನಿಗೆ ಸುಗಮವಾಗಿ ಬದುಕೋಕ್ಕೆ ಹಣ ಮುಖ್ಯ. ಅದನ್ನ ಸಂಪಾದನೆ ಮಾಡೋ ರೀತಿ ಮುಖ್ಯವಲ್ಲ.

(ವೀಕ್ಷಕರಿಂದ ದೊಡ್ಡ ಚಪ್ಪಾಳೆ)

**ಗುಂಡೇಶ್** : ಕೊನೆಯದಾಗಿ, ಪಾಪಣ್ಣನವರೆ ನಮ್ಮ ವೀಕ್ಷಕರಿಗೆ ನಿಮ್ಮದೇನಾದರೂ ಸಂದೇಶವಿದೆಯೆ?

**ಪಾಪಣ್ಣ** : ಇದೆ. ಮೊದಲನೆಯದಾಗಿ, ಮೊಟ್ಟ ಮೊದಲ ಬಾರಿಗೆ ನನ್ನಂತಹವರನ್ನು ನೀವು ಕರೆದು ಸನ್ಮಾನಿಸುತ್ತಿದ್ದೀರ. ನಿಮಗೆ ನನ್ನ ನಮಸ್ಕಾರಗಳು. (ವೀಕ್ಷಕರ ಕಡೆ ತಿರುಗಿ). ನರೇಂದ್ರ ಮೋದಿ ಅವರಿಂದಾಗಿ, ಈಗ ಯಾರ ಪಾಕೆಟ್‌ಗಳಲ್ಲೂ ನಗದು ಹಣವೇ ಇಲ್ಲ, ಎ.ಟಿ.ಎಮ್. ಹತ್ತಿರ ನನಗೆ ಇತ್ತೀಚೆಗೆ ಸಂಪಾದನೆಯೇ ಇಲ್ಲ, ಚಿನ್ನಸ್ವಾಮಿ ಸ್ಟೇಡಿಯಮ್ ಹತ್ತಿರ ಪೋಲೀಸ್‌ನವರು ಜಾಸ್ತಿ ಆಗಿದಾರೆ. ಯಾರ ಪಾಕೆಟ್‌ಗೆ ಕೈ ಹಾಕಿದ್ರೂ ಬರೀ ಪಾನ್ ಕಾರ್ಡು, ಆಧಾರ್ ಕಾರ್ಡು ಸಿಕ್ಕುತ್ತೆ. ನನಗಿನ್ನೂ ಈ ಡಿಜಿಟಲ್ ವಿಷಯ ಅರ್ಥವಾಗಿಲ್ಲ, ಜೀವನ ಕಷ್ಟವಾಗ್ತಿದೆ. ನಿಮ್ಮೆಲ್ಲರಲ್ಲಿ ನಾನು ಬೇಡಿಕೊಳ್ಳೋದು ಇಷ್ಟೆ. ಪಾಕೆಟ್‌ನಲ್ಲಿ, ಪರ್ಸ್‌ಗಳಲ್ಲಿ ಸ್ವಲ್ಪ ಕ್ಯಾಶ್ ಇಟ್ಕೊಂಡು ಓಡಾಡಿ.

**ಗುಂಡೇಶ್ :** ಥ್ಯಾಂಕ್ಯೂ, ಥ್ಯಾಂಕ್ಯೂ, ಥ್ಯಾಂಕ್ಯೂ. ಈಗ ನಮ್ಮ ಪ್ರಾಯೋಜಕರಿಂದ ಪಾಪಣ್ಣನವರಿಗೆ ಗಿಫ್ಟ್ ಹ್ಯಾಂಪರ್‌ಗಳ ವಿತರಣೆ! ಕಟ್ ಸ್ಟ್ರಾಪ್ ಹವಾಯಿ ಚಪ್ಪಲ್ಸ್ ಅವರಿಂದ – ಪಾಪಣ್ಣನ ಸಂಸಾರಕ್ಕೆ ಐದು ಜೊತೆ ಚಪ್ಪಲಿಗಳು, ಪ್ಯೂರ್ ಲೆದರ್ ಪರ್ಸ್ ಅವರಿಂದ – ಲೇಟೆಸ್ಟ್ ಮಾಡೆಲ್ ಗಂಡಸರ ಮತ್ತು ಹೆಂಗಸರ ಪರ್ಸ್‌ಗಳು, ಹಾರ್ಡ್ ಫಿಕ್ಸ್ ಹ್ಯಾಂಡ್ ಕಫ್ ಆಫ್ ಇಂಡಿಯಾ ಅವರಿಂದ – ಹ್ಯಾಂಡ್ ಕಫ್‌ನಿಂದ ಪೋಲೀಸ್‌ಗೆ ಗೊತ್ತಾಗದ ಹಾಗೆ ಕಳಚಿಕೊಳ್ಳೋಕೆ ತರಬೇತಿ ಕೊಡೋ ಕಿಟ್ ಮತ್ತು ಶಾರ್ಪ್ ಬ್ಲೇಡ್ ಎಂಪೋರಿಯಮ್‌ನಿಂದ – ಉಗುರಿನ ಒಳಗೆ ಸಿಕ್ಕಿಸಿಕೊಳ್ಳೋ ಜರ್ಮನ್ ಮೇಕ್ ಬ್ಲೇಡ್ಸ್!

(ಪ್ರಾಯೋಜಕರು ಎಲ್ಲರೂ ವೇದಿಕೆಗೆ ಬಂದು, ಪಾಪಣ್ಣನಿಗೆ ಗಿಫ್ಟ್ ಕೊಟ್ಟು ಹಸ್ತಲಾಘವ ಮಾಡುತ್ತಾರೆ. ಗ್ರೂಪ್ ಫೋಟೋ ತೆಗೆಯುತ್ತಾರೆ.)

ವೀಕ್ಷಕರೇ, ನನ್ನ ನಿಮ್ಮ ಭೇಟಿ ಮತ್ತೊಮ್ಮೆ ಮುಂದಿನವಾರ. ಇದೇ ಗೊಂದಲ ಚ್ಯಾನಲ್‌ನಲ್ಲಿ. ಅಲ್ಲಿಯ ತನಕ.... ಗುಡ್ ಬೈ! ಶುಭರಾತ್ರಿ!!

✸

---

## ಹಲ್ಲಿನ ಪುರಾಣ

ನಮ್ಮ ವೆಂಕಟಲಕ್ಷ್ಮಿಗೆ ಯಾರೂ ಮೂವತ್ತೆರಡು ಹಲ್ಲುಗಳನ್ನು ಉದುರಿಸುತ್ತೇನೆ ಎಂದು ಹೇಳಲು ಸಾಧ್ಯವಾಗುತ್ತಿರಲಿಲ್ಲ. ಅಥವಾ ಕೇವಲ ಮೂವತ್ತೆರಡು ಹಲ್ಲುಗಳನ್ನು ಉದುರಿಸಿದರೆ ಅವಳಿಗೆ ಏನು ನಷ್ಟವೂ ಆಗುತ್ತಿರಲಿಲ್ಲ. ಏಕೆಂದರೆ ಅವಳ "ಅಕ್ಷಯ ಪಾತ್ರೆ" ಯಲ್ಲಿ ಅದೆಷ್ಟು ಹಲ್ಲುಗಳಿವೆ ಎಂಬುದು ಎಣಿಕೆಗೆ ಸಿಗದ ವಿಷಯ. ಅವಳ ಬೃಹದ್ಬಾಯಿಯಲ್ಲಿ ಒಂದರ ಹಿಂದೆ ಒಂದರಂತೆ ಎರಡು ಸಾಲು ಹಲ್ಲುಗಳೂ, ಮಧ್ಯೆ ಕಣಿವೆಯಲ್ಲಿ ಅನೇಕ ಚಿಲ್ಲರೆ ಹಲ್ಲುಗಳೂ ಮನೆಮಾಡಿಕೊಂಡಿದ್ದವು. ಆದರೆ ಇಷ್ಟೂ ಹಲ್ಲುಗಳಿಗೂ ಸಿಕ್ಕಿಕೊಳ್ಳದೇ ಚಕ್ಕರ್ ಹೊಡೆದು ಅವಳ ನಾಲಿಗೆ ಹರಟೆ ಕುಟ್ಟುತ್ತಲೇ ಇತ್ತು. ಹೀಗೆಯೇ ಕೆಲವು ಕಾಲ ಕಳೆದು ಮೇಲೆ ಹಲ್ಲು ಹಲ್ಲುಗಳಿಗೆ ಸ್ಥಳದ ಒತ್ತಡದ ಮೇಲೆ ಭಿನ್ನಾಭಿಪ್ರಾಯ ಬಂದು ಅಕ್ಷಯ ಪಾತ್ರೆಯಲ್ಲಿ ದೊಡ್ಡ ಆಂದೋಲನವಾಯಿತು. ಒಂದೊಂದು ಹಲ್ಲಿಗೆ ನೋವು ಬಂದರೆ ಸಹಿಸುವುದು ಕಷ್ಟ. ಇನ್ನು ವೆಂಕಟಲಕ್ಷ್ಮಿಯ ಐವತ್ತೊಂಭತ್ತು ಚಿಲ್ಲರೆ ಹಲ್ಲುಗಳೂ ಒಟ್ಟಿಗೇ ಕಿರುಗುಡಲು ಪ್ರಾರಂಭಿಸಿದರೆ ಕೇಳಬೇಕೇ? ಆಕೆಯ ಒದ್ದಾಟ ಹೇಳತೀರದು. ನೋವಿನ ಸಿಡಿತಕ್ಕೆ ತಹತಹಿಸಿ ವೆಂಕಟಲಕ್ಷ್ಮಿ ಹೆಂಚಿನ ಮೇಲೆ ಹಾರಿದಳು. ಸರಸರನೆ ಮನೆಯ ಮುಂದಿನ ತೆಂಗಿನ ಮರ ಹತ್ತಿದಳು. ಬಚ್ಚಲು ಮನೆಯ ಒಲೆಯಲ್ಲಿ ಕಾಲು ತೂರಿದಳು. ದೇವರಪಟಗಳಿಗೆ ಮೆಣಸಿನ ಪುಡಿ ಸುರಿದಳು. ಪಕ್ಕದ ಮನೆಯ ನಾಯಿಮರಿಗೆ ಗುರಿಯಿಟ್ಟು ಕಲ್ಲು ಹೊಡೆದಳು. ಮಧ್ಯಾಹ್ನ ಮಲಗಿ ವಿಶ್ರಾಂತಿ ಪಡೆಯುತ್ತಿದ್ದ ಗಂಡ ಶಾಮಯ್ಯನವರ ಮೀಸೆ ಸುಟ್ಟಳು. ಕೊನೆಗೆ ಅವಳು ಬೀದಿಯಲ್ಲಿ ಕಬ್ಬು ಮಾರುತ್ತಾ ಹೋಗುತ್ತಿದ್ದವನನ್ನು ಅಟ್ಟಿಸಿಕೊಂಡು ಹೋಗಿ ಅವನ ಮೈ ಮೇಲೆ ಬಿಸಿ ನೀರು ಸುರಿದ ದಿನ ಅವಳ ಹಲ್ಲುಗಳನ್ನು ಕೀಳಿಸಲೇಬೇಕೆಂದು ಸಂಕಲ್ಪವಾಯಿತು.

*(ಎಚ್.ಕೆ. ರಂಗನಾಥ್ ಅವರ ಹಲ್ಲು ಪ್ರಬಂಧ)*

# ಇಂದಿರಾ ಕ್ಯಾಂಟಿನ್

**- ಎಂ.ಎಸ್. ನರಸಿಂಹಮೂರ್ತಿ**

**ವಿ**ಶ್ವ ವಾಕಿಂಗ್‌ನಿಂದ ಬರುತ್ತಿದ್ದಾಗ ರಸ್ತೆಯ ಒಂದು ಕಡೆ ತಿನ್ನೋ ವಿಷಯಕ್ಕೆ ಜಗಳ ಆಗುತ್ತಿತ್ತು. ತಿನ್ನೋಕ್ಕಾಗಿ ಯಾರೋ ಮರ ಕಡಿಯುತ್ತಿದ್ದರು. ಕೆಲ ಮಂದಿ ಅಲ್ಲಿ ಸೇರಿ ಜಗಳ ಮಾಡುತ್ತಿದ್ದರು.

**ಪೂರಿ ಇಲ್ಲದೆ ಪಲ್ಯ ಚಟ್ನಿ, ಸಾಂಬಾರ್ ಇಲ್ಲದೆ ಇಡ್ಲಿ ಕೊಟ್ಟರೆ ಹೇಗಿರುತ್ತದೆ?**

''ಯಾಕೆ, ಯಾಕೆ ಜಗಳ ಆಗ್ತಾ ಇದೆ ಇಲ್ಲಿ?'' ಎಂದು ವಿಶ್ವ ಕೇಳಿದ. ಅಲ್ಲೊಬ್ಬ ಕಂಟ್ರಾಕ್ಟರ್ ಇದ್ದ. ಅವನು ಅದರ ಬಗ್ಗೆ ವಿವರ ಹೇಳಿದ.

''ನೋಡಿ ಸಾರ್, ಎಲ್ಲರೂ ಸುಲಭ ದರದಲ್ಲಿ ತಿನ್ನಬೇಕು ಅಂತ ಇಂದಿರಾ ಕ್ಯಾಂಟಿನ್ ಶುರು ಮಾಡ್ಬೇಕು.. ಈಗಾಗಲೇ ಸೀಮೆಂಟ್ ಸ್ಲ್ಯಾಬ್‌ಗಳೆಲ್ಲಾ ರೆಡಿಯಾಗಿ ಬಂದುಬಿಟ್ಟಿವೆ.. ಕ್ಯಾಂಟಿನ್ ಬೇಕೋ, ಬೇಡ್ವೋ...? ತಿನ್ನೋಕೆ ಜಾಗ ಬೇಕು. ಈ ಮರ ಕಡೀಲಿಲ್ಲ ಅಂದ್ರೆ ಹೇಗೆ ಸಾರ್ ತಿನ್ನೋಕೆ ಆಗುತ್ತೆ? ವಿಶ್ವನಿಗೆ ಆಶ್ಚರ್ಯ ಆಯಿತು.

''ಅಲ್ಲಪ್ಪ, ಮರ ಬೆಳೆಸಿ, ಮರ ಬೆಳೆಸಿ ಅಂತ ಮರ ತಬ್ಕೊಂಡು ಬಡ್ಕೋತಾ ಇರ್ತೀವಿ, ಮನೆಯವರನ್ನ ತಬ್ಬಿಕೊಳ್ಳೋಕ್ಕಿಂತ ಮರ ತಬ್ಕೊಳ್ಳೋರು ಜಾಸ್ತಿ ಆಗ್ತಿದ್ದಾರೆ. ಇರೋ ಮರಾನ ತಿಂದು ಕ್ಯಾಂಟಿನ್ ಮಾಡಿದ್ರೆ ಯಾವ ದೇವ್ರು ಮೆಚ್ತಾನೆ..?''

''ಆದ್ರೆ ಮರ ಕಡೀಲಿಲ್ಲ ಅಂದ್ರೆ ಈ ಜಾಗದಲ್ಲಿ ತಿನ್ನೋಕೆ ಆಗೋಲ್ಲ ಸಾರ್.. ಕ್ಯಾಂಟಿನ್ ಮಾಡೋಕೆ ಮೂವತ್ತಡಿ - ನಲವತ್ತಡಿ ಜಾಗ ಇದ್ರೂ ಸಾಲೋಲ್ಲ.. ಕ್ಯಾಂಟಿನ್‌ನಲ್ಲಿ ಎಲ್ಲಾ ಚೀಪು ಸಾರ್...'' ಎಂದು ಆತ ಹೇಳಿದಾಗ ವಿಶ್ವ ಯೋಚಿಸುತ್ತಾ ಹೊರಟ. ಮನೆಗೆ ಬಂದಾಗ ವಿಶಾಲು ಮತ್ತೊಂದು ಸುದ್ದಿ ತಂದಿದ್ದಳು.

''ರೀ, ನಾನು 13ನೇ ಕ್ರಾಸ್ ಹತ್ರ ಹೋಗಿದ್ದೆ. ಅಲ್ಲಿ ಏನು ಮಾಡಿದ್ದಾರೆ ಗೊತ್ತಾ..? ಇಂದಿರಾ ಕ್ಯಾಂಟಿನ್‌ಗೆ ಜಾಗ ಅಂತ ಯಾರ್ದೋ ಸೈಟಲ್ಲಿ ಗುದ್ದಲಿ ಹಾಕಿದ್ದಾರೆ.. ಕ್ಯಾಂಟಿನ್ ಅಂತೂ ರೆಡಿಯಾಗಿದೆ ಆಗಲೇ.. ಜಮೀನು ಓನರ್ ಬಂದು ಬಾಯಿ ಬಡ್ಕೊಂಡ.. ಅವನ ಬಾಯಿಗೆ ಕ್ಯಾಂಟಿನ್ ಇಡ್ಲಿ ತುರುಕಿ ಆರು ತಿಂಗಳು ತೆಪ್ಪಗಿರು ಅಂತ ಬಾಯಿ ಮುಚ್ಚಿಸಿದ್ದಾರೆ.. ಎಂದು ವಿಶಾಲು ಹೇಳಿದಾಗ ವಿಶ್ವನಿಗೆ ಆಶ್ಚರ್ಯ.''

''ಅಲ್ಲ, ಯಾರ್ದೋ ಸೈಟಲ್ಲಿ ಹೇಗೆ ಕ್ಯಾಂಟಿನ್ ಕಟ್ತಾರೆ..?''

''ಅದು ಲಿಟಿಗೇಷನ್ ಪ್ರಾಪರ್ಟಿನಂತೆ.. ಸರ್ಕಾರದವರು ವಾಪಸ್ ತಗೋಬೇಕಂತೆ.. ಅಲ್ಲೀವರೆಗೂ ನಡೆದಷ್ಟು ದಿನ ನಡೀಲಿ.. ಎಲೆಕ್ಷನ್‌ವರೆಗೂ ತಾನೇ ಅಂತ ಜಾಗ ತಗೊಂಡಿದ್ದಾರಂತೆ.. ಆ ಓನರ್ ಕೂಡ ಡೂಪ್ಲಿಕೇಟಂತೆ.. ವಿಶ್ವನಿಗೆ ಕ್ಯಾಂಟಿನ್‌ನ ಗಡಿಬಿಡಿ ಅರ್ಥವಾಯಿತು.''

''ಓಹೋ, ಎಲೆಕ್ಷನ್‌ಗೋಸ್ಕರ ಕ್ಯಾಂಟಿನ್ ಮಾಡ್ತಾ ಇದ್ದಾರಾ..? ಚೆನ್ನಾಗಿದೆ.. ಆ

ಕ್ಯಾಂಟಿನ್ ಚಾಲೂ ಆದ ಕೂಡಲೇ ತಿಂದ್ಕೊಂಡು ಬಂದೇ ಬಿಡೋಣ..'' ಎಂದ ವಿಶ್ವ, ಮುಹೂರ್ತ ಇಟ್ಟ

ಆ ದಿನ ಬಂದೇಬಿಟ್ಟಿತು. ಬೆಂಗಳೂರಿನ ಕೆಲವು ಮೂಲೆಗಳಲ್ಲಿ ಇಂದಿರಾ ಕ್ಯಾಂಟಿನ್ ಅದ್ದೂರಿಯಾಗಿ ಶುರುವಾಗಿತ್ತು. ಕಟ್ಟಡಗಳಿಗೆ ಅದ್ಭುತ ರೀತಿಯಲ್ಲಿ ಅಲಂಕಾರ ಮಾಡಿದ್ದರು. ಇಷ್ಟು ಸುಲಭವಾಗಿ ಕಾಂಕ್ರೀಟ್ ಸ್ಲ್ಯಾಬ್‌ಗಳು ಫಿಕ್ಸ್ ಮಾಡಿ ಹೋಟೆಲ್ ನಿರ್ಮಿಸಬಹುದು ಎಂಬ ವಿಷಯ ಬಹಳ ಜನಕ್ಕೆ ಆಶ್ಚರ್ಯ ತರಿಸಿತು.

ವಿಶ್ವ ಮತ್ತು ವಿಶಾಲು ಕ್ಯಾಂಟಿನ್‌ಗೆ ಬಂದರು. ಕೂರಲು ಜಾಗವಿರಲಿಲ್ಲ. ಸೆಲ್ಫ್ ಸರ್ವಿಸ್‌ನಲ್ಲಿ 5 ರೂಪಾಯಿಗೆ ಒಂದು ಪ್ಲೇಟ್ ಟಿಫನ್ ಅನ್ನು ತೆಗೆದುಕೊಳ್ಳಲು ಕ್ಯೂ ನಿಂತರು. ವಿಶ್ವ ಪೂರಿ ಪಲ್ಯ ಮತ್ತು ವಿಶಾಲು ಇಡ್ಲಿ ಸಾಂಬಾರ್ ಕೊಳ್ಳಲು ಟೋಕನ್ ಪಡೆದಳು. ಆದರೆ ವಿಶಾಲುಗೆ ಇಡ್ಲಿ ಮಾತ್ರ ಬಂತು. ಸಾಂಬಾರ್ ಬರಲಿಲ್ಲ.

''ಸಾಂಬಾರ್ ಎಲ್ಲಿ..?''

''ಇಲ್ಲ, ಸಾಂಬಾರ್ ಮಾಡೋ ಭಟ್ಟರು ಬಂದಿಲ್ಲ. ನೆಕ್ಸ್ಟ್ ವೀಕ್ ಡ್ಯೂಟಿಗೆ ಸಾಂಬಾರ್ ಭಟ್ಟರು ಜಾಯಿನ್ ಆಗ್ತಾರಂತೆ, ಅಲ್ಲೀವರೆಗೆ ಸ್ವಲ್ಪ ಅಡ್ಜೆಸ್ಟ್ ಮಾಡ್ಕೊಳ್ಳಿ ಮೇಡಂ..'' ಎಂದು ಹೋಟೆಲ್ ಯಜಮಾನ ಹೇಳಿದ.

''ಅಲ್ಲಪ್ಪ, ಬರೀ ಇಡ್ಲಿ ಹೇಗೆ ತಿನ್ನೋಕ್ಕಾಗುತ್ತೆ..?'' ಎಂದು ವಿಶಾಲು ದಬಾಯಿಸಿದಳು. ಮತ್ತೊಂದು, ವಿಶ್ವನಿಗೆ ಬೇರೆ ರೀತಿಯ ಅನುಭವವಾಯಿತು. ಪೂರಿ ಪಲ್ಯ ಎಂದು ಅವನು ಕೇಳಿದಾಗ ಚಟ್ನಿ ಪಲ್ಯ ಮಾತ್ರ ಅವನಿಗೆ ಕೊಟ್ಟಿದ್ದರು. ಮುಖ್ಯವಾಗಿ ಪೂರಿಯೇ ಮಿಸ್ಸಿಂಗು..!

''ಏನ್ರೀ ಇದು, ಪೂರಿ ಇಲ್ದೇ..? ಬರೀ ಪಲ್ಯ, ಚಟ್ನಿ ಕೊಟ್ರೆ ಹೇಗ್ರಿ..?''

''ಸ್ವಲ್ಪ ವೈಟ್ ಮಾಡಿ ಸಾರ್.. ಎಣ್ಣೆ ಸಪ್ಲೈ ಆಗ್ತಿದೆ.. ಎಣ್ಣೆ ಕಡಿಮೆ ರೇಟ್‌ನಲ್ಲಿ ಕೊಳ್ಳೋಕ್ಕೆ ಟೆಂಡರ್ ಹಾಕಿದ್ದಾರೆ. ಯಾರು ಕಡಿಮೆ ರೇಟಿಗೆ ಸಪ್ಲೈ ಮಾಡ್ತಾರೋ ಅವರಿಂದ ಎಣ್ಣೆ ಬರಬೇಕು ಸಾರ್.. ಎಣ್ಣೇದೇ ಪ್ರಾಬ್ಲಮ್ಮು ಸಾರ್, ಪೂರಿದಲ್ಲ..'' ಎಂದು ಹೋಟೆಲಿನವ ಹೇಳಿದ.

''ಅಲ್ರೀ, ಎಣ್ಣೆ ಇಲ್ಲದೇ ಹೇಗ್ರೀ ಹೋಟೆಲ್‌ನ ಓಪನ್ ಮಾಡಿದ್ರಿ..?'' ಎಂದಾಗ ಅದಕ್ಕೂ ಉತ್ತರ ಸಿದ್ಧವಾಗಿತ್ತು.

''ಸಾರ್, ಈ ಡೇಟ್‌ಗೆ ಹೇಗಾದರೂ ಮಾಡಿ ಹೋಟೆಲ್ ಓಪನ್ ಮಾಡ್ಬೇಕು ಅಂತ ಆರ್ಡರ್ ಇತ್ತು. ಆದ್ದರಿಂದ ಶುರುವಾಗಿದೆ.. ಒಂದು ಕೆಲ್ಸ ಮಾಡಿ, ಹೇಗೂ ನಿಮ್ಹತ್ರ ಪಲ್ಯ ಮತ್ತು ಚಟ್ನಿ ಇದೆ.. ನಿಮ್ಮ ಮನೆಯವರ ಹತ್ರ ಇಡ್ಲಿ ಮಾತ್ರ ಇದೆ.. ನೀವಿಬ್ರೂ ಅಡ್ಜೆಸ್ಟ್ ಮಾಡ್ಕೊಂಡು ತಿಂದುಬಿಡಿ ಸಾರ್, ಹಂಚ್ಕೊಂಡು ತಿಂದ್ರೆ ರುಚಿ ಜಾಸ್ತಿ..'' ಎಂದು ಅವನ ಕೈ ಮುಗಿದ.

ಮೊದಲನೆಯ ದಿನವೇ ಹೀಗಾದ್ರೆ, ಮುಂದೆ ಏನಪ್ಪಾ ಗತಿ.. ಎಂದು ಅನ್ನಿಸಿತು. ಮುಂದೆ ಏನಾಗಬಹುದೆಂದು ವಿಶ್ವ ಯೋಚಿಸಿಲು ಶುರು ಮಾಡಿದ. ಇಡ್ಲಿ ಮತ್ತು ಪಲ್ಯ ತಿಂದು ಮುಗಿಸಿದರು.

''ರೀ, ಇವರು ಕಡಿಮೆ ಬೆಲೆಗೆ ಇಡ್ಲಿ ಮಾರ್ತೀನಿ ಅಂದ್ರೆ ಇಲ್ಲಿಂದ ಹೋಲ್‌ಸೇಲ್ ಆಗಿ ಇಡ್ಲಿ ತಗೊಂಡ್ಹೋಗಿ ಬೇರೆ ಕ್ರಾಸ್‌ಗಳಲ್ಲಿ ಇಟ್ಕೊಂಡು ಐದು ರೂಪಾಯಿ ಇಡ್ಲೀನ ಹತ್ತು ರೂಪಾಯಿಗೆ ಮಾರುವ ದಂಧೆ ಶುರುವಾಗುತ್ತೆ ರೀ..'' ಎಂದಾಗ ವಿಶ್ವನಿಗೆ ಹೌದು ಎನಿಸಿತು.

''ಹೌದೌದು.. ಈಗ ತಿರುಪತಿ ಲಾಡು ಹೊರಗಡೆಗೆ ಐವತ್ತು ರೂಪಾಯಿಗೆ, ನೂರು ರೂಪಾಯಿಗೆ ಮಾರ್ತಾರಲ್ಲ, ಆ ರೀತಿ..'' ಎಂದು ವಿಶ್ವ ಹೇಳಿದ.

''ರೀ, ತಿಂಡೀನೇ ಥರ ಆದ್ರೆ, ಇನ್ನು ಮಧ್ಯಾಹ್ನದ ಊಟ ಹೇಗಿರುತ್ತೆ..? ಬಂದು ನೋಡೋಣ್ವಾ..?''

''ಬೇಡ ಸುಮ್ನಿರಮ್ಮಾ.. ಅಕ್ಕಿ ಬಂದಿದೆಯೋ ಇಲ್ವೋ ಗೊತ್ತಿಲ್ಲ.. ಅವನು ಸಾರು ಬಡಿಸಿ ತಿಂದ್ಕೊಂಡ್ಹೋಗಿ, ನಾಳೆ ಅಕ್ಕಿ ಬರುತ್ತೆ ಅಂದ್ರೆ ಏನು ಮಾಡೋಕ್ಕಾಗುತ್ತೆ..? ಪೂರ್ಣ ಪ್ರಮಾಣದಲ್ಲಿ ಇಂದಿರಾ ಕ್ಯಾಂಟಿನ್ ಶುರುವಾಗಲಿ, ಆಮೇಲೆ ಹೋಗೋಣ..'' ಎಂದು ವಿಶ್ವ ವಿಶಾಲೂಗೆ ಸಮಾಧಾನ ಹೇಳಿದ.

''ಪೂರ್ಣ ಪ್ರಮಾಣದಲ್ಲಿ ಶುರುವಾಗಲಿ ಅಂತ ನಾವು ಕಾಯ್ತಾ ಇರೋಕ್ಕಾಗೋಲ್ಲ ರೀ. ಎಲೆಕ್ಷನ್‌ಗೆ ಮುಂಚೇನೇ ನಾವು ಕ್ಯಾಂಟೀನ್ ಫಂಡ್ಸ್ ತಿಂದು ಮುಗಿಸ್ಬೇಕು.. ಯಾಕೇಂದ್ರೆ ಎಲೆಕ್ಷನ್ ಆದ್ಮೇಲೆ ಇದು ಇರುತ್ತೋ ಇಲ್ಲವೊ ಹೇಗೆ ಹೇಳುವುದು'' ಎಂದು ವಿಶಾಲೂ ನುಡಿದಾಗ ಸತ್ಯಕ್ಕೆ ಹತ್ತಿರವಾದ ಮಾತು ಎಂದು ವಿಶ್ವ ಮುಗುಳ್ನಕ್ಕ.

✷

## ಉಳಿತಾಯ ಹೇಗೆ

ಒಮ್ಮೆ ಒಂದು ಕಂಪನಿಯಲ್ಲಿ ಖರ್ಚು ಕಡಿಮೆ, ಉಳಿತಾಯ ಹೆಚ್ಚು ಮಾಡುವ ವಿಚಾರವಾಗಿ ಸಲಹೆಗಳನ್ನು ಕೇಳಿದರು. ಒಬ್ಬೊಬ್ಬರು ಒಂದೊಂದು ಸಲಹೆ ಕೊಟ್ಟರು. ಕೆಲವರು ಕೊಟ್ಟ ಸಲಹೆ ಹೀಗಿತ್ತು.

ನಮ್ಮ ಸಾಹೇಬರ ಕೋಣೆಗೆ ಹಾಕಿರುವ ಎ.ಸಿ. ತೆಗೆಸಬಹುದು.

ಅವರಿಗೆ ಕೊಟ್ಟಿರುವ ಕಾರನ್ನು ಹಿಂದಕ್ಕೆ ಪಡೆದು ಅವರ ಸ್ಕೂಟರಿನಲ್ಲೇ ಕಛೇರಿಗೆ ಬರುವಂತೆ ತಿಳಿಸುವುದು.

ಸಾಹೇಬರ ಪ್ರವಾಸವನ್ನು ಕಡಿತಗೊಳಿಸಬಹುದು.

ಆದರೆ ಒಬ್ಬ ಕಿಡಿಗೇಡಿ ಹೀಗೆ ತಿಳಿಸಿದ್ದ.....

ಕೆಲಸವನ್ನು ನಾವು ಮಾಡುತ್ತೇವೆ. ಸಾಹೇಬರು ಬರೀ ಸಹಿ ಮಾಡುತ್ತಾರೆ. ಕೆಲಸವನ್ನು ಮಾಡಿದವರೇ ಸಹಿಯನ್ನೂ ಮಾಡಬಹುದು ಎಂದಾದರೆ ಸಾಹೇಬರ ಅವಶ್ಯಕತೆಯೇ ಇರೋದಿಲ್ಲ. ಅವರನ್ನು ಕೆಲಸದಿಂದ ತೆಗೆಯಬಹುದು. ಆಗ ಕಂಪನಿಗೆ ತುಂಬಾ ಉಳಿತಾಯವಾಗುತ್ತದೆ.

ಇಂಥಾ ಸಲಹೆ ಬಂದ ಮೇಲೆ ಆ ಕಂಪನಿಯಲ್ಲಿ ಏನಾಯಿತು ಎಂಬುದರ ಬಗೆಗೆ ವರದಿಗಳಿಲ್ಲ.

# ವ್ಯಂಗ್ಯ ಮೆಲುಕು

**- ಪ್ರಕಾಶ್ ಶೆಟ್ಟಿ**

ಹೆಂಡತಿಯೊಬ್ಬಳು ಮನೆಯೊಳಗಿದ್ದರೆ.... ಶ್ರೀಧರ್, ನಾಗರಾಜ್ ಮತ್ತು ನಾಡಿಗ್ ಅರ್ಧಾಂಗಿಗಳ ಅವಾಂತರ ಹೇಗೆ ಚಿತ್ರಿಸಿದ್ದಾರೆ ನೋಡಿ !




'ನಂಗೆ ಗೊತ್ತಿರಲಿಲ್ಲ ಡಾಕ್ಟ್ರೇ ಅವರು ಮಾರಾಟ ಮಾಡುವುದಕ್ಕಾಗಿ ತಂದಿರಿಸಿದ್ದ ಎಣ್ಣೆಯಲ್ಲಿಯೇ ಈವತ್ತು ಅಡಿಗೆ ಮಾಡಿ ಬಡಿಸಿದೆ!'




"ಅಪ್ಪ ಮಾಡಿದ ಬರೀ ಕಲ್ಲು, ಬೀಜ ಭತ್ತಗಳೇ ಇರೋ ಅನ್ನ ತಿಂದು ಸಾಕಾಗಿಹೋಗಿಬಿಟ್ಟಿದೆ...! ಎಂದಿಗೆ ಮಹಿಳಾ ವರ್ಷ ಮುಗಿಯುತ್ತೋ ಅಂತ ಕಾಯುತ್ತಾ ಇದ್ದೀನಿ......!!"




ನಾನು ಬಸ್ಸಿನಲ್ಲಿ ಹೋಗ್ತೀನಿ - ನೀವು ನಡಕೊಂಡು ಬನ್ನಿ - ಹದಿನೈದು ಪೈಸಾ ಆದ್ರೂ ಉಳಿಸಬಹುದು....

**– ದಂನಆ**

- ಎಲ್ಲ ಲೇಖಕರೂ ಭೈರಪ್ಪ ಆಗಲು ಸಾಧ್ಯವಿಲ್ಲ; ಎಲ್ಲ ವ್ಯಾಪಾರಸ್ಥರೂ ಅಂಬಾನಿ ಆಗಲು ಸಾಧ್ಯವಿಲ್ಲ; ಎಲ್ಲ ನಟರೂ ಅಮಿತಾಬ್ ಬಚ್ಚನ್ ಆಗಲು ಸಾಧ್ಯವಿಲ್ಲ. ನಿಜ. ಆದರೆ ಎಲ್ಲರೂ ಒಳ್ಳೆಯವರು ಆಗಲು ಸಾಧ್ಯ.
- ಸಂತೆಗೆ ಬಂದು 'ಮಲಗೋಕೆ ಆಗ್ತಿಲ್ಲ, ಬರೀ ಗದ್ದಲ' ಅಂದ್ರೆ...
- ವಾಟ್ ಈಸ್ ಯುವರ್ ರೀಸನ್ ಟು ವೇಕ್ ಅಪ್ ಎವೆರಿ ಮಾರ್ನಿಂಗ್?
- ನೀರಿನಿಂದಲೇ ಬೆಳೆ ಆಗದು. ಆದರೆ ನೀರಿಲ್ಲದಿದ್ದರೆ ಒಂದು ಹುಲ್ಲು ಕಡ್ಡಿಯೂ ಬೆಳೆಯುವುದಿಲ್ಲ.
- ಬದುಕು ಒಂದು ಕೊಳಲಿದ್ದಂತೆ. ಅದರಲ್ಲಿ ಅನೇಕ ತೂತುಗಳಿರಬಹುದು. ಒಂದಿಷ್ಟು ಶೂನ್ಯತೆ ಇರಬಹುದು. ಆದರೆ ಎಚ್ಚರಿಕೆಯಿಂದ ನುಡಿಸಿದರೆ ಅದ್ಭುತ ರಾಗಗಳನ್ನು ಹೊರಬರಿಸಬಹುದು.
- ನಮಗಿರುವುದು ಒಂದು ಹೃದಯ, ಒಂದು ಮನಸ್ಸು. ಆದರೆ ಸರ್ಕಾರಿ ನೌಕರಿಯಲ್ಲಿದ್ದರೆ ಎರಡನ್ನೂ ಬಳಸುವುದಿಲ್ಲ.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಇನ್ ನೇಚರ್ಸ್ ಎಕಾನಮಿ ದಿ ಕರೆನ್ಸಿ ಈಸ್ ನಾಟ್ ಮನಿ, ಇಟ್ ಈಸ್ ಲೈಫ್.
- ಎಲ್ಲರ ಕಾಲು ಎಳೆಯುವುದೇ ನಿನ್ನ ಕಸುಬಾದರೆ ನೀನು ಕಾಲ ಬಳಿಯೇ ಇರಬೇಕಾಗುತ್ತದೆ. ಮೇಲೆ ಬರಲು ಸಾಧ್ಯವಾಗುವುದಿಲ್ಲ.
- ರೆಡಿ ಸ್ಟಡಿ ಗೋ.....ಲ್.
- **ಪ್ರಶ್ನೆ :** ಇದೇನು ಪ್ರಶ್ನೆಯೆ? **ಉತ್ತರ :** ಇದು ಉತ್ತರವಾಗಿದ್ದರೆ!
- ತಂತ್ರಜ್ಞಾನಕ್ಕೂ ಗುಲಾಮಗಿರಿಗೂ ಇರುವ ವ್ಯತ್ಯಾಸ ಎಂದರೆ ಗುಲಾಮರಿಗೆ ತಾವು ಸ್ವತಂತ್ರರಲ್ಲ ಎಂಬ ಅರಿವು ಇರುತ್ತದೆ.
- ವೇರ್ ದೇರ್ ಈಸ್ ಎ ವಿಲ್ ದೇರ್ ಈಸ್ ಎ ವೆ.
- ಹಾಸ್ಯ ಪ್ರಜ್ಞೆ ಇಲ್ಲದ ಮನುಷ್ಯ ಸ್ಪ್ರಿಂಗ್ ಇಲ್ಲದ ವಾಹನದಂತೆ; ಸಣ್ಣ ಸಣ್ಣ ಕಲ್ಲುಗಳೂ ಸಹ ಎತ್ತಿ ಹಾಕುತ್ತವೆ.
- ನಾವು ಈಗೀಗ ಬರೀ ಸೆಲ್ಫಿಶ್ ಆಗಿಲ್ಲ, ಸೆಲ್ಫೀ–ಶ್ ಆಗುತ್ತಿದ್ದೇವೆ.
- ದ್ವೇಷ ಎನ್ನುವುದು ಭಯ ಎಂಬುದರ ಪರ್ಯಾಯ ಪದ.

✷

# ಅಪರಂಜಿ ಬಳಗದ ಗುಜ್ಜಾರ್‌ಗೆ ರಾಜ್ಯ ಲಲಿತ ಕಲಾ ಅಕಾಡೆಮಿಯ ಪ್ರಶಸ್ತಿ

**- ನಾಗನಾಥ್ ಗೌರೀಪುರ**



ಗುಜ್ಜಾರ್ ದೇಶಾದ್ಯಂತ ವ್ಯಂಗ್ಯಚಿತ್ರ ಲೋಕದಲ್ಲಿ ಚಿರಪರಿಚಿತ. ಹಾಗೆಯೇ ಅಪರಂಜಿ ಓದುಗರಿಗೂ ಸಹ. ಹತ್ತಾರು ವರ್ಷಗಳಿಂದ ಸಾವಿರಾರು ವ್ಯಂಗ್ಯ ಚಿತ್ರಗಳನ್ನು ಬರೆದರೂ ಅದರ ಕೃಷಿ ಇನ್ನೂ ಅದೇ ಸ್ಪೀಡಿನಲ್ಲಿ ನಡೆಯುತ್ತಲೇ ಇದೆ. ಗುಜ್ಜಾರ್ ಅಷ್ಟು ಫೇಮಸ್ ಆಗಲಿಕ್ಕೆ ಕಾರಣ ಗೊತ್ತೆ? ಮುಖ್ಯವಾಗಿ ಅವರು ಚಿತ್ರಗಳನ್ನು ರಚಿಸುವ ಶೈಲಿ. ಸಾಮಾನ್ಯವಾಗಿ ಇವರ ಗೆರೆಗಳ ಶೈಲಿ ಬಹಳಷ್ಟು ಭಾರತೀಯ ವ್ಯಂಗ್ಯಚಿತ್ರಕಾರರು ರಚಿಸುವಂತೆ ಸರಳವಾಗಿರದೇ ಪಾಶ್ಚಿಮಾತ್ಯರು ಬಳಸುವಂತೆ ಕ್ಲಿಷ್ಟಕರವಾದ ಅಷ್ಟೇ ಪ್ರಮಾಣಬದ್ಧವಾಗಿ ಮತ್ತು ಭಾರತೀಯರ ಸಂಸ್ಕೃತಿಗೆ ತಕ್ಕಂತೆ ಬರೆಯುವುದು! ಹಾಗೆಯೇ ಇವರ ಚಿತ್ರಗಳು ಬರೇ ನೋಡಿ ಆನಂದ ಪಡುವುದಕ್ಕಲ್ಲದೇ ಅಧ್ಯಯನ ಮಾಡುವುದಕ್ಕೂ ಬರೆದಂತಿರುತ್ತವೆ. ಆದರೆ ನಾವೆಲ್ಲಾ ತಿಳಿದಂತೆ ಗುಜ್ಜಾರ್ ಬರೇ ವ್ಯಂಗ್ಯಚಿತ್ರಕಾರರಷ್ಟೇ ಅಲ್ಲ, ಲಲಿತಕಲೆಯಲ್ಲೂ ಸಿದ್ಧ ಹಸ್ತರು! ಇವರ ಎಜುಕೇಶನ್ ಹಿನ್ನೆಲೆ? ಇವರು ಕಲಿತದ್ದು ಎಂ.ಎ.! ಮೇಷ್ಟ್ರಾಗಿ ಪಾಠವನ್ನೂ ಮಾಡಿದ್ದಾರೆ. ಗುಜ್ಜಾರ್ ಸರಳ, ಸ್ನೇಹಜೀವಿ. ಒಮ್ಮೆ ನಾನು, ಅವರು ಕೇರಳಕ್ಕೆ ಕಾರ್ಟೂನ್ ಕಾರ್ಯಕ್ರಮವೊಂದಕ್ಕೆ ಹೋಗಬೇಕಾಗಿತ್ತು. ಅವರಾಗಲೇ ರೈಲು ಹತ್ತಿ ಕುಳಿತಿದ್ದರೂ ನನಗೆ ಸಂಜೆಯ ಟ್ರಾಫಿಕ್‌ನಲ್ಲಿ ಸಿಲುಕಿ ನಾನು ಕುಳಿತಿದ್ದ ಆಟೋರಿಕ್ಷಾ ಸಮಯಕ್ಕೆ ಸ್ಟೇಷನ್ ತಲುಪುವುದು ಅಸಾಧ್ಯವೆಂದು ಅರಿವಾದಾಗ ಅವರಿಗೆ ಫೋನ್ ಮಾಡಿ ''ನೀವು ಹೋಗ್ಬಿನ್ನಿ ಸರ್, ನಾನು ಟ್ರೈನ್ ಮಿಸ್ ಮಾಡ್ಕೊತಿದೀನಿ'' ಎಂದೆ. ಆದರೂ ಸ್ಟೇಷನ್ ಬಳಿಯ ಆಟೋ ಸ್ಟಾಂಡಿನಲ್ಲಿ ರಿಕ್ಷಾದಿಂದ ಇಳಿದಾಗ ಹೊರಗೆ ಗುಜ್ಜಾರ್ ನಿಂತಿದ್ದರು. 'ಏನ್ಸಾರ್ ಇದೂ?' ಎಂದರೆ, 'ನಿಮ್ಮನ್ನ ಬಿಟ್ಟು ನಾನೊಬ್ನೇ ಹ್ಯಾಗೆ ಹೋಗೋದ್ರೀ?' ಎಂದಾಗ ನಾನು ಸುಸ್ತು.

ಇಂಥ ಅಪರೂಪದ, ಸಂಕೋಚದ ಹಾಗೆಯೇ ಅಪ್ರತಿಭ ಕಾರ್ಟೂನ್/ಇಲ್ಲ ಸ್ಟ್ರೇಷನ್/ ಫೈನ್‌ಆರ್ಟ್ಸ್ ಕಲಾವಿದ ಗುಜ್ಜಾರ್‌ಗೆ ವಾರ್ಷಿಕ ಪ್ರಶಸ್ತಿ ನೀಡಿ ರಾಜ್ಯ ಲಲಿತ ಕಲಾ ಅಕಾಡೆಮಿ ಸಾರ್ಥಕ ಕೆಲಸ ಮಾಡಿದೆ. ಎಲ್ಲ ಕಾರ್ಟೂನಿಸ್ಟರ ಪರವಾಗಿ ಗುಜ್ಜಾರ್‌ಗೆ ಅಭಿನಂದನೆಗಳು.

✸

## ಗುರುತು ಹೇಗೆ

ಒಬ್ಬ ಪೋಲೀಸಿನವನು ಒಬ್ಬ ಸರದಾರ್‌ಜಿಗೆ ಕಳ್ಳನ ಚಿತ್ರವೊಂದನ್ನು ತೋರಿಸಿ ಇವನನ್ನು ನೀನು ಹೇಗೆ ಗುರುತು ಹಿಡೀತೀಯ ಅಂತ ಕೇಳಿದ. ಕಳ್ಳನ ಚಿತ್ರ ನೋಡಿ ಸರದಾರಜಿ ಹೇಳಿದ. ತುಂಬಾ ಸಿಂಪಲ್. ಇವನಿಗೆ ಒಂದೇ ಕಣ್ಣಿದೆ. ಪೋಲೀಸು ಸಿಟ್ಟಿನಿಂದ ಅದು ಒಂದು ಪಕ್ಕದಿಂದ ತೆಗೆದಿರೋ ಚಿತ್ರ ಅಂದು ರೇಗಿ ಇನ್ನೊಬ್ಬ ಸರದಾರ್‌ಜಿಗೆ ಕೇಳಿದ. ಅವನು ಇವನಿಗೆ ಒಂದೇ ಕಿವಿ ಇದೆ ಅಂದ. ಅದು ಪೋಲೀಸಿನವನಿಗೆ ಸಿಟ್ಟು ತರಿಸಿತು. ಮೂರನೇ ಸರದಾರ್‌ಜಿನ ಕೇಳಿದ. ಅದಕ್ಕೆ ಅವನು ಈ ಕಳ್ಳ ಕಾಂಟಾಕ್ಟ್ ಲೆನ್ಸ್ ಹಾಕ್ಕೊಂಡಿದಾನೆ ಅಂದ. ಪೋಲೀಸಿಗೆ ಅಚ್ಚರಿ. ರೆಕಾರ್ಡ್ ತೆಗೆದು ನೋಡಿದರೆ ಹೌದು ಕಳ್ಳ ಕಾಂಟಾಕ್ಟ್ ಲೆನ್ಸ್ ಹಾಕ್ಕೊಂಡಿದಾನೆ. ಖುಷಿಯಿಂದ ಪೋಲೀಸಿವನು ನಿನಗೆ ಹೇಗೆ ಗೊತ್ತಾಯ್ತು ಅಂತ ಕೇಳಿದರೆ ಮೂರನೇ ಸರದಾರ್‌ಜಿ ಹೇಳಿದ ತುಂಬಾ ಸಿಂಪಲ್ ಅವನಿಗೆ ಒಂದೇ ಕಣ್ಣಿದೆ. ಆದ್ದರಿಂದ ಕನ್ನಡಕ ಹೇಗೆ ಹಾಕ್ಕೊತಾನೆ ಅಂದಾಗ ಪೋಲೀಸು ಮೂರ್ಛೆಹೋದ.

# ರಿಜಿಸ್ಟರ್ ಮ್ಯಾರೇಜ್

**- ನುಗ್ಗೆಹಳ್ಳಿ ಪಂಕಜ**

(ಮೊದಲನೆ ದೃಶ್ಯ - ಸಾಹೇಬರ ಕೋಣೆ)

**ಸಾ**ಹೇಬರು : (ಗೊಣಗುವರು) ಛೆ, ಎಲ್ಲಿಗ್ ಹೋದ ಆ ಸೋಮಾರಿ ರಾಮ? ಇಷ್ಟು ಹೊತ್ತಾದ್ರೂ ಪತ್ತೆನೇ ಇಲ್ಲ! ದಿನಾ ಟೈಮಿಗ್ ಸರಿಯಾಗಿ ಬರೋವ್ನು - ನಾನು ಆಫೀಸಿಗೆ ಬರೋಹೊತ್ತಿಗೆ ಟೇಬಲ್ಮೇಲೆ ಎಲ್ಲಾ ಪೇಪರ್ಸೂ ರೆಡಿಯಾಗಿರ್ತಿತ್ತು - ನಾನು ಸೈನ್ ಮಾಡೋದೊಂದೇ ಬಾಕಿ.... ಈಗ ಯಾವ್ದನ್ನ ಸೈನ್ ಮಾಡ್ಬೇಕು - ಬಿಡ್ಬೇಕು, ಅನ್ನೋದೇ ನಂಗ್ ಗೊತ್ತಾಗ್ತಿಲ್ವೇ? ಏನ್ಮಾಡೋದು? (ಕರೆಯುವನು) ಲೋ ಸಿದ್ದ, ರಾಮಣ್ಣ ಎಲ್ಲೋ? ಮಿಕ್ಕಿದ ಸ್ಟಾಫ್ ಜೊತೆ ಹರಟೆ ಬಡೀತಾ ಕೂತ್ಬಿಟ್ಟಿದಾನೇಂತ ಕಾಣತ್ತೆ. ಮಾತು, ಮಾತು, ಮಾತು! ಮಾತಾಡ್ತಾ ಇದ್ರೆ, ಪ್ರಪಂಚ ಮುಳುಗಿ ಹೋದ್ರೂ ಗೊತ್ತಾಗಲ್ಲ ಆ ಸೋಮಾರಿಗೆ! ಎಲ್ಲಿದ್ರೂ ಸರಿಯೇ, ಎಳ್ಕೊಂಡ್ ಬಾ - ಸಾಹೇಬ್ರು ವಿಪ್ರೀತ ಸಿಟ್ಟಾಗಿದಾರೆ ಅಂತ ಗಲಾಟೆ ಮಾಡಿ...

ಸಿದ್ದ : ಸಾರ್, ರಾಮಪ್ಪ ಕೆಲಸಕ್ಕೇ ಬಂದಿಲ್ಲ! ಲೀವೋ ಎಂಗೆ?

ಸಾಹೇಬರು : (ಸಿಟ್ಟಿನಿಂದ) ಏನು! ಇನ್ನೂ ಕೆಲಸಕ್ ಬಂದಿಲ್ವೆ! ಇಷ್ಟೊತ್ತಾದ್ರೂ! ಲೀವೂ ಇಲ್ಲ, ಗೀವೂ ಇಲ್ಲ, ಬೇಜವಾಬ್ದಾರಿ ಮನುಷ್ಯ! ಬರ್ಲಿಬರ್ಲಿ, ಮಾಡ್ತೀನಿ ತಿಥೀನ - ಎಲ್ಲಿ, ಎತ್ತು ಆ ಫೋನ್ ಅನ್ನ?

ಸಿದ್ದ : ಸಾರ್ ಸಾರ್, ರಾಮಪ್ಪ ಬಂದ್ರು ಸಾರ್, ಶಾನೆ ಅವಸರವಸರವಾಗಿ ಬರ್ತಿದಾರೆ - ಇಗೋ ನೋಡಿ, ಬಂದ್ರು.

ರಾಮ : (ಏದುತ್ತಾ) - ಹೌದು ಸಾರ್ ಬಂದೆ - ಸಾರಿ ಸಾರ್, ಲೇಟಾಗಿ ಬಂದೆ ವೆರಿವೆರಿ ಸಾರಿ ಸಾರ್..... ಅದು.... ಅದು.... ಅದು....

ಸಾಹೇಬರು : (ರೇಗುವರು) ಏನ್ರಿ ಅದು, ಅದು-ಅದು? ಸಿಕ್ ಹಾಕ್ಕೊಂಡಾಗೆಲ್ಲಾ ನೀವು - ಟಿ.ವಿ. ಪಾತ್ರಗಳು ಅದು... ಅದು... ಅದು ಅಂತ ಹೇಳ್ತಾ ಕಥೆ ಓಡಿಸ್ತಾರಲ್ಲ, ಅದೇ ರೀತೀಲಿ ಹಾರಿಸ್ತೀರಿ! ಏನ್ರೀ ನಿಮ್ಮ ಪ್ರಾಬ್ಲಮ್ಮು? ಯಾಕಿಷ್ಟು ಲೇಟು? ಇಷ್ಟು ವರ್ಷ ಸರ್ವೀಸ್ ಮಾಡಿದೀರಿ, ನಮ್ಮ ಆಫೀಸ್ ಟೈಮ್ ನಿಮಗೆ ಗೊತ್ತಿಲ್ವಾ?

ರಾಮ : ಗೊತ್ತು ಸಾರ್, ಆದ್ರೆ......

ಸಾಹೇಬರು : ಆದ್ರೆ ಏನು? ಬಸ್ ಸಿಗಲಿಲ್ವೆ? ಆಟೋ ಸ್ಟ್ರೈಕೆ? ಬೆಂಗಳೂರು ಬಂದೇ?

ರಾಮ : ನಂಗಿವತ್ತು ಲೀವ್ ಬೇಕು ಸಾರ್......

ಸಾಹೇಬರು : (ಸಿಟ್ಟಿನ ಧ್ವನಿಯಲ್ಲಿ) - ಏನು, ಲೀವಾ! ಎಲ್ಲಾಬಿಟ್ಟು ಇವತ್ತು! ಅಲ್ರೀ, ಇವತ್ತು ಬೋರ್ಡ್ ಮೀಟಿಂಗ್ ಇದೆ ಅನ್ನೋದು ಗೊತ್ತಿಲ್ವೇನ್ರಿ?

ನೀವಿಲ್ದಿದ್ರೆ ನಂಗೆ ಎಷ್ಟು ಕಷ್ಟ ಅನ್ನೋದು ತಿಳಿದಿರ್ಬೇಕಲ್ಲಾ?

ರಾಮ : ಎಲ್ಲಾ ತಿಳಿದಿದೆ ಸಾರ್, ಆದ್ರೆ ಏನ್ಮಾಡ್ಲಿ, ನಾನೀಗ್ಲೆ ಅರ್ಜೆಂಟಾಗಿ ರಿಜಿಸ್ಟ್ರಾರ್ ಆಫೀಸ್‌ಗೆ ಹೊಗ್ಲೇಬೇಕಾಗಿದೆ – ಅಲ್ಲಿ ನಾನು ಕರೆಕ್ಟ್ ಟೈಮ್‌ನಲ್ಲಿ ಸೈನ್ ಮಾಡ್ಬೇಕು, ಇಲ್ದಿದ್ರೆ ಮದುವೆ ನಿಂತ್‌ಹೋಗತ್ತೆ..... ಮತ್ತೆ ಒಳ್ಳೇ ಮುಹೂರ್ತ ನೋಡಿ ಅಪ್ಲಿಕೇಶನ್ ಹಾಕೋ ಹೊತ್ತಿಗೆ ಆಷಾಡಮಾಸ ಬಂದ್ಬಿಡತ್ತೆ......

ಸಾಹೇಬರು : (ಸಂತಸದ ಧ್ವನಿಯಲ್ಲಿ ಉದ್ಗರಿಸುವರು) – ಮ..ದು..ವೆ! ನಿಮಗೆ ಮದ್ವೇನಾ? ಹಾಗೆ ಹೇಳಿ – ಒಂದಿನ ಅಲ್ಲ, ಒಂದು ತಿಂಗಳು ರಜಾನ ಕೊಟ್ಟುಬಿಡ್ತೀನಿ, ವಿತ್ ಸ್ಯಾಲರಿ! ಅಲ್ದೆ, ಪಾಪ, ಹೊಸದಾಗಿ ಮದ್ವೆ ಆದ ಹುಡುಗಿ, ಎಲ್ರಂತೆ ಹನಿಮೂನ್‌ಗೆ ಹೋಗ್ಬೇಕು ಅಂತನ್ಸಲ್ವೆ? ನಂದಿಹಿಲ್ಸ್‌ಗೋ, ಊಟಿಗೋ, ಕೊನೇಪಕ್ಷ ಶ್ರೀರಂಗಪಟ್ಟಣಕ್ಕೋ ಪ್ರಿಯತಮೇನ ಕರ್ಕೊಂಡು ಹೋಗ್ಬನ್ನಿ. ಇಗೋ, ಈಗ್ಲೆ ಕ್ಯಾಶಿಯರ್ಗೆ ಫೋನ್ಮಾಡಿ ಲೋನ್ ಕೊಡಿಸ್ತೀನಿ – ಆಯ್ತಾ? ಯಾಕ್ಸುಮ್ನೆ ನಿಂತಿದೀರಿ, ಕಣ್ ಕಣ್ ಬಿಡ್ತಾ? ಓ, ನಮ್ಮ ಸಾಹೇಬ್ರು ಎಷ್ಟು ಒಳ್ಳೇವ್ರು, ಅಂತ್ಲಾ? ಡೋಂಟ್ ವರಿ, ನೀವು ಮಧುಚಂದ್ರದಿಂದ ಹಿಂತಿರುಗಿದ್ಮೇಲೆ ಒಂದಕ್ ಹತ್ರಷ್ಟು ಕೆಲಸ ತೆಗೀತೀನಿ – ಊ, ಹೊರಡಿ ಮತ್ತೆ, ವಿಶ್ ಯು ಹ್ಯಾಪಿ ಹನಿಮೂನ್ ಮೈ ಬಾಯ್ – ಅರೆ, ಮುಖ್ಯವಾದದ್ದನ್ನೇ ಮರೆತ್ಬಿಟ್ಟನಲ್ಲಾ? ಎಲ್ರೀ ಲಗ್ನಪತ್ರಿಕೆ? ನಾನೂ ಅಮ್ಮಾವ್ರನ್ನ ಕರ್ಕೊಂಡು ಬರ್ತೀನಿ ಸಂಜೆ ರಿಸೆಪ್ಶನ್‌ಗೆ – ಭರ್ಜರಿ ಡಿನ್ನರ್ ಕೊಡ್ತೀರಿ ತಾನೆ? (ಆಲಿಸುತ್ತಾ) ಅರೆರೆ, ಏನಿದು ಗಲಾಟೆ?

ಸಿದ್ದ : (ಆತುರದಿಂದ ಧಾವಿಸಿ ಬಂದು) – ಸಾರ್ ಸಾರ್, ನಮ್ಮ ಆಫೀಸಿನವರೆಲ್ಲ ಅವಸರವಸರವಾಗಿ ಈ ಕಡೇನೇ ಬರ್ತಿದಾರೆ ಸಾರ್, ಹಾರ – ಸ್ವೀಟ್ಸೂ ಎಲ್ಲಾ ಹಿಡ್ಕೊಂಡು.....

ಸಾಹೇಬರು : (ಗಾಭರಿಯಿಂದ) ಹಾರಾ! ಸ್ವೀಟ್ಸು! ನಾನೇನೂ ರಿಟೈರ್ಡ್ ಆಗಿ ಮನೇಗೆ ಹೋಗ್ತಿಲ್ಲಾಪ! ನಂಗಿನ್ನೂ ಹತ್ತು ವರ್ಷ ಸರ್ವೀಸ್ ಇದೆ – ನಾನಿನ್ನೂ ಚಿಕ್ಕವನು! ಬೇಕಾದ್ರೆ ನಮ್ತಾಯೀನ ಕೇಳಿ..... ಜಾತಕ ಅವ್ರ ಹತ್ರ ಇದೆ...

ಸಿದ್ದ : (ಪಿಸುಗುಟ್ಟುವನು) ನಿಮಗೋಸ್ಕರ ಅಲ್ಲಾ ಸಾರ್, ಹಾರ ತುರಾಯಿ ಎಲ್ಲಾ ತರ್ತಿರೋದು – ನಮ್ಮ ರಾಮಪ್ಪಂಗೆ; ಅವರಿಗೆ ಮದ್ವೆ ಅಂತ ನಾನು ತಿಳಿಸಿದ್ದೇ ತಡ, ನನ್ನ ಕೈಲಿ ಹಾರ – ಸ್ವೀಟ್ಸು ಎಲ್ಲಾನೂ ತರ್ಸಿ, ಬರ್ತಿದಾರೆ, ರಾಮಪ್ಪಾಗೆ ಅದೆಂಥಾದ್ದೋ, ಕಂಡೊಲೆನ್ಸ್ ಮಾಡೋದಿಕ್ಕೆ......

ಸಾಹೇಬರು : ಕಂಡೊಲೆನ್ಸ್ ಅಲ್ಲಾ ಕಣೋಪೆದ್ದು, ಕನ್‌ಗ್ರ್ಯಾಜುಲೇಶನ್ಸ್! ಅಗೋ, ಬಂದೇಬಿಡ್ತು, ನಮ್ಮ ಮಂಗ – ಪರಿವಾರ.

ಆಫೀಸಿನವರು: (ಒಳ ಧಾವಿಸಿ ಬರುವ ಶಬ್ಧ – ಸಂಭ್ರಮದಿಂದ ಒಟ್ಟಿಗೆ ಕೂಗುವರು) – ಕನ್‌ಗ್ರ್ಯಾಜುಲೇಶನ್ಸ್! ಕನ್‌ಗ್ರ್ಯಾಜುಲೇಶನ್ಸ್! ಎಲ್ಲಿ ಪಾರ್ಟಿ? ನಾವೆಲ್ಲಾ ರಜಾ ಹಾಕಿ ಬರ್ತಿದೀವಿ ನಿನ್ನ ಮದ್ವೆಗೆ... ಲವ್ ಮ್ಯಾರೇಜೇನೋ? ಘಾಟಿ ಕಣೋ ನೀನು. ಪತ್ತೆಯಿಲ್ದೆ ಲವ್ ಮಾಡಿದೀ? ಯಾರೋ ಆ ಮೋಹನಾಂಗಿ? ಉದ್ದಕ್ಕಿದಾಳೋ ಕುಳ್ಳಗಿದಾಳೋ? ದಪ್ಪಕ್ಕಿದಾಳೋ ಅಥವಾ ಜಾಹಿರಾತ್‌ಗಳಲ್ಲಿ ಬರೋ ಸಣಕಲು ಬ್ಯೂಟೀನೋ? ಓದಿದಾಳೋ ಇಲ್ಲ....

ರಾಮ : (ಜೋರಾಗಿ ಕೂಗುವನು) ಸ್ಟಾಪ್ ಸ್ಟಾಪ್! ಸಾರ್, ನಂಗಲ್ಲ ರಿಜಿಸ್ಟರ್ ಮ್ಯಾರೇಜ್.... ನನ್ನ ಅಪ್ಪಂಗೆ.....

(ಹಾ! ಎಂಬ ಉದ್ಗಾರದೊಡನೆ ಎಲ್ಲರೂ ನಿಶ್ಶಬ್ಧ)

ಸಾಹೇಬರು : (ಅನುತಾಪದ ಧ್ವನಿಯಲ್ಲಿ) – ನಿಮ್ತಾಯಿ ಹೋಗ್ಬಿಟ್ರಾ, ರಾಮ? ಯಾವಾಗ? ಹೇಳ್ಲೇ ಇಲ್ಲ? ತಿಳಿಸಿದ್ರೆ ನಾವೆಲ್ರೂ ಬಂದು ಹೆಣಕ್ಕೆ ಹಾರ ಹಾಕಿ ಕೈಮುಗೀತಿದ್ವಿ..... ಪಾಪ ತುಂಬಾ ಒಳ್ಳೇ ಲೇಡಿ..... ಹೋಳಿಗೇನ ಎಷ್ಟು ಸೊಗಸಾಗಿ ಮಾಡ್ತಿದ್ರು! ಮಾಡಿದಾಗೆಲ್ಲಾ ನಮ್ಮನೆಗೆ ಕಳಿಸ್ತಿದ್ರು – ಇನ್ನಿಲ್ಲದ ಹಾಗೆ ಹೇಳ್ದೆ ಅಮ್ಮಾವರಿಗೆ – ''ಲೇ, ಕಲಿತ್ಕೊಂಡು ಬಾರೆ, ನಂಗೆ ಹೋಳಿಗೆ ತಿನ್ಬೇಕು ಅನ್ನಿಸಿದಾಗೆಲ್ಲ ಮಾಡ್ಕೊಡೆ – ನನ್ನನ್ನ ಅರ್ಧರಾತ್ರೀಲಿ ಎಬ್ಬಿದ್ರೂ ಸ್ವಲ್ಪಾನೂ ಗೊಣಗದೆ, ತಕ್ಷಣ ಕಾರ್ ತೆಗೆದು, ನಿಂಗೆ ಬೇಕಾದ ಹೋಳಿಗೆ ಸಾಮಾನೆಲ್ಲಾ ತಂದುಕೊಡ್ತೀನಿ'' – ಅಂತ. ಆದ್ರೆ, ಇವತ್ತು – ನಾಳೆ ಅಂತ, ಪೋಸ್ಟ್‌ಪೋನ್ ಮಾಡ್ಬಿಟ್ಟಳು. ಅನ್ಯಾಯ.... ಹು, ಹೋಗ್ಲಿ ಬಿಡಿ, ನಾನಷ್ಟೆ ಕೇಳ್ಕೊಂಡು ಬಂದದ್ದು.... ಹಾರ್ಟ್ ಅಟ್ಯಾಕಾ ಏನು?

ರಾಮ : (ಗಾಬರಿಯಿಂದ) ಸಾರ್ ಸಾರ್, ಬಿಡ್ತು ಅನ್ನಿ – ನಮ್ತಾಯಿ ಸತ್ತಿಲ್ಲ ಸಾರ್, ಇನ್ನೂ ಬದುಕಿದಾರೆ.......

ರಾಯರು : (ಅಚ್ಚರಿಯಿಂದ) – ಹೌದಾ! ಇನ್ನಾ ಬದುಕಿದಾರಾ! ಮತ್ತೆ.... ಈ ಎರಡ್ನೆ ಮದ್ವೆ? ಓ, ಓಲ್ಡ್ ಏಜ್ ಲವ್ವು! ಇದೇನ್ ಬಂತೋ ನಿಮ್ ತಂದೆಗೆ ಅಂಥಾ ಅನ್ನಪೂರ್ಣೇನ ಮನೇಲಿ ಇಟ್ಕೊಂಡು ಇನ್ನೊಂದು ಮದ್ವೆ ಮಾಡ್ಕೊಳ್ಳೋಕ್ಕೆ! ಕಾನೂನು ಗೊತ್ತಿಲ್ವೆ?! ಛೆ, ಹೀಗೂ ಉಂಟೆ! ಇದನ್ನೆಲ್ಲಾ ನೋಡ್ಕೊಂಡು ಯಾವ ಹೆಣ್ಣು ತಾನೆ ಸುಮ್ಮನಿರ್ತಾಳೆ? ಓದಿದವಳಾಗಿದ್ರೆ ಖಂಡಿತ ಡೈವೋರ್ಸ್ ಮಾಡೋಳು, ಪೋಲೀಸ್ ಕಂಪ್ಲೆಂಟ್ ಕೊಟ್ಟು, ಜೈಲಿಗೆ ಹಾಕ್ಸೋಳು, ಆದ್ರೆ ಪಾಪ, ಏನೂ ಓದಿಲ್ವಲ್ಲ ನಿಮ್ತಾಯಿ – ಮಹಾತಾಯಿ, ಪಾಪ ಪಾಪ, ಕೆರೆಗೋ ಬಾವಿಗೋ ಬೀಳ್ತಾಳೆ, ನಂಗೊತ್ತು. ಹತ್ತಿರದ ಕೆರೆಗಾದ್ರೆ ಈಗ್ಲೇ ಹೋಗಿ ಬದುಕಿಸ್ಬಹುದು. ಆದ್ರೆ, ಇಲ್ಲೆಲ್ಲೂ ಕೆರೆ–ಬಾವಿ ಒಂದೂ ಇಲ್ಲ, ಬರೀ ಬೋರ್ವೆಲ್‌ಗಳು..... ಇರೋ ಕೆರೆಗಳ್ಮೇಲೆಲ್ಲಾ ಮನೆಗಳನ್ನ ಕಟ್ಬಿಟ್ಟಿದಾರೆ... ಏನ್ಮಾಡ್ತಾರೆ? ಓ, ಕನ್ನಂಬಾಡಿ

ಕಟ್ಟೆಗೆ ಹೋಗಿ ಬಿದ್ದಿಟ್ಟಿರಬೇಕು – ನಾವು ಇಷ್ಟೊಂದು ಜನ ಇದ್ದೂ ಏನ್ ಪ್ರಯೋಜನ? ನೋಡ್ಕೊಂಡು ಸುಮ್ಮನಿರೋದೇ? ಬನ್ನಿ, ನಾವೆಲ್ರೂ ಸೇವ್ ಮಾಡೋಣ.

ಎಲ್ಲರೂ : (ಆತಂಕದಿಂದ ಒಟ್ಟಿಗೆ) ಹೌದು ಸಾರ್, ನಾವೀಗ್ಲೆ ಹೋಗಿ ನಮ್ಮ ರಾಮಣ್ಣನ ತಾಯೀನ ಸೇವ್ ಮಾಡ್ಲೇಬೇಕು – ಹಾಗೇ ಒಬ್ಬ ಡಾಕ್ಟರನ್ನೂ ಕರ್ಕೊಂಡು ಹೋಗೋಣ – ಆಂಬುಲೆನ್ಸ್‌ಗೂ ಫೋನ್ ಮಾಡ್ಬಿಡೋಣ ಬೇಕಾದ್ರೆ, ನಾವೂ ಆ ಆಂಬುಲೆನ್ಸ್‌ನಲ್ಲೇ ಕೂತು ಹೋಗೋಣ, ಆರಾಮವಾಗಿ – ಬನ್ರೋ ಎಲ್ರೂ – ಸಿದ್ದ, ಆಫೀಸಿಗೆ ಬೀಗ ಹಾಕಿ ನೀನೂ ಬಾರೋ.

ರಾಮ : (ಕೂಗಿಕೊಳ್ಳುವನು) ನಿಲ್ಲಿನಿಲ್ರೀ ಎಲ್ರೂ, ನಮ್ತಾಯಿ ಯಾವ ಕೆರೆ – ಬಾವಿ – ಕಟ್ಟೆಗೂ ಬಿದ್ದಿಲ್ಲ ಸಧ್ಯ! ಈಗ ನಮ್ಮ ತಂದೆ ರಿಜಿಸ್ಟ್ರ ಮ್ಯಾರೇಜ್ ಮಾಡ್ಕೊತಿರೋದು, ಬೇರೆ ಯಾರನ್ನೂ ಅಲ್ಲ, ನಮ್ತಾಯಿನೇ. – ಊ ಸಾರ್, ಪತ್ರಿಕೇಲಿ ಈ ಹಿಂದೆ ಬಂದಿರ್ಲಿಲ್ವೆ ಹೊಸಾರೂಲ್ಸು – ಎಲ್ರೂ ಕಡ್ಡಾಯವಾಗಿ ರಿಜಿಸ್ಟರ್ ಮ್ಯಾರೇಜ್ ಮಾಡ್ಕೊಬೇಕು – ಈ ಹಿಂದೆ, ಹಿರಿಯರ ಮುಂದೆ, ಮದ್ವೆ ಆಗಿದ್ದ ವಯಸ್ಕರೂ ಕೂಡ – ಆಗಿನ ಮದ್ವೇನ, ಸಪ್ತಪದೀನ, ನಮ್ಮ ಕಾನೂನು, ಇವ್ನೆಲ್ಲಾ ಗುರುತಿಸೋಲ್ಲ ಅನ್ನೋ ಸುದ್ದಿ? ನಮ್ತಾಯಿ ಅಳ್ತಾ ಕೂತ್ಬಿಟ್ರು. ನನ್ನನ್ನೀಗ್ಲೆ ಕಾನೂನು ರೀತಿ ಮದ್ವೆ ಮಾಡ್ಕೊಬಿಡಿ, ಇಲ್ದಿದ್ರೆ ನಾನು ನಿಮ್ಮ ಮದುವೆ ಟೈ ಇಂದ ನೇಣು ಹಾಕ್ಕೊಂಡು ಬಿಡ್ತೀನಿ ಅಂತ. ಸರಿ, ಇನ್ನೇನ್ಮಾಡೋದು? ಅಪ್ಪ ರಿಜಿಸ್ಟರ್ ಆಫೀಸಿಗೆ ಹೋಗಿದಾರೆ, ತಮ್ಮ ವಧುನ ಕರ್ಕೊಂಡು. ನಾನೀಗ್ಲೆ ಹೋಗಿ ವಿಟ್ನೆಸ್ ಆಗಿ ಸೈನ್ ಮಾಡ್ಬೇಕಾಗಿದೆ. ಇನ್ನೊಬ್ಬ ವಿಟ್ನೆಸ್ ಬೇಕು – ನೀವೂ ಬಂದು ಸೈನ್ ಮಾಡ್ತೀರಾ ಸಾರ್, ಪ್ಲೀಸ್.... ನಾಳೇನೇ ನಮ್ತಾಯಿ ಕೈಲಿ ತುಂಬಾ ಹೋಳಿಗೇನ ಮಾಡ್ಸಿ ತಂದುಕೊಡ್ತೀನಿ.

ಎಲ್ಲರೂ : ನಮ್ಮ ರಾಮಣ್ಣ ಹೇಳೋದು ನಿಜ ಸಾರ್, ಈಗೆಲ್ರೂ ರಿಜಿಸ್ಟರ್ ಮ್ಯಾರೇಜ್ ಮಾಡ್ಕೊತಿದಾರೆ. ಪತ್ರಿಕೇಲಿ ಬಂದಿದ್ದ ಈ ಸುದ್ದೀನ ಓದಿ, ಅಮ್ಮಾವ್ರು ಏನಾರ ಎಡವಟ್ಟು ಮಾಡ್ಕೊಳ್ಳೋಕ್ಕೂ ಮುಂಚೆನೇ ನೀವೂ ಅಮ್ಮಾವ್ರನ್ನ ಕರ್ಕೊಂಡು ಬಂದು, ಒಂದು ಸೈನ್ ಹಾಕೋದು ವಾಸಿ ಸಾರ್. ನೀವಿಬ್ರೂ ಗಂಡ – ಹೆಂಡ್ತಿ ಅಂತ. ನಾವೆಲ್ಲಾ ಆಫೀಸಿಗೆ ಬೀಗ ಹಾಕಿ ಬರ್ತೀವಿ, ವಿಟ್ನೆಸ್ ಆಗಿ ಸೈನ್ ಮಾಡೋಕ್ಕೆ..... ಇಂಥಾ ವಿಷಯಗಳಲ್ಲೆಲ್ಲಾ ತಡಮಾಡ್ಬಾರ್ದು ಸಾರ್. ನಮ್ಮ ರಾಮಣ್ಣನ ಪೇರೆಂಟ್ಸ್‌ನ ನೋಡಿ, ಎಷ್ಟು ಸ್ಮಾರ್ಟು! (ಆಫೀಸಿನವರೆಲ್ಲಾ ಸುತ್ತುಗಟ್ಟಿ ಒತ್ತಾಯ ಮಾಡಲಾರಂಭಿಸಲು, ಸಾಹೇಬರು ಫೋನ್ ತಗೊಂಡ್ರು, ಸಂಭ್ರಮದಿಂದ) ಶಾಂತಾ, ಶಾಂತಾ, ನಾವಿಬ್ರೂ......

ಅಮ್ಮಾವರು : (ಆ ಕಡೆಯಿಂದ) ಏನ್ರಿ ಇದು, ಹೊತ್ತಿಲ್ಲ ಗೊತ್ತಿಲ್ಲ, ಫೋನ್ಮಾಡ್ತಾ ಇದೀರಿ? ನಾನು ನಮ್ಮ ಕಿಟ್ಟಿ ಪಾರ್ಟಿಗೆ ಹೊರಟಿದೀನಿ. ಏನಂದ್ರಿ? ಎಲ್ಲಿ, ಇನ್ನೊಂದ್ಸಲ ಹೇಳಿ? ಏನು, ನಾನು ಮತ್ತೆ ನಿಮ್ಮನ್ನ ಮದ್ವೆ ಆಗ್ಬೇಕಾ! ಗೋವಿಂದ! (ಸಿಟ್ಟಿನಿಂದ) ನಿಮಗೇನಾದ್ರೂ ತಲೆ ಕೆಟ್ಟಿದ್ಯಾ ಏನು? ಒಂದ್ಸಲ ಮದ್ವೆ ಮಾಡ್ಕೊಂಡು ಪಡ್ತಿರೋ ಪಾಡೇ ಸಾಕಾಗಿದೆ! ಇನ್ನು, ಇನ್ನೊಂದ್ಸಲಾನಾ! ಅದೂ ನಿಮ್ಮನ್ನ! ಎಲ್ಲಾಬಿಟ್ಟು ನಿಮ್ಮನ್ನಾ? ಸಧ್ಯ, ಡೈವೋರ್ಸ್ ಮಾಡ್ದೆ ನಿಮ್ಮ ಜೊತೇಲೇ ಇದೀನಲ್ಲಾ ಅಷ್ಟು ವರ್ಷಗಳಿಂದ – ಅದಕ್ ಸಂತೋಷಪಡಿ!

(ಫೋನ್ ಕುಕ್ಕಿದ ಶಬ್ಧ ಆ ಕಡೆಯಿಂದ)

✸

---

## ನಮ್ಮ ಬೆನ್ನು

ಎಷ್ಟೋ ಜನರಿಗೆ ತಮ್ಮ ಬೆನ್ನು ತಮಗೆ ಕಾಣೋದಿಲ್ಲ ಎನ್ನುವ ಮಾತನ್ನು ಕೇಳಿರುತ್ತೇವೆ. ಆದರೆ ತಮ್ಮ ಬೆನ್ನನ್ನು ಆಗಾಗ ತಾವೇ ಕಾಣುತ್ತಿದ್ದವರ ಪೈಕಿ ನಾಡಿಗೇರರೂ ಒಬ್ಬರು. ಅವರು ತಮ್ಮ ಮದುವೆಯ ಬಗೆಗೆ ಹೀಗೆ ಹೇಳಿದ್ದಾರೆ. ಗಾಯದ ಮೇಲೆ ಬರೆ ಎಳೆದಂತೆ ನಮ್ಮ ಸೋದರ ಮಾವ (ಶಕುನಿ ಮಾವನೇ ಎಷ್ಟೋ ವಾಸಿ) ಎಲ್ಲಿಯೂ ಖರ್ಚಾಗದ, ಯಾರೂ ಲಗ್ನವಾಗದ ಒಂದು ವಾರ್ ಕ್ವಾಲಿಟಿ ಪೋಷಕ ಕಲಾ ಪೂರಿತಳಾದ (ಅವನ ಹೇಳಿಕೆಯಂತೆ) ಅವನ ಮಗಳು ಶಾಮಲೆ (ಹೆಸರಿಗೆ ಮಾತ್ರವಲ್ಲ ಬಣ್ಣದಲ್ಲಿಯೂ ಸಹ) ಯನ್ನು ಅಗ್ಗವಾಗಿ ನನಗೆ ಗಂಟು ಹಾಕಲು ನಮ್ಮಜ್ಜಿಯೊಂದಿಗೆ ಪಿತೂರಿ ನಡೆಸಲಾರಂಭಿಸಿದ. ಅಜ್ಜಿ ಒಳ್ಳೆಯ ಮನೆತನ, ಅಂತಃಕರಣ, ಕಟ್ಟೆಯ ಹಲ್ಲು ಕಟ್ಟಿಗೆ ಹಾಕಿದ ಹಾಗೆ ಗೃಹಸ್ಥಾಶ್ರಮ ಮುಂತಾದ ಮಾತಿನ ಮುಂಡಿಗೆಗಳಿಂದ ಮಾಲೆಗಳನ್ನು ಹೆಣೆದು ನನ್ನ ಕೊರಳಿಗೆ ಹಾಕಿ ನನ್ನನ್ನು ಒಪ್ಪಿಸಿದಳು. ಶಾಮಲೆ ವರ್ಷ ವರ್ಷಕ್ಕೆ ತಪ್ಪದೇ ಅವಳಿ ಮಕ್ಕಳನ್ನೂ ಒಂದು ಸಾರಿ ಮೂರು ಮಕ್ಕಳನ್ನೂ ಹೆತ್ತು ತನ್ನ ಸ್ತ್ರೀತ್ವವನ್ನು ಚೆನ್ನಾಗಿ ಪ್ರದರ್ಶಿಸಿದ್ದಾಳೆ. ನಿಮ್ಮದೇ ಒಂದು ಸ್ವಂತ ನಾಟಕ ಕಂಪನಿ ಮಾಡಿಬಿಡಿ ಅದಕ್ಕೆ ನಾಡಿಗೇರ್ ಓನ್ ಡ್ರಾಮಾಟಿಕ್ ಕ್ಲಬ್ ಅಂತಾ ಹೆಸರಿಡಿ ಸಂಪೂರ್ಣ ರಾಮಾಯಣ ನಾಟಕವನ್ನೂ ಸಹ ಆಡಬಹುದು ಎಂದು ಪುಕ್ಕಟೆ ಸಲಹೆ ಕೊಟ್ಟಿದ್ದಾರೆ.

# ಮೂಗಿನ ತುದೀಲಿ ಕೋಪವಿದ್ರೆ...

- ಇ.ಆರ್. ರಾಮಚಂದ್ರನ್

**ಅ**ಜ್ಜಿ ಆಗ ತಾನೆ ಕಾಶಿಯಿಂದ ಬಂದಿಳಿದ್ರು.

''ಅಜ್ಜಿ ಹೇಗಿದೆ ಕಾಶಿ? ಗಂಗೆ ಈಗ ಪೂರ್ತಿ ಕ್ಲೀನಾಯ್ತಾ?''

''ಕ್ಲೀನಾ? ಇನ್ನು ಹತ್ತು ಜನ್ಮ ಕ್ಲೀನ್ ಮಾಡ್ಬೇಕು... ಅಷ್ಟಾದ್ರೂ ಕ್ಲೀನಾಗುತ್ತೇ ಅಂತ ಹೇಳಕ್ಕಾಗಲ್ಲ..''

''ಯಾಕಜ್ಜಿ? ಗವರ್ನಮೆಂಟು ಚೆನ್ನಾಗಿ ದುಡ್ಡು ಸುರೀತಿದಾರೆ...''

''ಅದೆಲ್ಲಾ ಎಲ್ಲಿ ಕೊಚ್ಚಿಕೊಂಡು ಹೋಗುತ್ತೋ ಅಲ್ಲಿರೋ ವಿಶ್ವನಾಥನಿಗೇ ಗೊತ್ತು....''

''ಗಂಗೆನ ಕ್ಲೀನು ಮಾಡಕ್ಕೇಂತ್ಲೆ ಮಿನಿಸ್ಟ್ರನ್ನ ನೇಮಿಸಿದ್ರಲ್ಲಾ ಮೋದಿಯವರು...?''

**ಗಂಗೆ ಕ್ಲೀನೇ ಆಗ್ದಿದ್ರೆ ಏನಾಗುತ್ತೆ ಅಜ್ಜಿ?...**

''ಉಮಾ ಭಾರತಿ ಅಲ್ವಾ? ಆಕೆ ಕೋಪ್ದಿಂದ ಬಾಬ್ರಿ ಮಸೀದಿ ಒಡೆಯೋವ್ರ ಜೊತೆ ನಿಂತ್ಕೊಂಡು ಇಟ್ಟಿಗೆ ಕೀಳ್ಸಿದ್ಲು ಅಂತ ಅವ್ಳ ಮೇಲೆ ಕೇಸಿದೆಯಂತೆ. ಈ ಮಧ್ಯೆ ವೆಸ್ಟ್ ಇಂಡೀಸ್ನ ಹಳೇ ಕ್ರಿಕೆಟ್ ಕ್ಯಾಪ್ಟನ್ ಡಾರೆನ್ ಗಂಗಾ ಅನ್ನೋವ್ನು ಇಂಡಿಯಾಗೆ ಬಂದಿದ್ನಂತಲ್ಲಾ.. ಅವ್ನನ್ನೂ ಗಂಗೇನ ಹೇಗೆ ಕ್ಲೀನ್ ಮಾಡೋದು ಅಂತ ಸಲಹೆ ಕೇಳಿದಾರಂತೆ.... ಒಟ್ನಲ್ಲಿ ಏನೂ ಆಗಿಲ್ಲ ಅಂತ ಇಟ್ಕೊ.''

''ಹಾಗಿದ್ರೆ ಅದೇ ಕೊಳಚೆ, ಕೊಚ್ಚೆ ಅನ್ನು.''

''ಎಷ್ಟೋ ಯುಗದ ಕೊಳಚೆ. ಇಷ್ಟು ಬೇಗ ಹೋಗುತ್ತಾ..... ಅದಿರ್ಲಿ, ನಾನು ಸ್ವಲ್ಪ ದಿನದ ಹಿಂದೆ ಟೀವಿಲಿ ನೋಡ್ತಿದ್ದೆ. ಸಿನಿಮಾ ಇರ್ಬೇಕೂಂತ ಅನ್ಸುತ್ತೆ... ಒಬ್ಬ ಗಡ್ಡದವ ತನ್ನ ಚಪ್ಪಲಿ ತೆಗೆದು ಒಂದೇ ಸಮನೆ ಇನ್ನೊಬ್ಬನಿಗೆ ರಪರಪ ಬಾರಿಸ್ತಿದ್ದ. ಹೊಡೆಸ್ಕೊಂಡವ್ನು ತುಟಿ ಪಿಟಿಕ್ಅನ್ದೆ ಹೊಡೆಸ್ಕೊಳ್ತಿದ್ದ.. ನಿನ್ನ ಕೇಳ್ಬೇಕೂಂತ ಇದ್ದೆ.. ಯಾವ ಸಿನಿಮಾನೊ ಅದು?''

ಅದು ಸಿನಿಮಾ ಅಲ್ಲ ಅಜ್ಜಿ.. ಒಂದೆರೆಡು ತಿಂಗ್ಳ ಕೆಳಗೆ ಅದು ನಡೀತು..! ನೀನು ಗಡ್ಡದವ ಅಂದ್ಯಲ್ಲಾ.... ಆತ ಎಂ.ಪಿ. - ಅವ್ನು ಏರ್ ಇಂಡಿಯಾಲಿ ಕೆಲಸ ಮಾಡೋವ್ನಿಗೆ ಚಪ್ಲಿ ತೊಗೊಂಡು ಇಪ್ಪತ್ತೈದು ಸಲ ಹೊಡೆದ.''

''ಅವನ್ನ ಯಾರು ತಡೀಲಿಲ್ವಾ! ಯಾವುದೋ ಹುಚ್ಚಾಸ್ಪತ್ರೆಯಿಂದ ತಪ್ಪಿಸಿಕೊಂಡು ಬಂದ್ನೋ ಏನು ಕಥೆಯೋ..?''

''ಅಜ್ಜಿ ಅವ್ನು ಹುಚ್ಚ ಅಲ್ಲ, ಅವ್ನು ಎಂ.ಪಿ. ರಾಜಕಾರಿಣಿ!''

''ಸರಿ ಮತ್ತೆ! ಪಿತ್ತ ನೆತ್ತಿಗ್ಹೋದ್ರೆ ರಾಜಕಾರಿಣಿನೂ ಹುಚ್ಚಾನೆ! ಬೇರೆ ಪ್ಯಾಸೆಂಜರ್ಸ್ ಇರ್ತಾರಲ್ಲೋ. ಆ ಚಂಡಾಲನ್ನ ಕಟ್ಟಿ ಹಾಕಿ ಪೋಲಿಸ್ಗೆ ಹಿಡುಕೊಡಬೇಕಾಗಿತ್ತು..''

''ಅಜ್ಜಿ! ಅದೇ ಪ್ರಾಬ್ಲಂ. ಅವನ್ನ ಯಾರೂ ಮುಟ್ಟೋ ಹಾಗಿಲ್ಲ, ಅವನು ಎಂ.ಪಿ.

ಪೋಲೀಸ್ ಕೂಡ ಅವನ ಮೇಲೆ ಕೇಸ್ ಮಾಡೋ ಹಾಗಿಲ್ಲ. ಪ್ಲೇನಿನಲ್ಲಿ ಜಾಗ ಇಲ್ಲ, ನೀನು ಇಳಿ ಅಂತ ಹೇಳಿದಕ್ಕೆ ಹೊಡೆದ.''

''ಸರಿ ಹೋಯ್ತು. ಅದಕ್ಕೆ ಚಪ್ಲೀಲಿ ಹೊಡೆಯೋದಾ? ಹೀಗೆ ಒಬ್ಬೊಬ್ಬ ಎಂ.ಪಿ. ಜನಗಳನ್ನ ತದಕತಾ ಹೋದ್ರೆ ಜನಗಳ ಗತಿಯೇನೋ? ಅವನು ಕೆಲಸ ಮಾಡ್ತಿದ್ದ ಏರ್ ಇಂಡಿಯಾನವರು ಅವನ ಸಪೋರ್ಟಿಗೆ ಯಾರೂ ಬರಲಿಲ್ಲವಾ?''

''ಬಂದ್ರಜ್ಜಿ. ಕೊನೆಗೆ ಎಲ್ಲಾದಕ್ಕೂ ಒಂದೇ ಮಂತ್ರ. ಅವನು ಎಂ.ಪಿ. ಅವನು ಏನು ಬೇಕಾದ್ರೂ ಮಾಡಬಹುದು. ನಮ್ಮ ಲೋಕಸಭೆಯ ಸ್ಪೀಕರ್ ಕೂಡ ಇದೆಲ್ಲಾ ಸಣ್ಣ ವಿಷಯ. ಇದೆಲ್ಲಾ ದೊಡ್ಡು ಮಾಡ್ತಾ ಹೋದ್ರೆ ಚೆನ್ನಾಗಿರಲ್ಲ, ಮುಂದಿನ ಕೆಲಸ ಏನು ನೋಡೋಣ ಅಂದ್ರು.''

ಆ ಮೇಡಮ್ ಹಂಗಂದ್ಲಾ? ಹಾಗಾದ್ರೆ ಪಾರ್ಲಿಮೆಂಟಿನ ಎಂ.ಪಿ.ಗಳೆಲ್ಲಾ ಈಗ ಏನುಬೇಕಾದ್ರೂ ಮಾಡ್ಬಹುದು ಅಂತ ಆಯ್ತು. ಇನ್ನು ಮೇಲೆ ಯಾರ್‍ಯಾರಿಗೆ ಎಷ್ಟು ಅಂತ ಮುಂಚೇನೇ ಡಿಸೈಡ್ ಮಾಡಿಬಿಟ್ರೆ ತಂಟೇನೇ ಇರಲ್ಲ.''

''ಯಾವುದು ಎಷ್ಟು ಅಜ್ಜಿ?''

''ನೋಡೋ.. ಎಂ.ಪಿ. 25 ಸರ್ತಿ ಚಪ್ಪಲೀಲಿ ಹೊಡ್ದ. ಅವನಿಗೆ ಪೋಲಿಸ್ ಏನೂ ಮಾಡ್ಲಿಲ್ಲ. ಹಾಗಾದ್ರೆ ಒಬ್ಬ ಎಂ.ಪಿ. 25 ಸಲ ಚಪ್ಪಲೀಲಿ ಹೊಡೀಬಹುದು ಅಂತ ಆಯ್ತು. ಈಗ ನಮ್ಮ ಎಂ.ಎಲ್.ಎ.ಗಳಿಗೂ ಅನ್ಸಲ್ವಾ? ನಾವೇನು ಕಡಿಮೆ... ನಮ್ಗೂ ಈ ಫೆಸಿಲಿಟಿ ಕೊಡಿ ಅಂತ ಕೇಳೇ ಕೇಳ್ತಾರೆ.. ಎಷ್ಟು ಸರ್ತಿ ನಾವು ತದುಕಬಹುದು ಅಂತ ಕೇಳ್ತಾರೆ... ಡೆಪ್ಯುಟಿ ಮಿನಿಸ್ಟರ್ ಆಗಿದ್ರೆ ಹಾಕಿದ್ದ ಬೂಡ್ಸನಲ್ಲೇ ಒದಿಬಹುದಾ? ಕ್ಯಾಬಿನೆಟ್ ಮಿನಿಸ್ಟರ್ ಒದೀತಾ ಮುಖಕ್ಕೆ ಕ್ಯಾಕರಿಸಿ ಉಗೀಬಹುದಾ? ಇದೆಲ್ಲಾ ಪ್ರಶ್ನೆ ಬಂದೇ ಬರುತ್ತೆ... ಇದೆಲ್ಲವೂ ಇತ್ಯರ್ಥ ಮಾಡಿ ನೀಟಾಗಿ ಎಲ್ಲಾರಿಗೂ ಕಾಣ್ಸೋ ಹಾಗೆ ಫ್ಲೆಕ್ಸಿ ಬೋರ್ಡ್ ಎಲ್.ಇ.ಡಿ. ಲೈಟ್ನಲ್ಲಿ ರೈಲ್ವೆ ಸ್ಟೇಷನ್, ಸರ್ಕಲ್, ಬಸ್ ನಿಲ್ದಾಣದಲ್ಲಿ ತಗಲು ಹಾಕಿ, ವಾಟ್ಸಪ್‌ನಲ್ಲಿ ಹಾಕಿದ್ರೆ ಎಲ್ಲಾರ್ಗೂ ತಿಳಿಯುತ್ತೆ.''

''ಅಜ್ಜಿ ! ಏನು ಹೇಳ್ತಿದ್ಯಾ ನೀನು?''

''ಹೌದೊ! ಇನ್ನೊಂದು ವಿಷಯ. ಪ್ರತಿ ಸರ್ತಿ ಏರ್ ಇಂಡಿಯಾನವ್ನೆ ಚಪ್ಪಲೀಲಿ ಹೊಡೆಸ್ಕೊಬೇಕೂಂತ ಇಲ್ಲ, ಆಮೇಲೆ ಆಡಿಟ್ ಏನೋ ಇದೆಯಲ್ಲ.. ಅದರ ಅಬ್ಜಕ್ಷನ್ ಬರುತ್ತೆ. ನಮ್ಮಲ್ಲಿ ಗವರ್ನಮೆಂಟು ಡಿಪಾರ್ಟ್‌ಮೆಂಟುಗಳು ಎಷ್ಟಿದೆ ನೋಡು. ಕಾವೇರಿ ನಿಗಮ, ಅಬಕಾರಿ, ಪರಪ್ಪನ ಅಗ್ರಹಾರ, ಬಿ.ಬಿ.ಎಂ.ಪಿ., ಎಚ್.ಎ.ಎಲ್., ಪಿ.ಎಮ್.ಒ., ಬಿ.ಇ.ಎಲ್. ಹೀಗೆ ನೂರಾರು ಡಿಪಾರ್ಟ್‌ಮೆಂಟು, ಫ್ಯಾಕ್ಟರಿಗಳು.... ಇನ್ನೊಂದು ಕಡೆ ಸಾವಿರಾರು ಎಂ.ಎಲ್.ಎ., ಎಂ.ಪಿ.ಗಳಿದ್ದಾರೆ. ಈ ಎರಡು ಕಡೇನೂ ಸೇರ್‍ಸಿ ಅನುಕೂಲ ಮಾಡಿಕೊಡೋದು ಒಳ್ಳೆದು ಅನ್ನುತ್ತೆ.''

''ಅಜ್ಜಿ!''

''ಈಗ ನೋಡು.. ಎಜುಕೇಷನ್ ಮಿನಿಸ್ಟ್ರು ಟೀಚರ್ಸ್ ಡೇ ಆಚರಿಸಲು ಸ್ಕೂಲಿಗೆ ಹೋದಾಗ ಮನೇಲಿ ಸಾರಿಗೆ ಉಪ್ಪಿಲ್ದೆ ಊಟ ಮಾಡಿದ್ರೆ ಆತನಿಗೆ ಮೂಗಿನ್ ಮೇಲೆ ಕೋಪ ಇರುತ್ತಲ್ಲಾ... ಅಲ್ಲಿರೋ ಹೆಡ್ ಮಾಸ್ಟರ್‌ಗೆ ಎರಡು ಗುದ್ದಿ ಮೂಲೇಲಿ ಪೀರಿಯಡ್ ಮುಗಿಯೋ ತನಕ ಕುರ್ಚಿ ನಿಂತ್ಕೋ ಅಂತ ಹೇಳ್ಬಹುದು. ಒಳಚರಂಡಿ ಮಿನಿಸ್ಟರು ಫೀಲ್ಡ್ ಇನ್ಸ್‌ಪೆಕ್ಷನ್‌ಗೆ ಹೋದಾಗ ಅವರ ಕಾರು 10 ನಿಮಿಷ ಲೇಟಾಗಿ ಬಂದ್ರೆ ಮೈಯೆಲ್ಲಾ ಉರೀತಿರುತ್ತೆ. ಆಗ ಅಲ್ಲಿರೋ ಚೀಫ್ ಇಂಜಿನಿಯರ್‌ಗೆ ಪ್ಯಾಂಟು, ಷರ್ಟು ಎಲ್ಲಾ ಬಿಚ್ಸಿ ಮೋರಿ ಒಳಗೆ ತಳ್ಳಿ ಕಟ್ಟುಕೊಂಡಿರೋ ಲೈನ್ನ ಸರಿಮಾಡಿ ಅಂತ ಹೇಳ್ಬಹುದು.''

''ಅಜ್ಜಿ! ಯು ಆರ್ ಸೀರಿಯಸ್?''

''ಖಂಡಿತ! ಈ ತರಹ ಮುಂಚೇನೇ ಆಗಿದೆ.''

''ಹೌದಾ?''

''ನಮ್ಮ ಕೆಂಗಲ್ ಹನುಮಂತಯ್ಯ ರೈಲ್ವೇ ಮಂತ್ರಿಯಾಗಿದ್ದಾಗ, ರೈಲ್ವೇ ಬೋರ್ಡ್ ಚೇರ್ಮನ್ ಗಂಗೂಲಿಯವರ ಜೊತೆ ಲಟಾಪಟಿ ಆದಾಗ, ಕೋಪದಲ್ಲಿ ಕೆಂಡಾಮಂಡಲವಾದ ಕೆಂಗಲ್ ಗಂಗೂಲಿ ಹೋಗುತ್ತಿದ್ದ ಎ.ಸಿ. ಕೋಚನ್ನು ಎಂಜಿನ್ನಿಂದ ಕಳಚಲು ಆದೇಶ ಕೊಟ್ಟರು. ಗಂಗೂಲಿಯವರ ಕೋಚ್‌ನ ತ್ರಿಶಂಕುವಾಗಿ ಟ್ರ್ಯಾಕಿನಲ್ಲೇ ಬಿಟ್ಟು ರೈಲು ಮುಂದೆ ಹೊರಟು ಹೋಯ್ತು.''

''ಹಾಗಾದ್ರೆ ಇದು ಮೊದಲಿನಿಂದಲೇ ನಡೀತಿತ್ತು.''

''ಕಣೀಕೇಳು. ಇದೆಲ್ಲಾ ನಡೀದಿದ್ರೆ ಚಪ್ಪಲಿ ಸೇವೆ ಇದ್ದೇ ಇದೆ!''

''ನಿನ್ನ ಥಿಯರಿ ಚೆನ್ನಾಗಿದೆ. ಅಂದ ಹಾಗೆ ಗಂಗೆ ಕ್ಲೀನ್ ಆಗ್ದಿದ್ರೆ ಏನಾಗುತ್ತೆ ಅಜ್ಜಿ?''

''ಏನಿಲ್ಲ. ಕೋಪದಿಂದ ಒಂದು ದಿವ್ಸ ಉಮಾ ಭಾರತೀನೇ ಆ ಕೊಳಚೆ ನೀರಿನ ಪೈಪ್ನ ಅಲ್ಲಿ ಕೆಲಸ ಮಾಡೋ ಚೀಫ್ ಇಂಜಿನಿಯರ್‌ಗೆ ಮುಖಕ್ಕೆ ಬಿಟ್ಟು ಗಂಗಾ ಸ್ನಾನ ಮಾಡಿಸ್ತಾಳೆ ನೋಡ್ಕೊ!''

✷

---

**ಮಂತ್ರಿ**

ನಾವು ಓಟು ಕೊಟ್ಟು
ಗೆಲ್ಲಿಸಿದರೆ
ಅವರು ಆಗುತ್ತಾರೆ
ಮಂತ್ರಿ
ನಂತರ ನಾವು ಅವರನ್ನು
ಕಾಣಬೇಕೆಂದರೆ
ಕಾಯಬೇಕು ಒಂದು
MONTH ರಿe

*– ಸುಕೇಶವ*

# 'ಅದು-ಇದು'ಗಳ ಸುತ್ತ ಮುತ್ತ

- ಎಚ್. ಶಾಂತರಾಜ ಐತಾಳ್

**ಆ**ಗ ಕಡು ಬೇಸಿಗೆಯ ದಿನಗಳು. ಒಂದು ಸಂಜೆ ನಾನು ಮೂರನೇ ಸಲ ಅರ್ಧ ಹಂಡೆ ನೀರು ಖಾಲಿ ಮಾಡುತ್ತಾ ಸ್ನಾನದ ಶಾಸ್ತ್ರ ಮುಗಿಸಿಯಾಗಿತ್ತು. ಇದಕ್ಕಾಗಿ ಸುಬ್ಬಿಯ ಪ್ರಶಂಸಾ ಪತ್ರವನ್ನು ಸ್ವೀಕರಿಸುವ ಮೊದಲೇ ಹೊರಗಿನ ಜಗಲಿಯ ಮೇಲೆ ಕೂತು ಬಿಸಿಗಾಳಿಯ ಬೇಗೆಯನ್ನು ಅನುಭವಿಸುತ್ತಿದ್ದೆ.

ಅಷ್ಟರಲ್ಲಿ 'ಅದು-ಇದು' ಮಾತಿನ ನಿಪುಣ ಬಾಬಣ್ಣನ ಆಗಮನವಾಯ್ತು. ಬಂದವನೇ 'ನಿಮ್ಮ ಇದರಲ್ಲಿ ಇದು ಇದೆಯಾ?' ಅಂತ ಕೇಳಿದ. ನಾನು ಸ್ವಲ್ಪ ಯೋಚನೆ ಮಾಡಿ ಅನಂತರ ಹೇಳಿದೆ. 'ಸ್ವಲ್ಪ ಇದೆ ಬಾಬಣ್ಣ! ಒಂದು ವಾರಕ್ಕೆ ಸಾಕಾದೀತು' ಅಂತ.

ಸುಬ್ಬಿ ಆಗಲೇ ಎರಡು ಲೋಟಗಳಲ್ಲಿ ಅರ್ಧರ್ಧ ಕಾಫಿ ತಂದ ನೆಪದಲ್ಲಿ ನಮ್ಮ ಮಾತುಗಳನ್ನಾಲಿಸಿಯಾಗಿತ್ತು. 'ಏನ್ರಿ ಅದು ಬಾಬಣ್ಣ ಇವತ್ತು ನಿಮ್ಮ ಅದು-ಇದು-ಏನದು?' ಎಂಬ ಪ್ರಶ್ನೆಯೂ ಬಂತು ಅವಳಿಂದ.

'ನನ್ನ ಅಂದಾಜಿನ ಪ್ರಕಾರ ಇವತ್ತು ಬಾಬಣ್ಣ ಕೇಳಿದ್ದು - ನಿಮ್ಮ ಬಾವಿಯಲ್ಲಿ ನೀರಿದೆಯಾ ಅಂತ; ಹೌದು ತಾನೆ ಬಾಬಣ್ಣ' ಎಂದು ನಾನೇ ಸುಬ್ಬಿಗೆ ಬಿಡಿಸಿ ಹೇಳಿದೆ.

'ಕರೆಕ್ಟ್, ಸರ್' ಎಂದು ಬಾಬಣ್ಣ ದನಿಗೂಡಿಸಿದ.

ನಮ್ಮ ಬಾಬಣ್ಣ ಪತ್ರಕರ್ತನಾಗಿದ್ದ ಸಮಯ ಅದು. ರಾಜಕೀಯ ಪುಢಾರಿಗಳೆಲ್ಲ ಆಡುವ ಮಾತಲ್ಲಿ, ಮಾಡುವ ಭಾಷಣಗಳಲ್ಲಿ ಹುರುಳಿಲ್ಲದಿದ್ದರೂ ಅದು-ಇದು; ಅವರೇ-ಇವರೇ; ಇವತ್ತಿನ ದಿನ; ಆ್ಯಕ್ಚುವಲಿ ಇಂತಹ ಜಡ್ಡು ಕಟ್ಟಿದ ಪದಪುಂಜಗಳನ್ನು ಕೇಳುತ್ತಾ, ಕೇಳುತ್ತಾ ಬಾಬಣ್ಣ ಪಳಗಿಯಾಗಿತ್ತು. ನಾನು ಎಷ್ಟೋ ಸಂದರ್ಭಗಳಲ್ಲಿ ಇಂತಹ ಮಾತುಗಳ ಅರ್ಥ ಗ್ರಹಿಸಲಾಗದೆ ಬಾಬಣ್ಣನ ಮೊರೆ ಹೋದದ್ದಿದೆ.

ಒಮ್ಮೆ ಓರ್ವ ಜನಪ್ರತಿನಿಧಿಗಳ ಭಾಷಣ ಕೇಳುವ ದುರ್ದೆಸೆ ನನಗೆ ಒದಗಿ ಬಂದಿತ್ತು. ಮುಂದಿನ ಸಾಲಲ್ಲಿ ಪತ್ರಕರ್ತ ಬಾಬಣ್ಣ ತನ್ನ ನೋಟ್‌ಬುಕ್ ಸಹಿತ ಆಸೀನನಾಗಿದ್ದ. ಭಾಷಣ ಸಾಗಿತ್ತು.

'ಈ ತಿಂಗಳಲ್ಲಿ ಇದು ಜಾಸ್ತಿ ಆದ ಹಾಗೆ ಇದರ ಅಭಾವ ಉಂಟಾಗುವುದು ಸ್ವಾಭಾವಿಕ. ಅದಕ್ಕಾಗಿ ನಮ್ಮ ಪಕ್ಷದವರು ಸರ್ಕಾರದ ವತಿಯಿಂದ ಒಂದು ಇದನ್ನು ಮಾಡಿ ಮುಚ್ಚಿ ಹೋದ ಇದು ಎಲ್ಲೆಲ್ಲಿ ಇದೆಯೋ, ಅಲ್ಲೆಲ್ಲ ಅದರಿಂದ ಇದನ್ನು ತೆಗೆಸಿ, ನಿಮ್ಮೂರಿಗೆ ಯಥೇಚ್ಚ ಇದು ಸಿಗುವಂತೆ ಮಾಡುತ್ತೇನೆ. ಇದರಲ್ಲಿ ಯಾವ ಇದೂ ಬೇಡ. ಅಲ್ಲದೆ ವಿರೋಧ ಪಕ್ಷದವರಿಗೆ ನಾನು ಇದು ಮಾಡಲಿಕ್ಕೆ ಬಿಡುವುದಿಲ್ಲ....'

ಇದನ್ನು ಅರ್ಧಂಬರ್ಧ ಅರ್ಥೈಸಿಕೊಂಡಿದ್ದ ನನಗೆ ಮರುದಿನ ಬಾಬಣ್ಣನ 'ಬುರುಡೆ' ಪತ್ರಿಕೆಯಲ್ಲಿ ವರದಿ ಓದಿದ ಮೇಲೆ ವಿಶದವಾಗತೊಡಗಿತು. ಬಾಬಣ್ಣ ಶಾಸಕರ ಭಾಷಣದ ಬಗ್ಗೆ ಬರೆದ ವರದಿ ಅಚ್ಚರಿ ಮೂಡಿಸುವಂತಿತ್ತು. ''ಈ ತಿಂಗಳಲ್ಲಿ ಬಿಸಿಲು ಜಾಸ್ತಿ ಆದ ಹಾಗೆ

ನೀರಿನ ಅಭಾವ ಉಂಟಾಗಿದೆ. ಅದಕ್ಕಾಗಿ ನಮ್ಮ ಸರ್ಕಾರದಿಂದ ಒಂದು ಯೋಜನೆಯನ್ನು ಹಾಕಿಕೊಂಡು ಪರಿಹಾರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಿದ್ದೇವೆ. ಇಡೀ ರಾಜ್ಯದಲ್ಲಿ ಮುಚ್ಚಿಹೋದ ಜಲಾಶಯಗಳ ಹೂಳನ್ನು ತೆಗೆಸಿ, ನಿಮ್ಮೂರಿಗೆ ಯಥೇಚ್ಛ ನೀರು ಸಿಗುವಂತೆ ಮಾಡುತ್ತೇನೆ. ಇದರಲ್ಲಿ ಯಾವ ಸಂಶಯವೂ ಬೇಡ. ಅಲ್ಲದೆ ವಿರೋಧ ಪಕ್ಷದವರಿಗೆ ಇಲ್ಲಿ ರಾಜಕೀಯ ಮಾಡಲು ನಾವು ಬಿಡುವುದಿಲ್ಲ'' ಎಂಬ ತಾತ್ಪರ್ಯವನ್ನು ಬಾಬಣ್ಣ ನೀಡಿದ್ದ.

ಈ ಸುದ್ದಿಯಿಂದ ಯಾರಿಗೆಲ್ಲ ಸಂತೋಷವಾಯಿತೋ ಗೊತ್ತಿಲ್ಲ. ಅಂತೂ ಹೂಳೆತ್ತುವ ಕಾಮಗಾರಿಗಳಲ್ಲಿ ಇಡೀ ರಾಜ್ಯದಲ್ಲಿ ತನ್ನದೇ ರೀತಿ ನೀತಿಗಳನ್ನು ಸ್ಥಾಪಿಸಿದ ಗುತ್ತಿಗೆದಾರ ಧರ್ಮ ರತ್ನಾಕರ ಪೀತಾಂಬರಂ ಅಂತೂ ಸಂಭ್ರಮಿಸಿರಬೇಕು.

ಈ 'ಅದು-ಇದು' ಒಂದು ಅಂಟುರೋಗದಂತೆ ಎಲ್ಲ ಕ್ಷೇತ್ರಗಳಿಗೂ ವ್ಯಾಪಿಸಿದ ಪರಿಯನ್ನು ನೋಡಿ ನಾನು ದಂಗಾಗಿ ಬಿಟ್ಟಿದ್ದೆ.

ಒಮ್ಮೆ ನಮ್ಮೂರಿನ ಜ್ಯೋತಿಷಿ ಒಬ್ಬರ ಬಳಿ ಹೋಗಬೇಕಾಗಿ ಬಂತು. ಅವರು ನನ್ನನ್ನು ಕೇಳಿದ ಮೊದಲ ಪ್ರಶ್ನೆ - 'ಇದು ತಂದಿದ್ದೀರಾ?' ಅಂತ. ನಾನು 'ದಕ್ಷಿಣೆ ಅಲ್ವಾ ತಂದಿದ್ದೇನೆ' - ಅಂತ ಹೇಳಿ ನೂರರ ಎರಡು ನೋಟುಗಳನ್ನು ಅವರತ್ತ ಚಾಚಿದೆ. ಅವರು ಅದನ್ನು ಕೈಯಿಂದ ಸ್ವೀಕರಿಸದೆ ತಮ್ಮ ಮುಂದಿದ್ದ ತಗ್ಗಿನ ಮೇಜನ್ನು ತೋರಿಸಿದರು. 'ದಕ್ಷಿಣೆ ಹ್ಯಾಗೂ ಆಯ್ತಲ್ಲ - ನಾನು ಕೇಳಿದ್ದು ಇದು ತಂದಿದ್ದೀರಾ ಅಂತ' - ಹೇಳುತ್ತಾ ಅವರು ಗಾಳಿಯಲ್ಲಿ ಚೌಕ ಬರೆದು ಅಕ್ಷರ ಬರೆಯಲೂ ಶುರು ಮಾಡಿದರು.

'ಅಂದ್ರೆ ಜಾತಕವಾ - ತಂದಿದ್ದೇನೆ' ಎಂದು ಹೇಳಿ ನಾನು ತಂದ ಮಾಸಿಹೋದ ಅಕ್ಷರಗಳನ್ನೊಳಗೊಂಡ, ನನ್ನ ಜಾತಕವನ್ನು ಅವರ ಮುಂದಿಟ್ಟೆ. ಎರಡು ಮೂರು ತಿಂಗಳಿಂದ ವ್ಯಾಪಾರದಲ್ಲಿ ಹಿಂದೆಂದಿಗಿಂತಲೂ ಅಧಿಕ ಲುಕ್ಸಾನು ಆಗ್ತಾ ಇರುವುದರ ಪರಿಹಾರ ಕೇಳಲಿಕ್ಕಾಗಿ ನನ್ನ ಚಿಕ್ಕಪ್ಪನ ಜಬರ್ದಸ್ತಿನ ಮೇಲೆ ಈ ಜೋಯಿಸರಲ್ಲಿಗೆ ಬಂದಿದ್ದೆ.

ನನ್ನ ಜಾತಕವನ್ನು ಬಿಡಿಸಿ ನೋಡುತ್ತಾ ಕವಡೆ ಕಾಳುಗಳ ಮಧ್ಯದ ಸೀಳುಗಳ ಮೇಲೆ ಬೆರಳಾಡಿಸುತ್ತಾ ಏನೋ ಗುಣಾಕಾರ ಮಾಡಿದಂತೆ ನಟಿಸಿ, ಜೋಯಿಸರು ನುಡಿದರು - 'ನೋಡಿ, ನಿಮ್ಮ ಇದು ಅಷ್ಟೊಂದು ಸರಿಯಾಗಿಲ್ಲ. ಈ ವರ್ಷವಿಡೀ ಶನಿ ನಿಮ್ಮ ಮೇಲೆ ವಕ್ರದೃಷ್ಟಿ ಬೀರುತ್ತಿದ್ದಾನೆ. ಆದರೆ ಇದಕ್ಕಾಗಿ ನೀವು ಇದು ಮಾಡಬೇಕಾಗಿಲ್ಲ. ದಿನಾ ಬೆಳಗ್ಗೆ ಶನಿ ಸ್ತೋತ್ರದ ಇದು ಮಾಡುತ್ತಾ ಇರಿ. ಪ್ರತಿ ಶನಿವಾರ ಚಿನ್ನದ ಹಣತೆಯಲ್ಲಿ ಇದರ ಎಣ್ಣೆ ಹಾಕಿ ಒಂಟಿ ಬ್ರಾಹ್ಮಣನಿಗೆ ದಾನ ಮಾಡಬೇಕು. ಇದನ್ನು ಎಂಟು ಶನಿವಾರ ಮಾಡಬೇಕು. ಈ ಎಲ್ಲಾ ಇದನ್ನು ನಮ್ಮಲ್ಲೇ ಮಾಡಿಸಬಹುದು. ಇದಕ್ಕಾಗಿ ನೀವು ಹೆಚ್ಚು ಹಣ ಇದು ಮಾಡಬೇಕಿಲ್ಲ. ವಾರಕ್ಕೆ ನಾಲ್ಕೈದು ಸಾವಿರ ಸಾಕೇ ಸಾಕು' ಎಂದು ತೀರ್ಮಾನವಿತ್ತರು. ಚಿನ್ನ, ಹಣ ದಾನ ಇಂತಹ ವ್ಯಾವಹಾರಿಕ ಪದಗಳನ್ನು ಹೊರತುಪಡಿಸಿದರೆ ಉಳಿದೆಲ್ಲ ಮುಖ್ಯವಲ್ಲದ - ಲಾಭದಾಯಕವಲ್ಲದ ಶಬ್ಧಗಳಿಗೆ ಅದು-ಇದು ಪ್ರಯೋಗ ಸರಿಯಾಗಿಯೇ ಇದೆ ಅಂದ್ಕೊಂಡೆ ನಾನು.

ನನ್ನ ಮೂರು ಸೆಂಟ್ಸ್ ಜಾಗದಲ್ಲೊಂದು ಅರಮನೆ ಕಟ್ಟಿಸೋ ಯೋಜನೆ ಹಾಕಿ ಹತ್ತು ಸಂವತ್ಸರಗಳೇ ಉರುಳಿ ಹೋಗಿಯಾಗಿತ್ತು. ಈ ಕೆಲಸ ವಹಿಸಿಕೊಂಡ ಗುತ್ತಿಗೆದಾರ ಬೋಜಣ್ಣ

ಸಹ 'ಅದು-ಇದು'ಗಳ ಸರದಾರ. ಬೇರೆಯವರ ಕೈಲಿ ಕಟ್ಟಿಸೋಣ ಎಂದರೆ ಈ ಪುಣ್ಯಾತ್ಮ ನನ್ನ ಸೈಟಿನಲ್ಲಿ ಆರು ವರ್ಷದ ಹಿಂದೆಯೇ ತಳಪಾಯವನ್ನು ಹಾಕಿಬಿಟ್ಟು ತನ್ನ ಪಾಯವನ್ನು ಭದ್ರಪಡಿಸಿಕೊಂಡು ಬಿಟ್ಟಿದ್ದ. ನನ್ನ ಕನಸಿನರಮನೆಯ ಬಗ್ಗೆ ಬೋಜಣ್ಣನ್ನ ವಿಚಾರಿಸಲು ಇತ್ತೀಚೆಗೆ ಹೋಗಿದ್ದೆ. ಬೋಜಣ್ಣ ನನ್ನ ಮೌಖಿಕ ಅಹವಾಲನ್ನು ಸ್ವೀಕರಿಸಿದ ಮೇಲೆ ತನ್ನ ಅಳಲನ್ನೂ ತೋಡಿಕೊಂಡ - 'ಅದು ಈಗ ಏನಾಗಿದೆ ಅಂದ್ರೆ ಎಲ್ಲ ಕಡೆ ಇದರ ಶಾರ್ಟೇಜ್, ಇದು ಇಲ್ಲದೆ ಮುಂದುವರಿಸೋದು ಹ್ಯಾಗೆ ಹೇಳಿ? ಇನ್ನು ಕೆಲಸಗಾರರ ಇದು ಅಂತೂ ಕೇಳಲೇ ಬೇಡಿ. ಅವರಿಗೆ ಎಷ್ಟು ಇದು ಕೊಟ್ಟರೂ ಇದಿಲ್ಲ. ನೀವು ಸ್ವಲ್ಪದಿನ ಇದು ಮಾಡಿ. ಎಲ್ಲ ಸರಿಯಾಗಬಹುದು' ಎಂದು ಹೇಳುತ್ತಾ ನನ್ನ ಮೊಣಕೈಗೆ 'ಇದ'ನ್ನು ಸವರಿದ!

ಈ ಕತೆಗಳನ್ನೆಲ್ಲ ಬಾಬಣ್ಣನ ಮುಂದೆ ಬಿಚ್ಚಿಟ್ಟೆ. ಕೆಲವು ದಿನಗಳಿಂದ ಬಚ್ಚಿಟ್ಟಿದ್ದ ನನ್ನ ನಗುವನ್ನೂ ಅವನೆದುರು ಬಿಚ್ಚಿಟ್ಟೆ. ಮೊನ್ನೆ ದಿನ ಸಂಜೆ ಬಾಬಣ್ಣ ನಮ್ಮನೆಗೆ ಬಂದಾಗ ನನಗೆ ಹಲ್ಲು ನೋವಿನಿಂದಾಗಿ ದವಡೆ ಬಾತಿತ್ತು. 'ಏನ್ಸಾರ್ ಇದೂ ನಿಮ್ಮ ಇದು ಬಾತಿದೆಯಲ್ಲಾ - ಹನುಮಂತನ ಅವತಾರ ಆಗಿಬಿಟ್ರಿ ನೀವು' ಎಂದು ಛೇಡಿಸಿ, ಅದು-ಇದು ಮಾತಾಡಿದ.

ಆಮೇಲೆ ಆತ ಕೇಳಿದ ಪ್ರಶ್ನೆಗೆ ನಾನು ಬೆಪ್ಪಾದೆ. ಆತ ನಮ್ಮಿಬ್ಬರನ್ನೂ ನೋಡುತ್ತಾ ನನ್ನ ಹಲ್ಲು ನೋವಿಗೆ ಪರಿಹಾರ ಸೂಚಿಸಲಿಕ್ಕೇ ಇರಬೇಕು. ಸುಬ್ಬಿಯ ಬಳಿ ಕೇಳಿದ. 'ಅಂದ ಹಾಗೆ, ಸುಭದ್ರ ಮೇಡಂ ನಿಮ್ಮ ಇದರಲ್ಲಿ ಅದು ಇದೆಯಾ? ಅಂತ. ಅದು-ಇದುಗಳ ಪಾರಂಗತನಾಗಿದ್ದ ನಾನೇ ಉತ್ತರಿಸಿದೆ' - ಹೌದು ಬಾಬಣ್ಣ ಈ ಸಾರಿ ನಮ್ಮ ಬಾವಿಯಲ್ಲಿ ನೀರಿದೆ.

'ಅಯ್ಯೋ ನಾನು ಕೇಳಿದ್ದು ಅದನ್ನಲ್ಲ ಸಾರ್! ಈ ಮಳೆಗಾಲದಲ್ಲಿ ನೀರಿಲ್ಲದೆ ಏನು' ಹೇಳಿ - 'ನಾನು ಕೇಳಿದ್ದು ನಿಮ್ಮ ಬಾತುಹೋದ ಇದನ್ನೇ ಕುರಿತು - ನಿಮ್ಮ ಟೂತ್‌ಪೇಸ್ಟ್‌ನಲ್ಲಿ ಉಪ್ಪು ಇದೆಯಾ - ಅಂತ' ಎಂದು ವಿವರಣೆ ನೀಡಿದಾಗ ನಾವಿಬ್ಬರೂ ಕಕ್ಕಾಬಿಕ್ಕಿ!

✸

## ೫ರ ಮಹತ್ವ

ನಿನ್ನೆ ನನಗೆ ಬಿದ್ದ ಕನಸಿನಲ್ಲಿ ೫ನೇ ನಂಬರ್ ಪದೇ ಪದೇ ಕಾಣಿಸಿಕೊಂಡಿತು. ಇದೇ ನನ್ನ ಅದೃಷ್ಟ ಸಂಖ್ಯೆ ಎಂದು ಭಾವಿಸಿದೆ. ಐದು ಇಡ್ಲಿ ತಿಂದೆ, ಐದು ಲೋಟ ನೀರು ಕುಡಿದೆ, ಪೂರ್ತಿ ಐದು ನಿಮಿಷ ಸ್ನಾನ ಮಾಡಿದೆ, ಬೀರುವಲ್ಲಿದ್ದ ಶರ್ಟಿನ ರಾಶಿಯಲ್ಲಿ ಐದನೆ ಶರ್ಟ್ ತೆಗೆದು ಧರಿಸಿದೆ, ಸ್ಕೂಟರ್ ಬಳಿ ಐದು ನಿಮಿಷ ನಿಂತು ರೇಸ್ ಕೋರ್ಸಿಗೆ ಹೊರಟೆ, ಐದನೆ ಸಾಲಿನಲ್ಲಿ ಗಾಡಿ ನಿಲ್ಲಿಸಿದೆ, ಐದನೆ ಕೌಂಟರ್‌ನಲ್ಲಿ ೫ನೇ ರೇಸಿನ ೫ನೇ ಕುದುರೆಯ ಮೇಲೆ ರೂ.೫೫೫/- ಕಟ್ಟಿದೆ.

ನಂತರ ಫಲಿತಾಂಶ ಬಂದಿತು. ನನ್ನ ಕುದುರೆಗೆ ೫ನೆಯ ಸ್ಥಾನ ಬಂದಿತ್ತು.